TIGHT BINDING BOOK

UNIVERSAL LIBRARY
OU_198707
UNIVERSAL LIBRARY

**OSMANIA UNIVERSITY LIBRARY**

Call No. K801 S62S Accession No. K 3935

Author [illegible]

Title [illegible]

This book should be returned on or before the date last marked below.

ವಿದ್ಯಾರ್ಥಿ ಗ್ರಂಥಮಾಲಾ-೨.

# ಸರ್ವಜ್ಞ ಮೂರ್ತಿ

(ಕವಿ-ಕಾವ್ಯ ವಿಮರ್ಶೆ)

ಬರೆದವರು:
ಆಸ್ಥಾನವಿದ್ವಾನ್, ಪಂಡಿತರತ್ನಂ, ಕೀರ್ತನಾಚಾರ್ಯ
**ಬ. ಶಿವಮೂರ್ತಿಶಾಸ್ತ್ರೀ.**

ಪ್ರಕಾಶಕರು:
ವಿದ್ಯಾರ್ಥಿ ಪ್ರಕಟನ ಮಂದಿರ,
ಬಳೇಪೇಟೆ, ಬೆಂಗಳೂರು-೨.
೧೯೫೦

ವಿದ್ಯಾರ್ಥಿ ಗ್ರಂಥಮಾಲಾ-೨.

# ಸರ್ವಜ್ಞ ಮೂರ್ತಿ

(ಕವಿ-ಕಾವ್ಯ ವಿಮರ್ಶೆ)

ಬರೆದವರು:

ಆಸ್ಥಾನವಿದ್ವಾನ್, ಪಂಡಿತರತ್ನಂ, ಕೀರ್ತನಾಚಾರ್ಯ

**ಬ. ಶಿವಮೂರ್ತಿಶಾಸ್ತ್ರೀ.**

ಪ್ರಕಾಶಕರು:

ವಿದ್ಯಾರ್ಥಿ ಪ್ರಕಟನ ಮಂದಿರ,

ಬಳೇಪೇಟೆ, ಬೆಂಗಳೂರು-೨.

೧೯೫೦

ಮುದ್ರಕರು:
ಸ್ವತಂತ್ರ ಕರ್ಣಾಟಕ ವಿದ್ಯುನ್ಮುದ್ರಣಾಲಯ
೧೬೪. ರಂಗಸ್ವಾಮಿಗುಡಿಬೀದಿ
ಬಳೇಪೇಟೆ, ಬೆಂಗಳೂರು ೨.

[ಎಲ್ಲ ಹಕ್ಕುಗಳೂ ಗ್ರಂಥಕರ್ತರವು]

ಮೊದಲನೆ ಮುದ್ರಣ : ೧೫೦೦ ಪ್ರತಿಗಳು.

ಸಾದಾಪ್ರತಿ: ೧-೦-೦
ಉತ್ತಮ ಪ್ರತಿ: ೧-೪-೦



ಕನ್ನಡಜಾಣ ಸರ್ವಜ್ಞಮೂರ್ತಿ

# ವಿಷಯ ಸೂಚಿಕೆ

೧. ಅರಿಕೆ

೨. ಸಮರ್ಪಣ

೩. ಪ್ರಸ್ತಾವನೆ

೪. ಸರ್ವಜ್ಞಮೂರ್ತಿ ೧–೫೦

೧. ಸರ್ವಜ್ಞ ಕವಿಗಳು ೨
೨. ಸರ್ವಜ್ಞ ನಾಮ ವಿಚಾರ ೩
೩. ಜೀವನ ಚರಿತ್ರೆ ೬
೪. ಹೆಸರಿನ ವಿಚಾರ ೯
೫. ಅಂಕಿತದ ವಿಚಾರ ೧೦
೬. ಸರ್ವಜ್ಞನ ಕಾಲ-ಛಂದಸ್ಸು ೧೧
೭. ತ್ರಿಪದಿಯ ಲಕ್ಷಣ ೧೨
೮. ಕವಿಯ ಜಾಣ್ಮೆ ೧೪
೯. ಸರ್ವಜ್ಞನ ವಿಶಿಷ್ಟತೆ ೧೫
೧೦. ಸರ್ವಜ್ಞನ ಶೈಲಿ ೧೬
೧೧. ಸರ್ವಜ್ಞನ ಕವನಶಕ್ತಿ ೧೬
೧೨. ಸರ್ವಜ್ಞನಿಗೆ ಶಾಸ್ತ್ರಜ್ಞಾನವಿತ್ತೆ ? ೧೭
೧೩. ರಾಮಾಯಣ-ಭಾರತದ ನಿಂದಕನಲ್ಲ ೧೮
೧೪. ಹೀನೋಪಮೆಗಳು ೧೯
೧೫. ವಚನಕಾರರೂ ಸರ್ವಜ್ಞನೂ ೨೦
೧೬. ಕವಿಯು ವಿರಕ್ತನು ೨೧
೧೭. ಸರ್ವಜ್ಞನು ಸಂಸಾರಿಯೆ ? ೨೨
೧೮. ಸರ್ವಜ್ಞನು ರಾಮಭಕ್ತನೆ ? ೨೩
೧೯. ಸ್ವಾತಂತ್ರ್ಯಪ್ರಿಯ ೨೭
೨೦. ಕ್ರಾಂತಿಕಾರಕ ಕವಿ ೨೮

೨೧. ಕಾವ್ಯಾಭ್ಯಾಸ, ಶಿಕ್ಷಣಪದ್ಧತಿ ೩೫

೨೨. ತತ್ವವಿಚಾರ ೩೮

೨೩. ಸಾಮಾಜಿಕ ವಿಚಾರ ೪೦

೨೪. ರಾಷ್ಟ್ರ ವಿಚಾರ ೪೨

೨೫. ಸಂಸ್ಕೃತ-ಕನ್ನಡ ವಿಚಾರ ೪೪

೨೬. ವೈದ್ಯವಿಚಾರ ೪೪

೨೭. ಆಹಾರಗಳ ಪರಿಣಾಮ ೪೫

೨೮. ಕರ್ಣಾಟಕವನ್ನು ಕುರಿತು ೪೭

೫. ಸರ್ವಜ್ಞ ವಚನಗಳು ೫೧–೬೪

೧. ಗುರುವನ್ನು ಕುರಿತು ೫೩

೨. ದೇವರನ್ನು ಕುರಿತು ೫೪

೩. ಆತ್ಮಶುದ್ಧಿ ಬೇಕು ೫೪

೪. ದಾನಧರ್ಮಗಳು ೫೫

೫. ಸ್ವಾತಂತ್ರ್ಯದ ಹಿರಿಮೆ ೫೫

೬. ಸಜ್ಜನ-ದುರ್ಜನ ೫೭

೭. ಉದಾರಭಾವ ,,

೮. ಇಂದ್ರಿಯ ನಿಗ್ರಹ ,,

೯. ಸ್ತ್ರೀಜಾತಿ ೫೮

೧೦. ಸರ್ವಜ್ಞನ ಸಾಹಿತ್ಯದೃಷ್ಟಿ ೬೦

೬. ಸರ್ವಜ್ಞ ವಚನಾಮೃತ ೬೫–೭೨

೭. ಅನುಬಂಧ I–X

೧. ಸರ್ವಜ್ಞನನ್ನು ಕುರಿತು ಮಾನ್ಯರ ಅಭಿಪ್ರಾಯಗಳು I-VIII

೨. ಕೆಲವು 'ಸರ್ವಜ್ಞ'ಗಳು IX-X

ಸರ್ವಜ್ಞ ಮೂರ್ತಿ



ಮೈಸೂರು ಸರ್ಕಾರದ
ರೆವಿನ್ಯೂ ಮತ್ತು ಮುಜರಾಯಿ ಮಂತ್ರಿವರ್ಯರಾದ
**ಮಾನ್ಯ ಶ್ರೀ ಎಚ್. ಸಿದ್ದಯ್ಯ,** ಬಿ.ಎ., ಎಲ್.ಎಲ್.ಬಿ., ರವರು.

# ಅರ್ಪಣ

**'ಸರ್ವಜ್ಞಮೂರ್ತಿ'**

ಎಂಬ ಕವಿ-ಕಾವ್ಯ ವಿಮರ್ಶಾತ್ಮಕವಾದ ಈ ಗ್ರಂಥವನ್ನು
ಕನ್ನಡನಾಡು-ನುಡಿಗಳ ಅಭಿಮಾನಿಗಳೂ, ವಿದ್ಯಾರ್ಥಿಗಳ
ಹಿತಚಿಂತಕರೂ, ಮೈಸೂರಿನ ಮಾನ್ಯ ಮಂತ್ರಿಗಳೂ ಆದ
**ಶ್ರೀ ಎಚ್. ಸಿದ್ದಯ್ಯ**, ಬಿ.ಎ ,ಎಲ್ ಎಲ್.ಬಿ.,
ಅವರ ಸನ್ನಿಧಿಗೆ ಅರ್ಪಣ.

**—ಪ್ರಕಾಶಕ.**

# ಶುದ್ಧಾಶುದ್ಧ

| | | | |
|---|---|---|---|
| ೪ | ೮ | ಸಂದರ್ಭವ | ಸಂದರ್ಭವನ್ನು |
| ೧೫ | ೮ | 'ಕುರುಳ್' | 'ಕುರಳ್' |
| ೧೬ | ೧೯ | 'ನಾಋಷಿಃ....ಕಾವ್ಯಂ' | 'ನಾನೃಷಿಃ....ಕಾವ್ಯಂ' |
| ೨೧ | ೧೭ | ಪಂಜ್ತಿ | ಪಜ್ತಿ |
| ೨೫ | ೨೫ | ಪ್ರಸ್ಥಾವನೆ | ಪ್ರಸ್ತಾವನೆ |
| ೨೬ | ೨೩ | ಅನೇಕ ದೃಷ್ಟಿಯಿಂದ | ಅದೇ ದೃಷ್ಟಿಯಿಂಬ |
| ೨೮ | ೧೭-೧೯ | ಬೆಳೆಸಿದವರು | ಬಳೆಸಿದವರು |
| ೩೨ | ೧೦ | ಉಸಿರಿದ್ದಾನೆ | ಉಸುರಿದ್ದಾನೆ |
| ೩೩ | ೨೨ | ಹೇಳಿದರೆ ದೇವರು | ಹೇಳಿದರೆ ಸಾಕು. ದೇವರು |
| ೩೩ | ೨೫ | ತೆಗೆಸುವದೊಂದು | ತೆಗೆಸುವುದೊಂದು |
| ೩೪ | ೯ | ಕೊಂಡಾಡಿರುವದಾಗಿ | ಕೊಂಡಾಡಿರುವುದಾಗಿ |
| ೩೬ | ೧೪ | ಹುಟ್ಟಿದ | ಹುಟ್ಟಿದ |
| ೩೭ | ೧೨ | ಗಟ್ಟಿಯಾಗಿ | ಘಟ್ಟಿಯಾಗಿ |
| ,, | | ವ್ಯಾಪಾರ ಮಾಡುವದನ್ನು | ವ್ಯಾಪಾರ ಮಾಡುವುದನ್ನು |
| ,, | ೧೯ | ಎತ್ತುಗಳನ್ನೆಲ್ಲಾ | ಎತ್ತುಗಳೆಲ್ಲಾ |
| ೩೯ | ೨೫ | ನ್ಯೂನತೆ | ಶೂನ್ಯತೆ |
| ೪೨ | ೧೦ | ಬದುಕವ | ಬದುಕುವ |
| ,, | ೧೨ | ಪರಿಸ್ಥಿತಿಗನುಣವಾಗಿ | ಪರಿಸ್ಥಿತಿಗನುಗುಣವಾಗಿ |
| ,, | ೧೪ | ಇದು ಪರತಂತ್ರ ದಲ್ಲಿರುವವರೆಗೆ | ನಾವು ಆರ್ಥಿಕ ಪರತಂತ್ರದಲ್ಲಿರುವವರೆಗೆ |
| ೪೫ | ೯ | ಮಗ್ನರಾಗಿಸುತ್ತಾರೆ | ಮಗ್ನರಾಗಿರುತ್ತಾರೆ |

| | | | |
|---|---|---|---|
| ೪೬ | ೮ | ಬಹಕಾಲ | ಬಹುಕಾಲ |
| ೪೭ | ೨೦ | ವೈಶಿಷ್ಯವನ್ನು | ವೈಶಿಷ್ಟ್ಯವನ್ನು |
| ೪೮ | ೪ | ಮಡಿಕದ್ದ | ಮಡಿಕುದ್ದ |
| | ೨೧ | ಸತ್ಯವೂ | ಪಥ್ಯವೂ |
| ೫೨ | ೮ | ಶೇಖರನವರಿಂದ | ಶೇಖರನ ವರದಿಂದ |
| ೬೧ | ೬ | ಅನ್ನದೇವರು (ಶಿವ) | ಅನ್ನದೇವರು (ಪ್ರಸಾದ) |
| ೬೬ | ೨೧ | ಗೊತ್ತುಗೆ ಕೊಟ್ಟುಪದೇಶ | ಗೊತ್ತುಗೆಟ್ಟುಪದೇಶ |
| ೬೮ | ೨೦ | ಸುಂದರಿವನರಿದ | ಸಂದರಿವನರಿದ |
| ೭೨ | ೭ | ನಂಬಿದರಿತಿರಬೇಕು | ನಂಬಿದಂತಿರಬೇಕು |

# ಅರಿಕೆ

ಭಾರತದ ಪ್ರಜಾರಾಜ್ಯೋದಯದ ಶುಭದಿನ (ದಿನಾಂಕ: ೨೬-೧-೫೦) ವಿದ್ಯಾರ್ಥಿ ಗ್ರಂಥಮಾಲೆಯ ಪ್ರಥಮ ಪುಷ್ಪವಾಗಿ **ಗಾಂಧೀಗೀತೆಗಳು** ಎಂಬ ಪುಟ್ಟ ಪುಸ್ತಕವನ್ನು ಪ್ರಕಟಿಸಿ ಕನ್ನಡಗರಿಗೆ ಕಾಣಿಕೆಯಾಗಿ ಕೊಡಲಾಯಿತು. ಆ ಗ್ರಂಥವನ್ನು ಕುರಿತು ಸಹೃದಯರು ಆಡಿದ ಒಳ್ಳೆಯ ಮಾತುಗಳು, ಮಹಾಜನರು ಕೊಟ್ಟ ಪ್ರೋತ್ಸಾಹ ನಮಗೆ ಹೆಚ್ಚು ಉತ್ಸಾಹವನ್ನು ಉಂಟುಮಾಡಿರುವುದರಿಂದ ಈಗ ನಮ್ಮ ಗ್ರಂಥಮಾಲೆಯ ಎರಡನೆಯ ಪುಷ್ಪವಾದ **ಸರ್ವಜ್ಞಮೂರ್ತಿ** ಎಂಬ ಕವಿ-ಕಾವ್ಯ ವಿಮರ್ಶಾತ್ಮಕ ಗ್ರಂಥವನ್ನು ನಮ್ಮ ಒಲುಮೆಯ ಕನ್ನಡ ಜನತೆಗೆ ಸಮರ್ಪಿಸುವ ಸಾಹಸಮಾಡಿರುತ್ತೇವೆ.

**ಸರ್ವಜ್ಞಮೂರ್ತಿ** ಎಂಬ ಈ ಗ್ರಂಥವು ಕನ್ನಡ ನಾಡು-ನುಡಿಗಳ ಅಭಿಮಾನಿಗಳೂ, ಕನ್ನಡ ರಾಜ-ಪ್ರಜೆಗಳ ಮನ್ನಣೆಗೆ ಪಾತ್ರರೂ, ಕರ್ಣಾಟಕ ಏಕೀಕರಣ ಚಳುವಳಿಯ ಮುಂದಾಳುಗಳೂ ಆದ ಆಸ್ಥಾನವಿದ್ವಾನ್, ಪಂಡಿತರತ್ನಂ, ಕೀರ್ತನಾಚಾರ್ಯ, **ವೇ|| ಬ. ಶಿವಮೂರ್ತಿಶಾಸ್ತ್ರಿಗಳಿಂದ** ವಿರಚಿತವಾಗಿದೆ. ಇದರಲ್ಲಿ ಕನ್ನಡಜಾಣ ಸರ್ವಜ್ಞಮೂರ್ತಿಯ ಕಾಲ, ದೇಶ, ಮತ, ಹುಟ್ಟು, ಗುಟ್ಟು ಮೊದಲಾದ ಎಲ್ಲ ವಿಚಾರಗಳನ್ನೂ ಸಂಗ್ರಹಿಸಿ ಬರೆಯಲಾಗಿದೆ. ಮತ್ತು ಸರ್ವಜ್ಞನನ್ನು ಕುರಿತು ಕನ್ನಡ ವಿದ್ವಾಂಸರು ಆಗಾಗ ಪಟ್ಟಿರುವ ಅಭಿಪ್ರಾಯಗಳನ್ನು ಕೂಡ ಸಂಗ್ರಹಿಸಿ ಅನುಬಂಧದಲ್ಲಿ ಕೊಡಲಾಗಿದೆ. ಈ ಗ್ರಂಥವು ಸರ್ವಜ್ಞ ವಚನಗಳನ್ನು ಅಭ್ಯಾಸಮಾಡಬೇಕೆನ್ನುವ ವಿದ್ಯಾರ್ಥಿಗಳಿಗೂ, ಕನ್ನಡ ಜನಸಾಮಾನ್ಯರಿಗೂ ಹೆಚ್ಚು ಉಪಯೋಗವಾಗಬಹುದೆಂದು ನಂಬಿಕೆಯುಂಟು.

ಲೇಖಕರಾದ ಶ್ರೀ ಶಾಸ್ತ್ರಿಗಳು **'ಗಾಂಧಿಗೀತೆಗಳನ್ನು'** ಪ್ರಕಟಿಸಲು ಒಪ್ಪಿಗೆಯನ್ನೂ, ಸೌಕರ್ಯವನ್ನೂ ಒದಗಿಸಿಕೊಟ್ಟಂತೆಯೇ ಈ **'ಸರ್ವಜ್ಞ**

ಮೂರ್ತಿ' ಎಂಬ ಗ್ರಂಥಕ್ಕೂ ಸಹಾಯ ನೀಡಿದ್ದಾರೆ. ಅವರ ಈ ಉಪಕಾರಕ್ಕಾಗಿ ನಾವು ನಮ್ಮ ವಿದ್ಯಾರ್ಥಿ ಗ್ರಂಥಮಾಲೆಯ ಪರವಾಗಿ ಕೃತಜ್ಞತೆಯನ್ನು ಸಮರ್ಪಿಸುತ್ತೇವೆ.

ಈ ಗ್ರಂಥಪುಷ್ಪವನ್ನು ಕನ್ನಡ ದೇಶಭಾಷಾಭಿಮಾನಿಗಳೂ, ವಿದ್ಯಾರ್ಥಿಗಳ ಹಿತಚಿಂತಕರೂ, ವಿದ್ಯಾರ್ಥಿ ಗ್ರಂಥಮಾಲೆಯ ಪೋಷಕರೂ, ಮೈಸೂರು ಸರ್ಕಾರದ ರೆವಿನ್ಯೂ ಮತ್ತು ಮುಜರಾಯಿ ಸಚಿವರೂ ಆದ ಮಾನ್ಯ **ಶ್ರೀ ಎಚ್. ಸಿದ್ದಯ್ಯ** ಬಿ.ಎ.,ಎಲ್.ಎಲ್.ಬಿ., ರವರ ಸನ್ನಿಧಿಗೆ ಕಾಣಿಕೆಯಾಗಿ ಸಮರ್ಪಿಸಲಾಗಿದೆ. ಪೂಜ್ಯರೂ, ಹಿರಿಯರೂ ಆದ ಅವರು ನಮ್ಮ ಈ ಕಿರಿಯ ಕಾಣಿಕೆಯನ್ನು ಕೈಗೊಂಡು ನಮ್ಮನ್ನು ಹರಸಿ ಅನುಗ್ರಹಿಸಿದ್ದಕ್ಕಾಗಿ ನಮ್ಮ ಗ್ರಂಥಮಾಲೆಯಪರವಾಗಿ ಆ ಮಹನೀಯರಿಗೆ ನಮ್ಮ ಅನಂತಾನಂತ ಧನ್ಯವಾದಗಳು.

ಕನ್ನಡ ನಾಡು ನಡಿಗಳ ಅಭಿಮಾನಿಗಳಾದ ಮಹನೀಯರು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ನಾವು ಕೈಗೊಂಡ ಈ ಕಾರ್ಯವನ್ನು ಮಮತೆಯಿಂದ ಸ್ವೀಕರಿಸಿ ಪ್ರೋತ್ಸಾಹಿಸುವರೆಂದು ನಂಬುತ್ತೇವೆ.

ಕನ್ನಡಿಗರ ಕಿಂಕರ,

ತಾ|| ೫-೬-೧೯೫೦.
ಬೆಂಗಳೂರು.

**ಎಚ್. ಎಸ್. ರೇಣುಕಪ್ರಸಾದ್,**
ಪ್ರಕಾಶಕ

# ಪ್ರಸ್ತಾವನೆ

ಮಾನವ ಜಾತಿಯ ಪ್ರಗತಿಗೂ, ನೀತಿಶಾಸ್ತ್ರಕ್ಕೂ ನಿಕಟ ಸಂಬಂಧ ವಿದ್ದಂತೆ ತೋರುತ್ತದೆ. ಸಂಸ್ಕೃತ ವಾಙ್ಮಯಗಲ್ಲಿ ನೀತಿಯನ್ನು ಕುರಿತಾದ ಗ್ರಂಥಗಳು ಬಹಳ ಹಿಂದಿನಿಂದ ವಿರಚಿತವಾಗುತ್ತಬಂದಿವೆ. **ಶುಕ್ರನೀತಿ, ಕಾಮಂದಕನೀತಿ, ಕೌಟಿಲ್ಯನೀತಿ** ಎಂಬಿವು ಭರತಖಂಡದಲ್ಲಿ ಸುಪ್ರಸಿದ್ಧ ವಾಗಿವೆ. ಪಂಚಮ ವೇದವೆನಿಸಿದ ಮಹಾಭಾರತ ಗ್ರಂಥದಲ್ಲಿನ **ವಿದುರ ನೀತಿಯು** ಎಲ್ಲ ವಿದ್ವಾಂಸರ ಮನ್ನಣೆಗೂ ಪಾತ್ರವೆನಿಸಿದೆ. ಅಲ್ಲದೆ ಸಂಸ್ಕೃತದಲ್ಲಿ ಸುಭಾಷಿತಗಳೂ, ಸುಭಾಷಿತ ಭಾಂಡಾರಗಳೂ ಬಹಳವಾಗಿ ನೀತಿಬೋಧೆಗಾ ಗಿಯೇ ಹುಟ್ಟಿವೆ. ಪಂಚತಂತ್ರ, ಹಿತೋಪದೇಶ ಮೊದಲಾದ ಗ್ರಂಥಗಳ ಉದ್ದೇಶವೂ ಜನರಲ್ಲಿ ನೀತಿಬೋಧೆಯೇ ಆಗಿದೆ.

ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಮಹಾಕಾವ್ಯಗಳನ್ನು ಬರೆದ ಕವಿಶ್ರೇಷ್ಠರು ಕಾಂತಾಸಮ್ಮಿತ ರೀತಿಯಿಂದ ತಮ್ಮ ಕಾವ್ಯಗಳಲ್ಲಿ ಸಮಯೋಚಿತ ವಾಗಿ ನೀತಿಯನ್ನು ಹೇಳಿರುತ್ತಾರೆ. ಅಲ್ಲದೆ ಭಾರತದ ಎಲ್ಲ ಭಾಷೆಗಳಲ್ಲಿಯೂ ನೀತಿಬೋಧೆಗಾಗಿಯೇ ಸ್ವತಂತ್ರವಾದ ಗ್ರಂಥಗಳೂ, ಶತಕಗಳೂ ಹುಟ್ಟಿವೆ. ಮೇಲಾಗಿ ಸಂಸ್ಕೃತದಲ್ಲಿ **ಭರ್ತೃಹರಿಯ** ನೀತಿ, ಶೃಂಗಾರ ಮತ್ತು ವೈರಾಗ್ಯ ಶತಕಗಳು ಪ್ರಸಿದ್ಧವಾಗಿವೆ. ಅವನ್ನು ಉತ್ತಮ ರೀತಿಯಿಂದ ಭಾಷಾಂ ತರಿಸಿ ಆಸ್ಥಾನಕವಿ ಅಭಿನವ ಕಾಳಿದಾಸ ಕೈ|| ಬಸವಪ್ಪಶಾಸ್ತ್ರಿಗಳು ಕನ್ನಡಕ್ಕೆ ಉಪಕಾರ ಮಾಡಿರುತ್ತಾರೆ. ಕನ್ನಡದಲ್ಲಿ **ಪಂಪಾ ಶತಕ, ರಕ್ಷಾ ಶತಕ, ಸೋಮೇಶ್ವರ ಶತಕ, ನಿಜಲಿಂಗ ಶತಕ,** ಸಿದ್ಧನೀತಿ, **ಶಿವಭಕ್ತಿಸಾರ, ಹರಿಭಕ್ತಿಸಾರ, ನಯಶತಕ, ನೀತಿಮಂಜರಿ,** ರತ್ನಾಕರ **ಶತಕಗಳು, ಚೆಲ್ವನಾರಾಯಣ ಶತಕ, ಶಂಕರ ಶತಕ** ಮೊದಲಾದವು ಪ್ರಸಿದ್ಧವಾಗಿವೆ. ಈ ಮೇಲೆ ಕಂಡ ಎಲ್ಲ ಶತಕಗಳಿಗಿಂತಲೂ **ಸೋಮೇಶ್ವರ ಶತಕವು** ಕನ್ನಡಿ ಗರ ನಾಲಗೆಯ ಮೇಲೆ ಸದಾ ನಲಿದಾಡುತ್ತಿದೆ. ಆಂಧ್ರಭಾಷೆಯಲ್ಲಿ **ಸುಮತಿ ಶತಕಕ್ಕೆ** ಇರುವಷ್ಟು ಜನಪ್ರಿಯತೆ ಕನ್ನಡಗಲ್ಲಿ **ಸೋಮೇಶ್ವರ ಶತಕಕ್ಕೆ** ಇದೆಯೆಂದು ಹೇಳಬಹುದು.

# II

ಈ ಎಲ್ಲ ಶತಕಕಾರರ ಉದ್ದೇಶವೂ ಜನರಲ್ಲಿ ನೀತಿಯನ್ನು ಹೆಚ್ಚಿಸುವುದೇ ಆಗಿತ್ತೆಂದು ತೋರುತ್ತದೆ. ಈ ವಿಷಯವಾಗಿ ಪುಲಿಗೆರೆಯ ಕವಿಸೋಮನು

ಅದರಿಂ ನೀತಿಯೆ ಸಾಧನಂ ಸಕಲ ಲೋಕಕ್ಕಾಗಬೇಕೆಂದು ಪೇ।
ಳಿದ ಸೋಮಂ ಸುಜನರ್ಕಳೀ ಶತಕದೊಳ್............

ಎಂದು ಹೇಳಿರುವುದು ಶತಕಕಾರರ ಉದ್ದೇಶವೇನೆಂಬುದನ್ನು ಸ್ಪಷ್ಟಪಡಿಸುತ್ತದೆ. ಸಂಸ್ಕೃತದ ನ್ಯಾಯಗಳು, ಕನ್ನಡದ ಗಾದೆಗಳ ಉದ್ದೇಶವಾದರೂ ನೀತಿಬೋಧೆಯೇ.

ಭರತಖಂಡದಲ್ಲಿ ಜನರಿಗೆ ನೀತಿಯನ್ನು ಬೋಧಿಸುವುದಕ್ಕಾಗಿಯೇ ಹುಟ್ಟಿದ ಗ್ರಂಥಗಳಲ್ಲಿ ತಮಿಳಿನ **'ಕುರಳ್'** ಮತ್ತು **'ಅವ್ವೈಯಾರ್'** **ನೀತಿಬೋಧೆ ಅಗ್ರ**ಗಣ್ಯವೆನಿಸಿವೆ. ಇದರಂತೆಯೇ ಕನ್ನಡದ **ಸರ್ವಜ್ಞ ವಚನಗಳು**, ತೆಲುಗಿನ **ವೇಮನ ಪದಗಳು** ನೀತಿಬೋಧಕವಾದ ಗ್ರಂಥಗಳಲ್ಲಿ ವಿಖ್ಯಾತವಾಗಿವೆ. ಇದರಂತೆಯೇ ಮರಾಠಿಯಲ್ಲಿ **ತುಕಾರಾಂ, ರಾಮದಾಸರು** ಬರೆದಗ್ರಂಥಗಳೂ, ಹಿಂದಿಯಲ್ಲಿ **ಕಬೀರ್** ಗ್ರಂಥವೂ ನೀತಿ ಬೋಧೆಯ ದೃಷ್ಟಿಯಿಂದ ಹೆಸರಾಗಿವೆ ಈ ಮೇಲೆಕಂಡ ಎಲ್ಲ ನೀತಿ ಬೋಧಕರ ಉದ್ದೇಶವೂ ಜನಸಾಮಾನ್ಯರನ್ನು ಒಳ್ಳೆಯ ದಾರಿಯಲ್ಲಿ ನಡೆಯುವಂತೆ ಪ್ರೇರೇಪಿಸುವುದೇ ಆಗಿದೆ. ಈ ಎಲ್ಲರ ಬೋಧೆಯೂ ಒಂದೇ ರೀತಿಯಲ್ಲಿ ಮುಂದುವರಿದಿದೆ ಎಂಬುದನ್ನು ಈ ಕವಿಗಳೆಲ್ಲರ ಗ್ರಂಥಗಳ ಅವಲೋಕನದಿಂದ ಮನಗಾಣಬಹುದು

ನೀತಿಯು ಜನ ಜೀವನದ ಸುಭದ್ರತೆಗೆ ನೆಲಗಟ್ಟಿನಂತಿರತಕ್ಕುದು. ಕನ್ನಡ ಶಿವಶರಣರೂ, ಹರಿದಾಸರೂ, ಜಿನಕವಿಗಳೂ ತಮ್ಮ ತಮ್ಮ ಸಾಹಿತ್ಯದಲ್ಲಿ ನೀತಿಬೋಧೆಗೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ಶರಣರ ಸಾಹಿತ್ಯದಲ್ಲಿ ಆಚಾರ್ಯ ಪುರುಷರಾದ **ಶ್ರೀ ಬಸವೇಶ್ವರದೇವರು "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಅನ್ಯರ ನಿಂದಿಸಬೇಡ, ತನ್ನ ಬಣ್ಣಿಸಬೇಡ, ಇದಿರು ನುಡಿಯಲು ಬೇಡ ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ಕೂಡಲ ಸಂಗನನೊಲಿಸುವ ಪರಿ"** ಎಂಬ ವಚನದಲ್ಲಿ ನೀತಿಯ ಮಹತ್ವ ಜನತೆಯ

ಐಹಿಕಾಮುಷ್ಮಿಕ ಸಾಧನೆಗೆ ಎಷ್ಟೊಂದು ಮುಖ್ಯವೆಂದು ಮನಮುಟ್ಟುವಂತೆ ಹೇಳಿರುವರು. ಮಹಾಕವಿ ಷಡಕ್ಷರದೇವನು **ನೀತಿಸುರಮಹೀರುಹ** ಎಂದು ರಾಜಶೇಖರವಿಲಾಸದಲ್ಲಿ ಹೇಳಿರುವನು. **ಹೊಲೆಯ ಹೊರಗಿಹನೆ ಊರೊಳಗಿಲ್ಲವೆ?** ಎಂಬ ಹಾಡಿನಲ್ಲಿ ಶ್ರೀ ಪುರಂದರದಾಸರು ನೀತಿಯಿಲ್ಲ ದವನು ಹೊಲೆಯನೆಂಬ ಅರ್ಥವನ್ನು ಹೃದಯಂಗಮವಾಗಿ ಹೇಳಿರುವರು. ಈ ಎಲ್ಲ ಮಹನೀಯರ ಉಪದೇಶದ ತಾತ್ಪರ್ಯವೂ ಜನಜೀವನಕ್ಕೆ ನೀತಿ ಮುಖ್ಯವೆಂಬುದನ್ನು ಬೋಧಿಸುವುದೇ ಆಗಿದೆ.

ನಮ್ಮ ಭಾರತೀಯರು, ವಿಶೇಷವಾಗಿ ಕನ್ನಡಿಗರು ನೀತಿ ಪ್ರಧಾನವಾದ ಜೀವನವನ್ನೇ ನಡೆಸಿಕೊಂಡು ಬಂದಿದ್ದಾರೆ. ಇಮ್ಮಡಿ ಪುಲಿಕೇಶಿಯ ಕಾಲ ದಲ್ಲಿ (ಕ್ರಿ. ಶ. ೬೦೯-೬೪೨)? ಕನ್ನಡ ಜನ ಹೇಗೆ ನೀತಿವಂತರಾಗಿದ್ದರೆಂಬುದಕ್ಕೆ ಚೀಣಾದೇಶದ ಪ್ರವಾಸಿ ಹೀವನತ್ಸಾಂಗನ ವರದಿಯಲ್ಲಿ ಆಧಾರವಿದೆ. ನೀತಿವಂತ ಜನರೇ ಧೈರ್ಯಶಾಲಿಗಳೂ, ಸತ್ಯವಂತರೂ ಆಗಿರಲು ಸಾಧ್ಯವಿದೆ. ಆದ್ದರಿಂ ದಲೇ ನಮ್ಮ ದಕ್ಷಿಣಭಾರತದ ನೀತಿಬೋಧಕರಾದ **ತಿರುವಳ್ಳುವರ್, ಅವ್ವೈ ಯಾರ್, ಸರ್ವಜ್ಞಮೂರ್ತಿ, ವೇಮನ, ತುಕಾರಾಮ** ಮೊದಲಾದ ಕವಿಶ್ರೇಷ್ಠರು ತಮ್ಮ ತಮ್ಮ ಗ್ರಂಥಗಳಲ್ಲಿ ನೀತಿಗೆ ಪ್ರಾಮುಖ್ಯತೆಯನ್ನು ಕೊಟ್ಟು ಜನರಿಗೆ ಮಾರ್ಗದರ್ಶಕರಾಗಿದ್ದಾರೆ.

ನೀತಿಧರ್ಮಗಳಿಂದ ನಡೆದ **'ಮಹಾತ್ಮಗಾಂಧಿ'** ನಮ್ಮ ಕಣ್ಣೆದುರಿಗೇ ಎಂತಹ ಪವಾಡವನ್ನು ಮೆರೆದಿರುವರೆಂಬುದನ್ನು ಭಾರತೀಯರಾದ ನಾವೆಲ್ಲರೂ ಅರಿತಿರುತ್ತೇವೆ. ಆದ್ದರಿಂದಲೇ **ಸರ್ವಜ್ಞಮೂರ್ತಿಯೂ** ತನ್ನ ವಚನಗಳಲ್ಲಿ ನೀತಿಬೋಧೆಗೆ ಪ್ರಾಮುಖ್ಯತೆ ಕೊಟ್ಟಿದ್ದಾನೆ. ಕನ್ನಡಿಗರನ್ನು ಎಚ್ಚರಿಸಿದ್ದಾನೆ.

ದಕ್ಷಿಣ ಹಿಂದೂಸ್ಥಾನದಲ್ಲಿ ತಮಿಳಿನ **ತಿರುವಳ್ಳುವ ಕವಿಯು** ನೀತಿ ಗ್ರಂಥಕಾರರಲ್ಲಿ ಅಗ್ರಗಣ್ಯನಾಗಿದ್ದಾನೆಂಬುದುಸರ್ವಶ್ರುತವಾಗಿದೆ. ಇವನ ಕಾಲ ಕ್ರಿ. ಶ. ೨ನೇ ಶತಕ. ಇವನ ಸ್ಥಳ ಮಧುರೆ. ಇವನ ವಂಶೀಯರು ಅನೇಕರು ಮಹಿಮರೂ, ಕವಿಗಳೂ ಎನಿಸಿದ್ದಾರೆ. ತಮಿಳಿನಲ್ಲಿ ಈತನನ್ನು ಋಷಿಕವಿ, ಆದಿಕವಿ, ದೇವಕವಿ, ಸ್ಮೃತಿಕಾರ,ಮಹಾಜ್ಞಾನಿ ಎಂದು ಗೌರವಿಸು ತ್ತಾರೆ. ಇವನಿಂದ ವಿರಚಿತವಾದ **'ಕುರಳ್'** ಎಂಬ ಗ್ರಂಥಕ್ಕೆ

'ಸತ್ಯವಾಕ್ಕು-ಉತ್ತರವೇದ-ದ್ರಾವಿಡವೇದ' ಎಂಬ ಗೌರವದ ಹೆಸರನ್ನು ತಮಿಳರು ಕೊಟ್ಟಿರುತ್ತಾರೆ. ಈ ಗ್ರಂಥರತ್ನವು ಇಂಗ್ಲಿಷ್-ಲಾಟಿನ್-ಫ್ರೆಂಚ್ ಜರ್ಮನ್-ಇಟಾಲಿಯನ್ ಮೊದಲಾದ ಯುರೋಪಿನ ಭಾಷೆಗಳಿಗೆ ಪರಿವರ್ತಿಸಲ್ಪಟ್ಟಿದೆ. ಹಿಂದುಸ್ಥಾನದ ಯಾವ ಭಾಷೆಯಲ್ಲಿಯೂ ಇದಕ್ಕೆ ಸಮಾನವಾದ ಗ್ರಂಥವಿಲ್ಲವೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಸಂಸ್ಕೃತದ ಪಂಚತಂತ್ರ ಹೊರತು ಮತ್ತಾವ ಗ್ರಂಥವೂ ಹೀಗೆ ವಿದೇಶೀಯ ಭಾಷೆಗಳಿಗೆ ಭಾಷಾಂತರಿಸಲ್ಪಟ್ಟಿಲ್ಲ. ಪಾಶ್ಚಾತ್ಯ ಪಂಡಿತರಲ್ಲಿ ಕೆಲವರು ಈ 'ಕುರಳ್' ಗ್ರಂಥವು ಅತ್ಯುತ್ತಮವಾದುದೆಂದು ವಿಶೇಷವಾಗಿ ಶ್ಲಾಘಿಸಿ ಬರೆದಿದ್ದಾರೆ. ಈ ಕವಿಯು ಸರ್ವಮತ ಸಾಧಾರಣವಾದ ವಿಷಯಗಳನ್ನು ಹೃದಯಂಗಮವಾದ ರೀತಿಯಿಂದ ಪ್ರತಿಪಾದಿಸಿರುವುದರಿಂದ ಈ ಗ್ರಂಥವು ಹೆಚ್ಚು ಜನಪ್ರಿಯವೆನಿಸಿದೆ. 'ಕುರಳ್' ಗ್ರಂಥವು ದ್ವಿಪದಿಯಲ್ಲಿ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ೧೩೩ ಅಧಿಕಾರಗಳೂ, ಧರ್ಮ-ಅರ್ಥ-ಕಾಮ ಎಂಬ ಮೂರು ವರ್ಗಗಳೂ ಇವೆ. ಇದಕ್ಕೆ ತಮಿಳಿನಲ್ಲಿ ಪತ್ತು ವ್ಯಾಖ್ಯಾನಗಳಿವೆ. ಈ 'ಕುರಳ್' ಗ್ರಂಥವನ್ನು ಕುರಿತು ಪರಣರ್, ಇಡೈಕ್ಕಾಡರ್ ಎಂಬ ಇಬ್ಬರು ಪ್ರಾಚೀನ ತಮಿಳು ಕವಿಗಳು ಈ ಮುಂದೆ ಹೇಳುವಂತೆಬಣ್ಣಿಸಿದ್ದಾರೆ:—

೧. ವಿಷ್ಣು ಕುರಳಾಗಿ (ಕುರಳ್ ಎಂದರೆ ಕುಳ್ಳ, ವಾಮನ) ಸ್ವರ್ಗವನ್ನೂ, ಭೂಮಿಯನ್ನೂ ಎರಡು ಪಾದದಿಂದ ಅಳೆದಂತೆ **ತಿರುವಳ್ಳುವ ಕವಿ** ತನ್ನ ಕುರಳ್ (ಸಣ್ಣ) ಪದ್ಯಗಳ ಎರಡು ಪಾದಗಳಿಂದ ಪ್ರಪಂಚವನ್ನೆಲ್ಲಾ ಅಳೆದಿದ್ದಾನೆ.

೨. ತಿರುವಳ್ಳುವ ಕವಿಯ ದ್ವಿಪದಿಗಳು ಸಾಸಿವೆಯ ಕಾಳಿನಲ್ಲಿ ದ್ವಾರವನ್ನು ಮಾಡಿ ಸಪ್ತಸಮುದ್ರಗಳನ್ನೂ ಹೊಗಿಸಿದಂತಿವೆ. ತಮಿಳಿನಲ್ಲಿ ಗಣ್ಯವಾದ ಶಿಲಪ್ಪದಿಗಾರಂ ಮತ್ತು ಮಣಿಮೇಖಲೈ ಗ್ರಂಥಗಳಲ್ಲಿ ಕುರಳ್ ಪ್ರಭಾವವಿದೆ.

ತಿರುವಳ್ಳುವನ ಜತೆಯಲ್ಲಿಯೇ ಅವ್ವೈಯಾರ್ ನೀತಿ ಗ್ರಂಥಗಳೂ ತಮಿಳಿನಲ್ಲಿ ಗಣ್ಯತೆಯನ್ನು ಪಡೆದಿವೆ. ಇವರಿಬ್ಬರೂ ಅಣ್ಣತಂಗಿಯರೆಂದು ತಿಳಿದುಬಂದಿದೆ. ತಿರುವಳ್ಳುವನ ಸಮಾಧಿ ಮದರಾಸಿನ ಮೈಲಾಪುರದಲ್ಲಿದೆ. **ಶ್ರೇಷ್ಠವಾದ** ಈ ಎರಡೂ ಗ್ರಂಥಗಳನ್ನು **ನೀತಿಮಂಜರಿ** ಎಂಬ ಹೆಸರಿನಿಂದ

ಭಾಷಾಂತರಿಸಿ ಕನ್ನಡ ಕವಿಚರಿತ್ರೆಕಾರರಾದ **ಪೂಜ್ಯ ರಾ|| ನರಸಿಂಹಾ ಚಾರ್ಯರು** ಕನ್ನಡಿಗರಿಗೆ ಮಹೋಪಕಾರ ಮಾಡಿದ್ದಾರೆ. 'ಕುರಳ್' ಮತ್ತು 'ಅವ್ವೈಯಾರ್' ಗ್ರಂಥಗಳು ಕನ್ನಡಕ್ಕೆ ಸಮಗ್ರವಾಗಿ ಭಾಷಾಂತರವಾಗುವುದು ಅಗತ್ಯವಾಗಿದೆ.

ಇನ್ನು ತೆಲುಗಿನ **ವೇಮನನ ವಿಚಾರ**. ಇವನು ೧೭ನೇ ಶತಮಾನದವನು. ಆಂಧ್ರದೇಶದ ಶ್ರೀಶೈಲ ಪ್ರಾಂತದವನು. ಪಾಕನಾಡು ರೆಡ್ಡಿಗಳ ರಾಜವಂಶಕ್ಕೆ ಸೇರಿದವನು. 'ವಿಶ್ವತೋಭಿರಾಮ ವಿನರ ವೇಮ' ಎಂಬ ಅಂಕಿತದಿಂದ ಕೂಡಿದ ಇವನ ಪದ್ಯಗಳು ತೆಲುಗು ನಾಡಿನಲ್ಲಿ ಬಹಳ ಜನಪ್ರಿಯವೆನಿಸಿವೆ. ಕರ್ಣಾಟಕದಲ್ಲಿ ಸರ್ವಜ್ಞನಿಗಿರುವ ಸ್ಥಾನವೇ ಆಂಧ್ರರಲ್ಲಿ **ವೇಮನ**ನಿಗಿದೆಯೆಂದು ಹೇಳಬಹುದು. ವೇಮನನ ಪದ್ಯಗಳನ್ನು ಕಂಡು ಆಂಧ್ರಸಾಹಿತ್ಯ ಪ್ರೇಮಿಯಾದ ಸಿ. ಪಿ. ಬ್ರೌನ್ ಸಾಹೇಬನು ಇವನ ವಚನಗಳನ್ನು ಇಂಗ್ಲೀಷಿಗೆ ಭಾಷಾಂತರಿಸಿದ್ದಾನೆ. ಅದು ೧೯೧೧ರಲ್ಲಿ [ಮದರಾಸಿನ ವಿ. ರಾಮಸ್ವಾಮಿ ಅಂಡ್ ಸನ್ಸ್ ಅವರಿಂದ] ಪ್ರಕಟವಾಗಿದೆ. ಮತ್ತೆ ೧೯೩೯ರಲ್ಲಿ ಅದೇ ಪ್ರಕಾಶಕರಿಂದ **ವೇಮನ ಪದ್ಯಗಳು** ಅರ್ಥಸಹಿತವಾಗಿ ಸುಂದರವಾಗಿ ಪ್ರಕಟವಾಗಿವೆ. ಇದರಲ್ಲಿ೨೭೨ ಪದ್ಯಗಳಿವೆ. ಈ ವೇಮನನನ್ನು ಆಂಧ್ರ ಸಾಹಿತ್ಯದಲ್ಲಿ ಗಣ್ಯರಾದ ಎರ್ರಾಪ್ರಗ್ಗಡ, ಲಕ್ಷ್ಮಣಕವಿ, ಎಲ್ಲನಾರ್ಯ, ಶಿವಯೋಗೀಂದ್ರ, ತುರುಗಾರಾಮ ಮೊದಲಾದ ಕವಿಗಳು ಸ್ತೋತ್ರಮಾಡಿದ್ದಾರೆ. ಕನ್ನಡದಲ್ಲಿ ಕೆಲವು ವೇಮನ ಪದ್ಯಗಳನ್ನು ಚಿತ್ರದುರ್ಗದ **ಶ್ರೀ ಬಿ. ಭೀಮರಾಜು** ಅವರು ಭಾಷಾಂತರಿಸಿ ಪ್ರಕಟಿಸಿದ್ದಾರೆ. ವೇಮನ ವಚನಗಳು ಸಂಸ್ಕೃತಕ್ಕೂ ಪರಿವರ್ತಿಸಲ್ಪಟ್ಟಿವೆಯೆಂದು ತಿಳಿದುಬಂದಿದೆ.

ನಮ್ಮ ಸರ್ವಜ್ಞನ ಪ್ರಭಾವವು ವೇಮನನ ಮೇಲೆ ಬಹಳವಾಗಿ ಬಿದ್ದಿದೆ. ಸರ್ವಜ್ಞನಂತೆಯೇ ವೇಮನನೂ ಪದ್ಯಗಳನ್ನು ಪದ್ಧತಿಗಳನ್ನಾಗಿ ವಿಭಾಗಿಸಿದ್ದಾನೆ. **ವೇಮನ-ಸರ್ವಜ್ಞರ** ಅಭಿಪ್ರಾಯಗಳಿಗೆ ಹೆಚ್ಚು ಹೋಲಿಕೆಯಿದೆ. ಇವರಿಬ್ಬರೂ ಒಂದೇ ವೀರಶೈವ ಧರ್ಮದ ಅನುಯಾಯಿಗಳೆಂಬುದು ಹೆಚ್ಚು ಗಮನಾರ್ಹವಾದ ಸಂಗತಿ. ತಿರುವಳ್ಳುವ ಕವಿಯು ಯಾವ ಧರ್ಮ

ದವನೆಂಬುದಕ್ಕೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಆದರೆ ಕುಂಭಕೋಣಂ ಪೆರಿಯಮಠಂ ಏಜಂಟರಾದ ತಮಿಳು ಪಂಡಿತ ಶ್ರೀ ವಿ. ಕುಮಾರ ವೀರಯ್ಯರ್–'ತಿರುವ್ಳವರ್ ವೀರಶೈವ ಕವಿಯೆಂದೂ, ಇವನ ಗ್ರಂಥಗಳಲ್ಲಿ ವೀರಶೈವ ವಿಚಾರಗಳುಂಟೆಂದೂ, ಈಗಲೂ ಮದರಾಸಿನಲ್ಲಿರುವ ಇವನ ಸಮಾಧಿಯನ್ನು ವೀರಶೈವರೇ ಪೂಜಿಸುವರೆಂದೂ' ಹೇಳಿರುತ್ತಾರೆ.

ಮುಖ್ಯವಾಗಿ ದಕ್ಷಿಣ ಹಿಂದೂಸ್ಥಾನದ ಪ್ರಸಿದ್ಧ ನೀತಿಕಾರರಾದ **ತಿರುವಳ್ಳುವರ್, ಸರ್ವಜ್ಞ ಮೂರ್ತಿ** ಮತ್ತು **ವೇಮನ** ಈ ಮೂವರು ಮಹಾಕವಿಗಳೂ ಒಂದೇ ಧರ್ಮ, ಒಂದೇ ಸಂಸ್ಕೃತಿ, ಒಂದೇ ಪರಂಪರೆಗೆ ಸೇರಿದವರಾಗಿದ್ದು ಅನುಕ್ರಮವಾಗಿ ತಮಿಳು, ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಉತ್ತಮವಾದ ಗ್ರಂಥಗಳನ್ನು ಬರೆದು ದಕ್ಷಿಣ ಭಾರತಕ್ಕೆ ಮಹೋಪಕಾರ ಮಾಡಿರುತ್ತಾರೆ. ತಿರುವಳ್ಳುವನ ಪ್ರಭಾವ ಸರ್ವಜ್ಞನ ಮೇಲೂ, ಸರ್ವಜ್ಞನ ಪ್ರಭಾವ ವೇಮನನ ಮೇಲೂ ಬಿದ್ದಿರಬೇಕು. ಅದು ಕಾರಣವೇ ತಮಿಳಿನಲ್ಲಿ ದ್ವಿಪದಿ, ಕನ್ನಡದಲ್ಲಿ ತ್ರಿಪದಿ, ತೆಲುಗಿನಲ್ಲಿ ಚತುಷ್ಪದಿಯಾಗಿ ಇವರ ಕವಿತೆಗಳು ಪ್ರಕಟವಾಗಿರಬೇಕು. ಕರ್ಣಾಟಕದಲ್ಲಿ ಸರ್ವಜ್ಞ ವಚನಗಳು ನಾಲ್ಕು ಶತಮಾನಗಳಿಂದಲೂ ಒಳ್ಳೇ ಜನ ಪ್ರಿಯತೆಯನ್ನು ಪಡೆದಿವೆ. ಸರ್ವಜ್ಞ ವಚನಗಳು ವಿಶ್ವಭಾಷೆಯಾದ ಇಂಗ್ಲೀಷಿಗೂ, ರಾಷ್ಟ್ರಭಾಷೆಯಾದ ಹಿಂದಿಗೂ ಭಾಷಾಂತರವಾಗುವುದು ಅಗತ್ಯ. 'ಕುರಳ್' ಮತ್ತು 'ವೇಮನ'ಗಳು ಇಂಗ್ಲೀಷಿಗೆ ಭಾಷಾಂತರವಾಗಿವೆ.

ಕನ್ನಡದಲ್ಲಿ **ಸರ್ವಜ್ಞ ವಚನಗಳ** ಪ್ರಚಾರಕ್ಕಾಗಿ **ರೆವರೆಂಡ್ ಉತ್ತಂಗಿ ಚನ್ನಪ್ಪನವರು** ಬಹಳವಾಗಿ ಪ್ರಯತ್ನಿಸಿದ್ದಾರೆ. ಅವರು ಇದುವರೆಗೆ ಸಾಹಿತ್ಯಾವೃತ್ತಿ, ಜನಪದಾವೃತ್ತಿ, ಜೇಬಿನಾವೃತ್ತಿ, ಅಗ್ಗದಾವೃತ್ತಿ, ಎಂದು ನಾಲ್ಕು ರೀತಿಯಿಂದ ಸರ್ವಜ್ಞ ವಚನಗಳ ಪ್ರಚಾರಮಾಡಿದ್ದಾರೆ. ಅಥಣಿಯ **'ಚಿಚ್ಚಕೋರ'**ರು **ಸರ್ವಜ್ಞ ಸಂದೇಶ** ಎಂಬ ಗ್ರಂಥವನ್ನೂ ಮೈಸೂರು ಶ್ರೀ ಎ. ಆರ್. ಕೃಷ್ಣಶಾಸ್ತ್ರೀ ಎಂ. ಎ., ರವರು **ಸರ್ವಜ್ಞ ಕವಿ** ಎಂಬ ಗ್ರಂಥವನ್ನೂ ಪ್ರಕಟಿಸಿರುತ್ತಾರೆ. ಅನೇಕ ವಿದ್ವಾಂಸರು ಪತ್ರಿಕೆಗಳಲ್ಲಿ ಸರ್ವಜ್ಞನ ಮೇಲೆ ಲೇಖನಗಳನ್ನು ಬರೆದಿರುತ್ತಾರೆ. ಕನ್ನಡದಲ್ಲಿ ಇಷ್ಟೆಲ್ಲಾ

ಸರ್ವಜ್ಞ ಸಾಹಿತ್ಯ ಪ್ರಕಟವಾಗಿದ್ದರೂ, ಈಗ ನಾವು ಪ್ರಕಟಿಸಿರುವ **ಸರ್ವಜ್ಞ ಮೂರ್ತಿ** ಕೂಡ ಕನ್ನಡ ಜನರಿಗೆ ಪ್ರಿಯವಾದೀತೆಂದು ನಾವು ನಂಬುತ್ತೇವೆ. ಸರ್ವಜ್ಞನನ್ನು ತಿಳಿಯಲಾಶಿಸುವ ಕನ್ನಡ ಜನಸಾಮಾನ್ಯರನ್ನೂ, ವಿಶೇಷವಾಗಿ ವಿದ್ಯಾರ್ಥಿಗಳನ್ನೂ ಗಮನದಲ್ಲಿಟ್ಟು ಈ ಗ್ರಂಥವನ್ನು ಪ್ರಕಟಿಸಲಾಗಿದೆ. ಇದರ ಪ್ರಯೋಜನವನ್ನು ಕನ್ನಡ ಜನ ಪಡೆದು ಹರ್ಷಿಸಿದರೆ ನಮ್ಮ ಶ್ರಮ ಸಫಲವು.

॥ ಎಲ್ಲ ಬಲ್ಲವರಿಲ್ಲ ॥

**ಬ. ಶಿವಮೂರ್ತಿಶಾಸ್ತ್ರೀ**

# ಸರ್ವಜ್ಞ ಮೂರ್ತಿ

ಕರ್ಣಾಟಕ ಸಾಹಿತ್ಯ ನಭೋಮಂಡಲದಲ್ಲಿ ಪಂಪ, ರನ್ನರಂತಹ ಮಹಾಕವಿಗಳನ್ನೂ, ಹರಿಹರ, ರಾಘವಾಂಕರಂತಹ ಕ್ರಾಂತಿಕಾರಕ ಕವಿಗಳನ್ನೂ, ನೇಮಿ, ಷಡಕ್ಷರರಂತಹ ರಸಕವಿಗಳನ್ನೂ, ಲಕ್ಷ್ಮೀಶ, ಕುಮಾರವ್ಯಾಸರಂತಹ ಕವಿ ಕೋಕಿಲೆಗಳನ್ನೂ, ನಿಜಗುಣ, ಪುರಂದರರಂತಹ ಋಷಿಕವಿಗಳನ್ನೂ ನಾವು ಪ್ರಕಾಶಮಯವಾದ ತಾರೆಗಳೆಂದು ಭಾವಿಸಿದರೆ ಸ್ವಾತಂತ್ರ್ಯತಮ ವ್ಯಕ್ತಿತ್ವದ ದೆಸೆಯಿಂದ (Personality) **ಸರ್ವಜ್ಞಮೂರ್ತಿ**ಯನ್ನು ಧೃವನಕ್ಷತ್ರ ನೆಂದು ಕರೆಯಬಹುದು.

ಆದಿಪಂಪನಿಂದ ಅಭಿನವಕಾಲಿದಾಸನವರೆಗಿನ ಅಸಂಖ್ಯಾತ ಕವಿಗಳು ಕನ್ನಡ ಸಾಹಿತ್ಯವನ್ನು ನಾನಾಮುಖದಿಂದ ಬೆಳಗಿಸಿದ್ದಾರೆ; ಬಳೆಯಿಸಿದ್ದಾರೆ. ಅಚ್ಚಕನ್ನಡ ಕಬ್ಬಿಗನಾದ **ಆಂಡಯ್ಯನು** ಸಕ್ಕದವ ಹಂಗಿಲ್ಲದೆ ತಿರುಳ್ಗನ್ನಡ ದಲ್ಲಿಯೇ ತನ್ನ "ಕಬ್ಬಿಗರಕಾವ"ವನ್ನು ಬರೆದು ಕನ್ನಡದ ಕೀರ್ತಿಯನ್ನು ಉಳಿಸಿದ್ದಾನೆ. ಆದರೇನು? ಈ ಎಲ್ಲ ಕವಿಗಳಲ್ಲಿಯೂ ನಾವು ಸಂಪೂರ್ಣವಾಗಿ ಕನ್ನಡಿಗತನವನ್ನು ಕಾಣಲಾರೆವು. ಈ ಕವಿಗಳೆಲ್ಲರೂ ಒಂದಲ್ಲೊಂದು ರೀತಿಯಿಂದ ಸಂಸ್ಕೃತಕ್ಕೆ ಹಂಗಿಗರೇ ಆಗಿರುವರು. ಕನ್ನಡಿಗತನವನ್ನು ಸಂಪೂರ್ಣವಾಗಿ ನೋಡಬೇಕೆಂಬ ನಮ್ಮ ಬಯಕೆಯನ್ನು ಬಹುಮಟ್ಟಿಗೂ ಆಗು ಮಾಡುವ ಮಾರಾಯನೆಂದರೆ ಕನ್ನಡಜಾಣನಾದ ಸರ್ವಜ್ಞಮೂರ್ತಿಯೇ ಎಂದುಹೇಳಬೇಕು.

ಸರ್ವಜ್ಞಮೂರ್ತಿಯ ವಚನಗಳಿಲ್ಲದ ಕನ್ನಡ ಸಾಹಿತ್ಯವನ್ನು ಕೋಕಿಲಾಲಾಪವಿಲ್ಲದ ಅರಣ್ಯವೆಂದೂ, ದುಂಬಿಗಳ ಝೇಂಕಾರವಿಲ್ಲದ ನಂದನವನವೆಂದೂ, ಮಕ್ಕಳ ಮೃದುಮಧುರ ನುಡಿಗಳಿಲ್ಲದ ಶ್ರೀಮಂತರ ಮನೆಯೆಂದೂ, ರಸಿಕ ವಿದೂಷಕನಿಲ್ಲದ ನಾಟಕ ಪ್ರಯೋಗವೆಂದೂ ನಾವು ಉಪಮಿಸಬಹುದು. ಕನ್ನಡನುಡಿಯ ಬೆಡಗು, ಬಿನ್ನಾಣ, ಕನ್ನಡ ಸಂಸ್ಕೃತಿಯ ತಿರುಳು, ಹುರುಳು,

ಕನ್ನಡಿಗರ ವೈಶಿಷ್ಟ್ಯ, ಧಾಷ್ಟ್ಯ, ಕರ್ಣಾಟಕದ ಚಲನವಲನಗಳನ್ನು ನಾವು ಒಂದೆಡೆ ಯಲ್ಲಿ ಕಾಣಬೇಕಾದರೆ ಸರ್ವಜ್ಞನ ವಚನಗಳನ್ನು ಪುರೆಹೊಕ್ಕಲ್ಲದೆ ಆಗದು.

ತಮಿಳು ಸಾಹಿತ್ಯದಲ್ಲಿ **ತಿರುವಳ್ಳುವರ್** ಕವಿಗೂ, ತೆಲುಗು ಭಾಷೆಯಲ್ಲಿ **ವೇಮನ** ಕವಿಗೂ, ಮಹಾರಾಷ್ಟ್ರ ವಾಙ್ಮಯದಲ್ಲಿ **ರಾಮದಾಸ** ಮುನಿ'ಗೂ ಹಿಂದೀ ಸಾಹಿತ್ಯದಲ್ಲಿ **ಕಬೀರದಾಸ**ನಿಗೂ, ಸಂಸ್ಕೃತದಲ್ಲಿ **ಭರ್ತೃಹರಿ** ಕವಿಗೂ ಇರುವ ಸ್ಥಾನವೇ ಕನ್ನಡ ವಾಙ್ಮಯದಲ್ಲಿ ಸರ್ವಜ್ಞಮೂರ್ತಿಗೂ ಇದೆಯೆಂದು ಅನೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ತಿರುವಳ್ಳುವರನ ನೀತಿ ಬೋಧೆಯೂ, ಭರ್ತೃಹರಿಯ ಪ್ರತಿಭೆಯೂ, ವೇಮನನ ಲೋಕಾನು ಭವವೂ, ರಾಮದಾಸನ ಮಾರ್ಮಿಕತೆಯೂ, ಕಬೀರನ ಉದಾರಭಾವವೂ ಸರ್ವಜ್ಞವಚನಗಳಲ್ಲಿ ಕಾಣಬರುತ್ತವೆಯೆಂದು ಸಹೃದಯರು ಈ ಕವಿಶ್ರೇಷ್ಠರ ಗ್ರಂಥಗಳನ್ನು ಓದುವುದರಿಂದ ಮನಗಾಣಬಹುದಾಗಿದೆ.

ಅನಂತ ಮಹಾಕವಿಗಳನ್ನು, ಸಾಧುಸಂತರನ್ನು. ಶೂರಪುರುಷರನ್ನು, ತತ್ವವಿದರನ್ನು, ಕಲಾವಿದರನ್ನು, ಹದಿಬದೆಯರನ್ನು, ಮಹಾದಾನಿಗಳನ್ನು ಹಡೆದ ಕರ್ಣಾಟಕಮಾತೆಯು, **ಸರ್ವಜ್ಞಮೂರ್ತಿ**ಯನ್ನು ಹಡೆದು ಸಂಪೂರ್ಣ ಭಾಗ್ಯವಂತೆಯಾದಳು. ಸರ್ವಜ್ಞನ ಸವಿನುಡಿಗಳನ್ನು ಲಾಲಿಸುವ ಭಾಗ್ಯವು ದೊರೆತುದಕ್ಕಾಗಿ ಕನ್ನಡಿಗರೆಲ್ಲರೂ ಹೆಮ್ಮೆಗೊಂಡಿದ್ದಾರೆ. ಹರ್ಷ ಗೊಂಡಿದ್ದಾರೆ. ಒಂದು ವೇಳೆ ಸರ್ವಜ್ಞನಂತಹ ಜನಪ್ರಿಯ ಗಂಡುಕವಿ ಹುಟ್ಟದಿದ್ದರೆ ಕನ್ನಡ ಸಾಹಿತ್ಯಕ್ಕೆ ಒಂದು ಕುಂದಕವೇ ಆಗುತ್ತಿತ್ತೆಂದು ಹೇಳ ಬಹುದಾಗಿತ್ತು.

## ಸರ್ವಜ್ಞ ಕವಿಗಳು

ಈಗ ನಮಗೆ ಬೇಕಾದುದು ಸರ್ವಜ್ಞಮೂರ್ತಿಯ ವಿಚಾರ. ಇದೇ ಹೆಸ ರಿನ ಇತರ ಕವಿಗಳೇನಾದರೂ ಕನ್ನಡ ಸಾಹಿತ್ಯದಲ್ಲಿ ಆಗಿಹೋಗಿದ್ದಾರೆಯೋ ಎಂಬುದೂ ಸಹ ವಿಚಾರಾರ್ಹವಾದ ವಿಷಯ. ಏಕೆಂದರೆ ಒಂದೇ ಹೆಸರಿನ

ಹಲವು ಕವಿಗಳಾಗಿರುವರೆಂಬುದು ಇತಿಹಾಸವಿದರಿಗೆಲ್ಲಾ ಗೊತ್ತಿರುವ ವಿಚಾರ. ನಾಗವುರ್ಮ, ಹರಿಹರ, ರಾಘವ, ಷಡಕ್ಷರ, ಬಸವ, ರೇವಣಸಿದ್ಧ ಎಂಬ ಹೆಸರಿನವರು ಹಲವರಾಗಿಹೋಗಿದ್ದಾರೆಂಬುದು ಕನ್ನಡ ಸಾಹಿತ್ಯ ಮತ್ತುಚರಿತ್ರೆ ಯನ್ನು ಓದಿರುವವರಿಗೆಲ್ಲಾ ತಿಳಿದಿರುವ ಸಂಗತಿ. ಅದರಂತೆ ಸರ್ವಜ್ಞನೆಂಬ ಹೆಸರಾಂತು, ಈ ಸರ್ವಜ್ಞಮೂರ್ತಿಗಿಂತಲೂ ಭಿನ್ನರಾದ ಕವಿಗಳೇನಾದರೂ ಕನ್ನಡದಲ್ಲಿ ಆಗಿದ್ದಾರೆಯೇ ಎಂಬುದನ್ನು ಈಗ ವಿಚಾರಮಾಡೋಣ.

## 'ಸರ್ವಜ್ಞ' ನಾಮ ವಿಚಾರ

ಬಲ್ಲವರು 'ಸರ್ವಜ್ಞ' ಎಂಬ ಹೆಸರನ್ನು ಸೃಷ್ಟಿಕರ್ತನಾದ ದೇವರಿಗೆ ಯೋಗ್ಯವೆಂದು ಭಾವಿಸುತ್ತಾರೆ. ಶಿವಸಹಸ್ರನಾಮದಲ್ಲಿ **"ಓಂ ಸರ್ವಜ್ಞಾಯ ನಮಃ"** ಎಂಬ ಹೆಸರೊಂದಿದೆ. ಸರ್ವಜ್ಞಮೂರ್ತಿಯೂ ಕೂಡ ತನ್ನ ದೊಂದು ತ್ರಿಪದಿಯಲ್ಲಿ **"ಒಬ್ಬನಲ್ಲದೆ ಜಗಕೆ ಇಬ್ಬರುಂಟೇ** ಮತ್ತೆ ? **ಒಬ್ಬ ಸರ್ವಜ್ಞ ಕರ್ತನು ಜಗಕೆಲ್ಲ ! ಒಬ್ಬನೇ ದೈವ ಸರ್ವಜ್ಞ!"** ಎಂದು ಹೇಳಿ ಭಗವಂತನೊಬ್ಬನೇ **'ಸರ್ವಜ್ಞ'** ಪದವಿಗೆ ತಕ್ಕವನೆಂದು ಸ್ಪಷ್ಟವಾಗಿ ಹೇಳಿರುವನು.

ಈಗ ಭರತಖಂಡದಲ್ಲಿ ಅಸಾಧಾರಣ ಪಂಡಿತರಾದವರಿಗೆ 'ಮಹಾ ಮಹೋಪಾಧ್ಯಾಯ' ಎಂಬ ಬಿರುದನ್ನು ದಯಪಾಲಿಸುವಂತೆ ಪ್ರಾಚೀನ ಭಾರತದಲ್ಲಿ ಸಕಲಶಾಸ್ತ್ರ ಪಂಡಿತರಾದವರನ್ನು 'ಸರ್ವಜ್ಞ' ಎಂಬ ಪ್ರಶಸ್ತಿ ಯನ್ನು ಕೊಟ್ಟು ಗೌರವಿಸುತಿದ್ದರೆಂದು ತೋರುತ್ತದೆ. "೧೪ನೆಯ ಶತ ಮಾನದಲ್ಲಿದ್ದು, ಮಹಾಭಾರತಕ್ಕೆ ಭಾಷ್ಯವನ್ನು ಬರೆದ ವಿದ್ವಾಂಸನೊಬ್ಬನಿಗೆ **ಸರ್ವಜ್ಞನಾರಾಯಣ** ಎಂದೂ, ಅದೇ ಶತಮಾನದಲ್ಲಿ ಬದುಕಿದ **ಸಾಯಣಾ ಚಾರ್ಯನ** ಅಣ್ಣನಾದ **ಮಾಧವನಿಗೆ ಸರ್ವಜ್ಞ** ಅಥವಾ **ವಿದ್ಯಾರಣ್ಯ** ಎಂದೂ ಬಿರುದುಗಳಿದ್ದಂತೆ ಚರಿತ್ರೆಯಿಂದ ಗೊತ್ತಾಗುತ್ತದೆ. ೧೨ನೇ ಶತ ಮಾನದಲ್ಲಿ ಆಗಿಹೋದ ೩ನೆಯ ಸೋಮೇಶ್ವರನೆಂಬ ಅರಸನಿಗೆ **ಭೂಲೋಕ ಮಲ್ಲ** ಮತ್ತು **ಸರ್ವಜ್ಞಚಕ್ರವರ್ತಿ** ಎಂಬ ಬಿರುದುಗಳಿದ್ದಂತೆ ತಿಳಿದು ಬರುತ್ತದೆ.''

ನಮ್ಮ ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧನಾಗಿರುವ **ಸರ್ವಜ್ಞಮೂರ್ತಿ** ಅಥವಾ **ಸಾಲೆಸರ್ವಜ್ಞ**ನಲ್ಲದೆ ಈ ಹೆಸರಿನ ಇತರ ಕವಿಗಳೂ ಇರಬಹುದೆಂದು ತೋರುತ್ತದೆ. ಕೆಲವು ತಾಳೆಯೋಲೆ ಗ್ರಂಥಗಳಲ್ಲಿ ಸರ್ವಜ್ಞಮೂರ್ತಿಗಿಂತಲೂ ಭಿನ್ನನಾದ **ಸರ್ವಜ್ಞಕವಿ** ಎಂಬುವನೊಬ್ಬನುಂಟೆಂದು ತಿಳಿದು ಬರುತ್ತದೆ.

ಮೈಸೂರು ಸರ್ಕಾರದ ಪ್ರಾಚೀನ ಪುಸ್ತಕಾಲಯದಲ್ಲಿ ತಾಳೆಯೋಲೆ ಗ್ರಂಥ ಸಂಗ್ರಹದಲ್ಲಿ '**ಸರ್ವಜ್ಞಕವಿ**' ಕೃತ 'ಸರ್ವಜ್ಞಪದ' ಎಂಬ ಗ್ರಂಥವೊಂದಿದೆ. ಇದರ ಛಂದಸ್ಸು **ಚೌಪದ**। ಎಂದಿದೆ. ಈ ಸಂದರ್ಭವ ನೋಡಿದರೆ ತ್ರಿಪದಿಯ ಸರ್ವಜ್ಞಮೂರ್ತಿಯ ಮೇಲೆ ಈ ಚೌಪದಿಯ ಸರ್ವಜ್ಞನೊಬ್ಬ ಹುಟ್ಟಿ ಅವನೊಡನೆ ಸ್ಪರ್ಧಿಸಿರುವನೇನೋ ಎಂದು ಶಂಕೆಯುಂಟಾಗುತ್ತದೆ. ಅಲ್ಲದೆ ಅದೇ ಪುಸ್ತಕಾಲಯದಲ್ಲಿ **ಸರ್ವಜ್ಞಪದಗಳು** ಎಂಬ ಪ್ರಾಚೀನ ಗ್ರಂಥವೊಂದಿದೆ. ಇದರ ಛಂದಸ್ಸು **ಹಾಡುಗಳ** ರೀತಿ. ಇದನ್ನು ಬರೆದವನು **ಕವಿಸರ್ವಜ್ಞ** ಎಂಬುವನು. ಆದರೆ ಈ ಹಾಡುಗಬ್ಬವನ್ನು ಬರೆದವನು ತ್ರಿಪದಿಯ ಸರ್ವಜ್ಞಮೂರ್ತಿಯೋ ? ಅಥವಾ ಚೌಪದಿಯ ಸರ್ವಜ್ಞ ಕವಿಯೋ? ಎಂಬುದನ್ನು ನಿಶ್ಚಯಿಸಬೇಕಾಗಿದೆ. ಅಲ್ಲದೆ ಅದೇ ಪುಸ್ತಕಾಲಯದಲ್ಲಿ **ಸರ್ವಜ್ಞನ ಕಾಲಜ್ಞಾನ** ಎಂಬ ಗ್ರಂಥವೊಂದಿದೆ. ಇದರ ಕವಿ **ಸರ್ವಜ್ಞಮುನಿ** ಎಂದು ಹೇಳಿದೆ-

ಈ ಎಲ್ಲ ವಿಚಾರಗಳ ಮೇಲಿನಿಂದ ಕಾಲಜ್ಞಾನದ ಸರ್ವಜ್ಞಮುನಿ, ಚೌಪದಿಯ ಸರ್ವಜ್ಞಕವಿ, ಹಾಡುಗಳನ್ನು ಬರೆದ ಸರ್ವಜ್ಞ, ತ್ರಿಪದಿಗಳ ಪ್ರಸಿದ್ಧ **ಸರ್ವಜ್ಞಮೂರ್ತಿ** ಇವರು ಪರಸ್ಪರ ಭಿನ್ನರೋ ? ಅಥವಾ ಈ ಎಲ್ಲಾ ಗ್ರಂಥಗಳ ಕರ್ತನು ಒಬ್ಬನೋ? ಎಂಬುದು ಅವಶ್ಯವಾಗಿ ನಿರ್ಧರವಾಗಬೇಕಾಗಿದೆ. ಕರ್ಣಾಟಕ ಇತಿಹಾಸ ಸಂಶೋಧಕರು ಇತ್ತ ಕಡೆಗೆ ಅಗತ್ಯವಾಗಿ ಗಮನಿಸಬೇಕೆಂದು ನಮ್ಮ ವಿನಯಪೂರ್ವಕ ವಿಜ್ಞಾಪನೆ.

---

[1] ಶ್ರೀ ಉತ್ತಂಗಿಯವರ ಸರ್ವಜ್ಞ ವಚನ (ಸಾಹಿತ್ಯಾವೃತ್ತಿ) ಪೀಠಿಕೆ.

ಇದಲ್ಲದೆ ಸರ್ವಜ್ಞನ ಕಾಲಜ್ಞಾನ ವಚನಗಳಲ್ಲಿ ವಿಜಯನಗರವು ನಾಶವಾದುದು (೧೫೬೫) ಶ್ರೀರಂಗಪಟ್ಟಣವು ಆಂಗ್ಲರ ಕೈಸೇರಿದುದು(೧೭೯೯)ಈ ಮೊದಲಾದ ನವೀನ ವಿಚಾರಗಳಿವೆ. ಬಾದಾಮಿಯ ಒಂದು ತಾಳೆಯೋಲೆ ಪ್ರತಿಯಮೇಲೆ **'ಸರ್ವಜ್ಞಗಣೇಶ್ವರನು ನಿರೂಪಿಸಿದ ಕಾಲಜ್ಞಾನ ವಚನ'** ಎಂಬ ಹೆಸರುಳ್ಳ ಒಂದು ಬರೆಹವಿದೆಯೆಂದು ಪ್ರಥಮ ಮುದ್ರಣದ ಪೀಠಿಕೆಯಲ್ಲಿ ಉತ್ತಂಗಿಯವರು ಹೇಳಿದ್ದಾರೆ; ಅಲ್ಲದೆ ಪ್ರಥಮ ಮುದ್ರಣದ ೭೦ನೆಯ ಪುಟದಲ್ಲಿ **ಪರಮಾರ್ಥ** ಎಂಬ ಅಂಕಿತದ ಹಲವು ವಚನಗಳನ್ನು ನಾವು ಓದಬಹುದಾಗಿದೆ. ಶ್ರೀರಂಗಪಟ್ಟಣದ ಪತನದ ವಿಚಾರವನ್ನು ಹೇಳಿದ ಸರ್ವಜ್ಞಕವಿಯೂ, ಸಂಪಾದನೆಯ ಸಿದ್ಧವೀರಣಾಚಾರ್ಯನಿಂದ(೧೬೦೦)ಸಂಗ್ರಹಿಸಲ್ಪಟ್ಟ ತ್ರಿಪದಿಗಳ ಕರ್ತೃವಾದ ಸರ್ವಜ್ಞಮೂರ್ತಿಯೂ ಒಬ್ಬನೇ ಆಗಿರಲಾರನೆಂಬುದರಲ್ಲಿ ಎಳ್ಳಷ್ಟೂ ಅನುಮಾನವಿಲ್ಲ. ಆದುದರಿಂದ,

೧. ತ್ರಿಪದಿಗಳ ಸರ್ವಜ್ಞಮೂರ್ತಿಯು ಸಂಪಾದನೆಯ ಸಿದ್ಧವೀರಣಾಚಾರ್ಯನಿಗೆ ಹಿಂದಿನವನಾಗಿರಬೇಕು.

೨. ಶ್ರೀರಂಗಪಟ್ಟಣವು ಪತನವಾದ ವಿಚಾರವನ್ನು ಹೇಳಿದವನು ಆಧುನಿಕನಾದ ಸರ್ವಜ್ಞಮುನಿಯಾಗಿರಬೇಕು.

೩. 'ಪರಮಾರ್ಥ' ಎಂಬ ಅಂಕಿತದಿಂದ ತ್ರಿಪದಿಗಳನ್ನು ಬರೆದವನು ಸರ್ವಜ್ಞ ಮೂರ್ತಿಗಿಂತಲೂ ಭಿನ್ನನಾಗಿರಬೇಕು.

೪. ಚೌಪದ, ಹಾಡುಗಳು ಇವುಗಳನ್ನು ಬರೆದವನು ಸರ್ವಜ್ಞಮೂರ್ತಿಗಿಂತಲೂ, ಸರ್ವಜ್ಞಮುನಿಗಿಂತಲೂ ಭಿನ್ನನಾಗಿರಬೇಕು. 'ಪರಮಾರ್ಥ' ಎಂಬ ಅಂಕಿತದಿಂದಲೂ,ಆ ವಚನಗಳ ಶೈಲಿಯಿಂದಲೂ, ಈ ಕವಿಯು ಮೂಲ ಸರ್ವಜ್ಞಮೂರ್ತಿಗಿಂತಲೂ ಭಿನ್ನನಾಗಿರುವನು ಎಂದು ಹೇಳಬೇಕಾಗುತ್ತದೆ.

ಮೇಲಿನ ವಿಮರ್ಶೆಯಿಂದ ಸರ್ವಜ್ಞಮೂರ್ತಿಗಿಂತಲೂ ಕಾಲಜ್ಞಾನದ ಸರ್ವಜ್ಞಮುನಿಯು ಭಿನ್ನನಾಗಿರುವನೆಂದೂ,**ಚೌಪದಿ** ಹಾಗೂ **ಹಾಡುಗಳನ್ನು**

ಬರೆದ ಸರ್ವಜ್ಞಕವಿ ಎಂಬ ಮತ್ತೊಬ್ಬನಿರಲಿಕ್ಕೆ ಸಾಧ್ಯವಿದೆಯೆಂದೂ ಹೇಳ ಬೇಕಾಗುತ್ತದೆ.

## ಜೀವನ ಚರಿತ್ರೆ

ಧಾರವಾಡ ಜಿಲ್ಲೆಯ **ಮಾಸೂರು** ಗ್ರಾಮದಲ್ಲಿದ್ದ **ಬಸವರಸ** ಎಂಬ ಆರಾಧ್ಯ ಬ್ರಾಹ್ಮಣನು ತನ್ನ ಪತ್ನಿ ಮಲ್ಲಮ್ಮನು ಮಕ್ಕಳಿಲ್ಲದೆ ದುಃಖಿಸುತ್ತಿರಲು, ಪುತ್ರಕಾಂಕ್ಷಿಯಾದ ಆತನು ಕಾಶಿಯ ಮುಕ್ಕಣ್ಣನ ಸನ್ನಿಧಿಗೆ ಹೋಗಿ ಸ್ವಾಮಿಯ ಅನುಗ್ರಹವನ್ನು ಪಡೆದು ಊರಿಗೆ ಸಂತೋಷದಿಂದ ಓಂತಿರುಗುತ್ತಿದ್ದನು. ದಾರಿಯಲ್ಲಿ **ಅಂಬಲೂರಿಗೆ** ಬಂದು ಕಾಲಕರ್ಮ ಸಂಯೋಗದಿಂದ **ಕುಂಬಾರಮಾಳಿ**ಯೆಂಬುವಳನ್ನು ಕಂಡು ಪ್ರೀತಿಸಿ ಅವಳಲ್ಲಿ ಗರ್ಭದಾನವನ್ನು ಮಾಡಿ ತನ್ನ ಊರಿಗೆ ಹೊರಟುಹೋದನು. ಈ ಕುಂಬಾರಮಾಳಿಯ ಹೊಟ್ಟೆಯಲ್ಲಿಯೇ **ಸರ್ವಜ್ಞಮೂರ್ತಿಯು** ಉದಿಸಿದನು. ಕುಂಬಾರ ಸಾಲೆಯಲ್ಲಿ ಜನಿಸಿದುದರಿಂದ ಇವನಿಗೆ **ಸಾಲೆಯ ಸರ್ವಜ್ಞ** ಎಂಬ ಹೆಸರು ಬಂದಿತು.

ಈ ವೃತ್ತಾಂತದ ಬಗ್ಗೆ ಅನೇಕ ಊಹೆಗಳುಂಟಾಗಿವೆ. ಸರ್ವಜ್ಞನ ಮೇಲೆ ಅಭಿಮಾನವುಳ್ಳವನೊಬ್ಬನು ಅವನು ಸಂಕರಜನಸ್ಥಾಗಿದ್ದಾಗ್ಯೂ ಅವನು ಬ್ರಾಹ್ಮಣನಿಂದ ಜನ್ಮಸ್ಥನಾದನೆಂದು ತೋರಿಸುವುದಕ್ಕಾಗಿ ಈ ಕಥೆಯನ್ನು ಕಲ್ಪಿಸಿದನೆಂತಲೂ, ಸರ್ವಜ್ಞನು ಆರಾಧ್ಯ ಬ್ರಾಹ್ಮಣನಿದ್ದು ಮತಾಂತರ ಮಾಡಿದ್ದರಿಂದ ಅವನ ಮೇಲೆ ಸಿಟ್ಟಾಗಿ ಬೇರೊಬ್ಬನು ಈ ತರದ ಅಬದ್ಧ ಕಥೆಯನ್ನು ಅವನ ವಿಷಯದಲ್ಲಿ ಹುಟ್ಟಿಸಿದನೆಂತಲೂ, ಇನ್ನೂ ಕೆಲವರು ಸರ್ವಜ್ಞನಂತಹ ಕ್ರಾಂತಿಕಾರಕ ಇಲ್ಲವೆ ಶಕಪುರುಷರ ವಿಷಯವಾಗಿ ಈ ತೆರದ ಕಥೆಗಳು ಸಾಮಾನ್ಯವಾಗಿ ಅನೇಕ ಕಡೆಗಳಲ್ಲಿ ಹೇಳಲ್ಪಡುತ್ತಿರುವವೆಂದೂ, ಬೇರೆ ಕೆಲವರು ಇದು ನಿರಾಧಾರವಾದ ಕೇವಲ ಒಂದು ಕಟ್ಟುಕಥೆಯೆಂತಲೂ ಅಭಿಪ್ರಾಯಪಡುತ್ತಾರೆ. ಸರ್ವಜ್ಞನ ಓಲೆಯ ಗ್ರಂಥಗಳನ್ನು ನೋಡಿದರೆ ಈ ವಿಧದ ಪದ್ಯಗಳು ಪ್ರಾಯಶಃ ಹೊಸದಾಗಿ ಸೇರಿದುವೆಂದು ತಿಳಿಯುತ್ತದೆ.

ಆದರೆ ಈ ಪದ್ಯಗಳಲ್ಲಿ ಕೆಲವು ಸರ್ವಜ್ಞ ಕೃತವಾದವುಗಳಲ್ಲವೆಂದು ಖಂಡಿತ ವಾಗಿ ಹೇಳಬಹುದಾಗಿದ್ದರೂ ಸರ್ವಜ್ಞನ ಆತ್ಮವನ್ನು ನೋಡಿದರೆ ಈ ದಂತ ಕಥೆಯಲ್ಲಿಯೂ ಒಂದು ನಿಜಾಂಶವಿರಬಹುದೇನೋ ಎಂಬ ಸಂದೇಹ ಉಂಟಾ ಗುತ್ತದೆ. ಸರ್ವಜ್ಞನು ಖಂಡಿತವಾದಿ ಲೋಕವಿರೋಧಿ, ಮುಖದಿಚ್ಛೆಗೆ ಮಾತಾಡುವವನಲ್ಲ ಎಂಬೀ ಸಂಗತಿಯು ಅವನ ಪ್ರತಿಯೊಂದು ವಚನದಿಂದ ಲೂ ಹೊರಹೊಮ್ಮುತ್ತದೆ. ಹೀಗಾಗಿ ಸರ್ವಜ್ಞನು ತನ್ನ ಖಂಡನೆಯನ್ನು ಮೊದಲು ಮನೆಯಲ್ಲಿಯೇ ಪ್ರಾರಂಭಮಾಡಿದನೆಂದು ತೋರುತ್ತದೆ.

**ಗಂಡುತನ್ನದು ಎಂದು । ಲಂಡೆ ಸುತನೆಂಬುವಳು ।**
**ಖಂಡಪರಶುವಿನ ವರಪುತ್ರ ಆನು ನೆರೆ ।**
**ಕಂಡುದನೆ ನುಡಿವೆ ಸರ್ವಜ್ಞ ॥**

ಇದರಿಂದ ಆ ಬಾಲಕನ ಸ್ವಭಾವವು ಪ್ರಕಟವಾಗುತ್ತದೆ. ಸರ್ವಜ್ಞನು ತಾನು ಶಿವಪ್ರಸಾದದಿಂದ ಹುಟ್ಟಿದ ಮೂಲಕ ನಿಮಿತ್ತಕಾರಣರಾದ **ಬಸವರಸನೂ ಕುಂಬಾರ ಮಾಳಿಯೂ** ತನ್ನ ತಂದೆತಾಯಿಗಳಲ್ಲವೆಂದೂ, ತಾನು ಶಿವನಮಗ ನಾದುದರಿಂದ **ಪಾರ್ವತಿಯೇ** ತನಗೆ ತಾಯಿಯೆಂದೂ ಹೇಳುತ್ತಾನೆ. ಮಾತ್ರವ ಲ್ಲದೆ ತನಗೆ ಜನ್ಮವನ್ನು ಕೊಟ್ಟ **ಮಾಳಿ**ಯನ್ನು ತಾನು ಎಂದಿಗೂ ತಾಯಿ ಯೆಂದು ಕರೆಯಲಿಕ್ಕಿಲ್ಲವೆಂದೂ ಒಂದುಪಕ್ಷ ಹೀಗೆ ಕರೆಯಬೇಕಾದಲ್ಲಿ ಪರ ಸ್ತ್ರೀಯರೆಲ್ಲರನ್ನೂ **ತಾಯಿ** ಎಂದು ಕರೆಯುವ ಅರ್ಥದಲ್ಲಿಯೇ ಈ ಶಬ್ದವನ್ನು ಪ್ರಯೋಗಿಸುವೆನೆಂದೂ ಹೇಳುತ್ತಾನೆ.

**ತಾ, ಯೆಂಬೆನಲ್ಲದೆ । ತಾಯಿ ತಾನೆಂಬೆನೆ ? ।**
**ತಾಯಿಯೆಂದಾನು—ನುಡಿದೇನು, ಪರಸ್ತ್ರೀಯ ।**
**ತಾಯಿಯೆಂದೆಂಬೆ ! ಸರ್ವಜ್ಞ ॥**

ಇದರಿಂದ ಅವನ ಸ್ವಭಾವವು ಎಂತಹುದೆಂದು ಗೊತ್ತಾಗುತ್ತದೆ. ಈ ಸ್ವಭಾವವು ಅವನು ಬಾಲಕನಾಗಿರುವಾಗಲೇ ಮೊಳೆಯಿತೆಂದು ತಿಳಿಯು

ತ್ತದೆ. ಈ ಗುಣಕ್ಕಾಗಿ ಅವನು ಎಳೆಯ ಪ್ರಾಯದಲ್ಲಿಯೇ ಮನೆಯಿಂದ ಹೊರಗೆ ಹಾಕಲ್ಪಟ್ಟನು. ಅಂದಿನಿಂದ ಅವನು ವೈರಾಗ್ಯವನ್ನು ತಾಳಿ ಏಕಾಂಗಿಯಾಗಿ ತನ್ನ ಜನಸೇವೆಯ ಆನಂದಕ್ಕಾಗಿ ತನ್ನ ಜೀವನಕಾಲವನ್ನೇ ಕಳೆದಂತೆ ಕಂಡುಬರುತ್ತದೆ.

ನೂಕಿದರು ಅವರಾಗ। ಕುಹಕತನದೊಳು ಬೇಗ।
ಲೋಕದೊಳಗೆಲ್ಲ-ಕಂಡುದನು ನುಡಿದು ತಾ-।
ನೇಕವಾಗಿಹನು ಸರ್ವಜ್ಞ ॥

ಹೀಗೆ ಕುಂಬಾರಸಾಲೆಯಿಂದ **ಹಿಂಡನಗಲಿದ ಗಜದಂತೆ** ಹೊರಟು ಹೋದ ಸರ್ವಜ್ಞನು ಎಲ್ಲಿಗೆ ಹೋದನು ? ಯಾರಲ್ಲಿ ವಿದ್ಯಾಭ್ಯಾಸಮಾಡಿದನು ? ಇವನಿಗೆ ಶಿವದೀಕ್ಷೆಯನ್ನು ಕೊಟ್ಟ ಗುರುವಾರು ? ಇವನು ಎಷ್ಟು ಕಾಲ ಬಾಳಿದನು ? ಎಂದು, ಯಾವೆಡೆಯಲ್ಲಿ, ಐಕ್ಯನಾದನು ? ಇವನ ಸಮಾಧಿಸ್ಥಾನವೆಲ್ಲಿ ? ಇತ್ಯಾದಿ ವಿಚಾರಗಳನ್ನು ಕಾಲಪುರುಷನು ತನ್ನ ಬೃಹದ್ಗರ್ಭದೊಳಡಗಿಸಿಕೊಂಡಿದ್ದಾನೆ. ಸಾಹಿತ್ಯಭಕ್ತರೂ, ಇತಿಹಾಸ ಪಂಡಿತರೂ, ಈ ರಹಸ್ಯಗಳನ್ನರಿಯಲಿಕ್ಕೆ ತವಕಗೊಂಡಿದ್ದರೂ ಮಾರ್ಗತೋರದೆ ಮೂಕರಾಗಿ ಹೋಗಿದ್ದಾರೆ.

ಕುಂಬಾರಸಾಲೆಯಿಂದ ಹೊರಟ ಮೇಲೆ ಅವನ ವಿಚಾರವನ್ನು ತಿಳಿಯಲು ನಮಗೆ ಆಧಾರಗಳಿಲ್ಲವಾಗಿದೆ. ಕವಿಯ ವಚನಗಳನ್ನು ಓದಿದ ಅನುಭವದ ಮೇಲಿಂದ ನಾವು ಕೆಲವು ಊಹೆಗಳನ್ನು ಮಾತ್ರ ಕಟ್ಟಬಹುದಷ್ಟೆ. ಇದು ಹೊರತು ನಮಗೆ ಅನ್ಯಥಾ ಮಾರ್ಗವಿಲ್ಲವಾಗಿದೆ.

ಈ ಕವಿಯು ಕನಿಷ್ಠ ಪಕ್ಷ ಅರ್ಧಶತಮಾನಕಾಲವಾದರೂ ಬದುಕಿರಬಹುದೆಂದೂ, ಕುಂಬಾರಸಾಲೆಯಿಂದ ಹೊರಟ ಮೇಲೆ ಅನೇಕ ಗುರು-ಮಠಗಳನ್ನೂ ತೀರ್ಥಕ್ಷೇತ್ರಗಳನ್ನೂ ಸಂಚರಿಸಿ ಹಲವು ವಿದ್ವಾಂಸರನ್ನೂ ಯೋಗಿಗಳನ್ನೂ ಸಂದರ್ಶಿಸಿ **'ಗರ್ವದಿಂದಿರದೆ' 'ಸರ್ವರೊಳಗೊಂದು ನುಡಿಗಲಿತು' 'ವಿದ್ಯದಪರ್ವತವೆ ಆಗಿ'** ಸರ್ವಜ್ಞನೆನಿಸಿಕೊಂಡು **ನೆಚ್ಚಿ**

**ಒಂದೂರೊಳಿರದೆ, ಒಬ್ಬರಿಚ್ಛೆಯಲಿ ನಡೆಯದೆ, ಮಂಡೆಬೋಳಿಸಿ ಕೊಂಡು, ತುಂಡುಗಂಬಳಿ ಹೊದೆದು, ಹಿಂಡನಗಲಿದ ।ಗಜದಂತೆ ಕರದಿ ಕಪ್ಪರ ಹಿಡಿದು** ಊರೂರು ತಿರುಗುತ್ತ **'ಶಿವಿವರಿಂ ಸಿರಿವಂತರಾರು'?** ಎಂದು ಹೇಳಿಕೊಂಡು ದೇಶಸಂಚಾರಮಾಡುತ್ತ, ಕನ್ನಡಿಗರ ಕೆಳೆಯನ್ನು ಕೊಂಡಾಡುತ್ತ ಜನರಿಗೆ ನಾನಾಪ್ರಕಾರದ ನೀತಿ ಧರ್ಮಗಳನ್ನು ಬೋಧಿಸುವುದರ ಮೂಲಕ ಲೋಕಸೇವೆಮಾಡುತ್ತ ತನ್ನಜೀವನವನ್ನು ಸವೆಯಿಸಿ ಕಡೆಗೆ ಶಿವಯೋಗಮಾರ್ಗದಿಂದ ಭಗವಂತನಲ್ಲಿ ಬೆರೆದನೆಂದು ತೋರುತ್ತದೆ. ಒಟ್ಟಿನಲ್ಲಿ ಇವನ ಜನನ ಬಾಲ್ಯಗಳನ್ನು ಹೇಳುವಂತೆ ಇವನ ಯೌವನ ವಾರ್ಧಿಕ್ಯ ಕಾಲ ವಿಚಾರವನ್ನು ಹೇಳುವುದಕ್ಕೆ ಸಾಧನ ಸಂಪತ್ತು ಕಡಿಮೆಯಾಗಿದೆಯೆಂದು ಹೇಳಬಹುದು.

## ಹೆಸರಿನ ವಿಚಾರ

ಸರ್ವಜ್ಞಮೂರ್ತಿಯ ಜನ್ಮನಾಮವಾವುದೆಂಬುದು ತಿಳಿದುಬಂದಿಲ್ಲ. ಸಿದ್ಧಾರ್ಥನಿಗೆ ತಪಸ್ಸಿದ್ಧಿಯಾದ ಮೇಲೆ ಬುದ್ಧನೆಂಬ ಘನವಾದ ನಾಮ ಪ್ರಾಪ್ತವಾದಂತೆ ಇವನು ವಿದ್ಯದ ಪರ್ವತವಾಗಿ ತನ್ನ ಸಿಡಿಲಿನ ನುಡಿಗಳಿಂದ ಜನರನ್ನು ಬೆರಗುಗೊಳಿಸಿದ ಮೇಲೆ ಇವನಿಗೆ ಮಹಾಜನರಿಂದ **'ಸರ್ವಜ್ಞ'** ಎಂಬ ಬಿರುದು ಬಂದಿರಬಹುದೆಂದು ತೋರುತ್ತದೆ. ಕವಿಯೂ ತನ್ನ ಮೊದಲಿನ ಹೆಸರನ್ನು ಮಾಜಿ ಸರ್ವಜ್ಞನೆಂದೇ ಹೇಳಿಕೊಂಡಿದ್ದಾನೆ. ಶ್ಯಾನುಭೋಗ ನಾರಣಪ್ಪನು 'ಕುಮಾರವ್ಯಾಸ' ಎಂದು ಹೇಳಿಕೊಂಡಂತೆ ನಂದಳಿಕೆ ಲಕ್ಷ್ಮೀನಾರಣಪ್ಪನು 'ಮುದ್ದಣ' ಎಂದು ಹೇಳಿಕೊಂಡಂತೆ, ಇವನು ತನ್ನ ಜನ್ಮ ನಾಮವನ್ನು ಬಿಟ್ಟು ತನಗೆ ಪ್ರಿಯವಾದ 'ಸರ್ವಜ್ಞ' ಎಂಬ ಹೆಸರಿನಿಂದಲೇ ಕರೆದುಕೊಂಡುದು ಕ್ರಮಪ್ರಾಪ್ತವಾಗಿದೆ. ವೀರಶೈವರಲ್ಲಿ ವಿರಕ್ತಾಶ್ರಮವನ್ನು ಸ್ವೀಕರಿಸಿದವರು ತಮ್ಮ ಪೂರ್ವಾಶ್ರಮದ ಹೆಸರನ್ನು ಬದಲಾಯಿಸಿ ಹೊಸ ಹೆಸರನ್ನು ಇಟ್ಟುಕೊಳ್ಳುವುದುಂಟು. ಸರ್ವಜ್ಞನು ತಾನು ವಿರಕ್ತನಾದ ಮೇಲೆ ಹೀಗೇನಾದರೂ ತನ್ನ ಪೂರ್ವದ ಹೆಸರನ್ನು ತ್ಯಜಿಸಿದನೋ ಏನೋ ತಿಳಿಯದು.

# ಅಂಕಿತದ ವಿಚಾರ

ಸರ್ವಜ್ಞಮೂರ್ತಿಯು ತನ್ನ ತ್ರಿಪದಿಗಳನ್ನೆಲ್ಲಾ 'ಸರ್ವಜ್ಞ' ಎಂಬ ಅಂಕಿತದಲ್ಲಿ ಬರೆದಿದ್ದಾನಷ್ಟೆ. ವಚನಗಳ ಕಡೆಯಲ್ಲಿ ಬರುವ ಈ ವಿಧದ ಹೆಸರನ್ನು 'ಅಂಕಿತ' ಎಂದು ಕರೆಯುತ್ತಾರೆ. ಕನ್ನಡ ಕವಿಗಳಿಗೆಲ್ಲಾ ಒಂದೊಂದು ಅಂಕಿತವಿದೆಯೆಂದು ಹೇಳಬಹುದು. ಆದರೆ ಕೆಲವು ಕವಿಗಳು ಇದಕ್ಕೆ ಅಪವಾದವಾಗಿಯೂ ಇದ್ದಾರೆ. ಕುಮಾರವ್ಯಾಸನು **'ವೀರನಾರಾಯಣ'** ಎಂದೂ, ಲಕ್ಷ್ಮೀಶನು '**ಲಕ್ಷ್ಮೀರಮಣ**' ಎಂದೂ ಮಲ್ಲಣಾರ್ಯನು **ಅಮರಗೊಂಡದ ಮಲ್ಲಿಕಾರ್ಜುನ**'ಎಂದೂ, ನಿಜಗುಣ ಶಿವಯೋಗಿಯು '**ಶಂಭುಲಿಂಗ**'ಎಂದೂ ಹರಿಹರ, ರಾಘವಾಂಕ ಭೀಮಕವಿ, ಪಂಡಿತಾರಾಧ್ಯ ಮೊದಲಾದವರು '**ಹಂಪೆಯ ವಿರೂಪಾಕ್ಷ**'ಎಂದೂ ತಮ್ಮ ತಮ್ಮ ಅಂಕಿತ ಗಳನ್ನುಹೇಳಿಕೊಂಡಿದ್ದಾರೆ ಪುರಂದರ, ಕನಕ, ಜಗನ್ನಾಥ ಮೊದಲಾದ ಹರಿ ದಾಸರು, ಪುರಂದರ ವಿಠಲ, ಕಾಗಿನೆಲೆಯಾದಿಕೇಶವ, ಜಗನ್ನಾಥವಿಠಲ ಮೊದ ಲಾದ ಅಂಕಿತಗಳನ್ನು ಹೇಳಿಕೊಂಡಿದ್ದಾರೆ. ಬಸವಾದಿ ಶರಣರೂ ಕೂಡ ತಮ್ಮ ತಮ್ಮ ವಚನಗಳಲ್ಲಿ **ಕೂಡಲಸಂಗಮ, ಕಪಿಲಸಿದ್ಧಮಲ್ಲಿಕಾರ್ಜುನ** ಈ ಮೊದಲಾದ ಅಂಕಿತಗಳನ್ನು ಹೇಳಿದ್ದಾರೆ. ವೀರಶೈವ ಹಾಗೂ ಬ್ರಾಹ್ಮಣ ಕವಿಗಳು ಪ್ರಾಯಃ ಅಂಕಿತವಿಲ್ಲದೆ ಗ್ರಂಥವನ್ನೇ ಬರೆದಿಲ್ಲವೆಂದು ಹೇಳ ಬಹುದು.

ಕನ್ನಡ ವಚನಕಾರರ ಪದ್ಧತಿಯಂತೆಯೇ ಸರ್ವಜ್ಞಮೂರ್ತಿಯೂ ಕೂಡ 'ಸರ್ವಜ್ಞ' ಎಂಬ ಅಂಕಿತವನ್ನು ಸ್ವೀಕರಿಸಿದ್ದಾನೆ. ಈ ಅಂಕಿತವು ಕವಿಯ ಹೆಸರೋ? ಭಗವಂತನಾದ ಸರ್ವಜ್ಞನ ಹೆಸರೋ? ಎಂಬುದು ವಿಚಾರಾರ್ಹವಾಗಿದೆ.

ಸರ್ವಜ್ಞನು ಖಂಡಿತವಾದಿಯಾದರೂ ನಿರಹಂಕಾರಿಯು. ಇವನು 'ಗರ್ವದಿಂದಿರದೆ ಸರ್ವರೊಳಗೊಂದೊಂದು ನುಡಿ ಕಲಿತವನು.' ತಾನು ಮಹಾಕವಿ ಯಾಗಬೇಕೆಂಬ ಹೆಮ್ಮೆಯಿಂದ ಗ್ರಂಥವನ್ನು ಹೇಳದೆ 'ಪನ್ನಗಧರನು ತನ್ನ ಮನಸ್ಸಿಗೆ ಕೊಟ್ಟ ನೆನಹಿನಿಂದ' ಗ್ರಂಥವನ್ನು ಹೇಳಿದವನು. ಇವನು

ಗ್ರಂಥವನ್ನಾದರೂ ಪೂರ್ತಿಯಾಗಿ ಬರೆಯಬೇಕೆಂಬ ಇಚ್ಛೆಯಿಲ್ಲದ,-ಕೀರ್ತಿ ಕಾಂಕ್ಷೆಯಿಲ್ಲದ-ವಿರಕ್ತನು. **'ಬಸವನೆಂದೊಡೆ ಪಾಪ ದೆಸೆಗೆಟ್ಟುಹೋಗುವುದು'** ಎಂದು ಹೇಳಿ ಬಸವಾದಿಗಳಲ್ಲಿ ಭಕ್ತಿಯನ್ನು ವ್ಯಕ್ತಪಡಿಸಿದವನು. ಶಿವಶರಣರ ಹೃದಯವನ್ನು ತಿಳಿದವನು. ಆದುದರಿಂದ ಕನ್ನಡ ವಚನಕಾರರಾದ ಶರಣರು ತಮ್ಮ ಇಷ್ಟದೈವದ ಅಂಕಿತದಲ್ಲಿ ವಚನಗಳನ್ನು ಹಾಡಿದಂತೆ ಜಗಕೆಲ್ಲ ಕರ್ತನಾದ ಒಬ್ಬನೇ ದೇವನಾದ 'ಸರ್ವಜ್ಞ' ಪರಮೇಶ್ವರನ ಅಂಕಿತವನ್ನೇ ತಾನು ಸ್ವೀಕರಿಸಿರುವನೆಂದೂ ಹೆಮ್ಮೆಯಿಂದ ತನ್ನ ಹೆಸರನ್ನು ಅಂಕಿತವಾಗಿ ಇಡಲಿಲ್ಲವೆಂದೂ ಹೇಳಿರುತ್ತಾನೆ.

## ಸರ್ವಜ್ಞನ ಕಾಲ

ಹಿಂದೆ ಹೇಳಿದಂತೆ ಅನೇಕ ಮಂದಿ ಸರ್ವಜ್ಞರು ಇರುವುದಾಗಿ ತಿಳಿದಿರುವುದರಿಂದ 'ತ್ರಿಪದಿಯ ಸರ್ವಜ್ಞನ' ಕಾಲವು ಇಂತಹುದೇ ಎಂದು ನಿರ್ಣಯಿಸುವುದು ಕಷ್ಟವಾಗಿದೆ. ಶ್ರೀ ಉತ್ತಂಗಿಯವರು ಕವಿಯು ಬದುಕಿದ ಕಾಲವು ಸುಮಾರು ೧೬ನೆಯ ಶತಮಾನವಾಗಿರಬಹುದೆಂದು ತರ್ಕಿಸಿದ್ದಾರೆ. 'ಸರ್ವಜ್ಞನ ಸಂದೇಶ'ವನ್ನು ಬರೆದ 'ಚಿಕ್ಕಕೋರಿರು' ಅದಕ್ಕೆ ಅಸ್ತುಪಟ್ಟಿದ್ದಾರೆ. ಸಂಪಾದನೆಯ ಸಿದ್ಧವೀರಣಾಚಾರ್ಯನು ಇವನ ವಚನಗಳನ್ನು ಸಂಗ್ರಹಿಸಿರುವುದನ್ನು ನೋಡಿದರೆ ಕವಿಯು ೧೬ನೆಯ ಶತಮಾನಕ್ಕಿಂತ ಪೂರ್ವದವನಾಗಿರಬೇಕೆಂದು ಕಾಣುತ್ತದೆ. ಕನ್ನಡ ಕವಿಚರಿತ್ರೆಕಾರರೂ ಈ ಮಾತನ್ನು ಹೇಳಿದ್ದಾರೆ. (ಭಾಗ. ೨. ಪುಟ ೫೩೩) ಎಷ್ಟು ಪೂರ್ವದವನೋ ಹೇಳಲಾಗದು.

## ಸರ್ವಜ್ಞನ ಛಂದಸ್ಸು

ಸರ್ವಜ್ಞನ ಕೀರ್ತಿ ಕನ್ನಡ ನಾಡಿನಲ್ಲಿ ಗೋಪಾಲರಿಂದ ಭೂಪಾಲರವರೆಗೆ ಹಬ್ಬಲಿಕ್ಕೆ ಕವಿಯ ವ್ಯಕ್ತಿತ್ವದ ಜತೆಗೆ ಅವನು ಆರಿಸಿಕೊಂಡ ಛಂದಸ್ಸೂ ಒಂದು ಕಾರಣವಾಗಿದೆ. 'ತ್ರಿಪದಿ'ಗಳನ್ನು ನಾವು ಬೇಕೆಂತಲೇ ಸರ್ವಜ್ಞನ ಛಂದಸ್ಸೆಂದು ಕರೆದಿದ್ದೇವೆ. ಅನೇಕ ಮಹಾಕವಿಗಳು ತ್ರಿಪದಿಗಳನ್ನು ತಮ್ಮ

ಕಾವ್ಯಗಳಿಗೆ ಉಪಯೋಗಿಸಿಕೊಂಡಿದ್ದರೂ, ಅನೇಕರು ತ್ರಿಪದಿಯಲ್ಲಿಯೇ ಗ್ರಂಥನಿರ್ಮಾಣಮಾಡಿದ್ದರೂ, ತ್ರಿಪದಿಗಳು ಸರ್ವಜ್ಞನಕೈಲಿ ಪಳಗಿದಂತೆ, ಸರಸವಾದಂತೆ, ಭಾವಪೂರ್ಣವಾದಂತೆ, ಚಿತ್ತಾಕರ್ಷಕವಾದಂತೆ, ಮತ್ತಾವ ಕವಿಯಿಂದಲೂ ಆಗಿಲ್ಲ./ ಕನ್ನಡ ಸಾಹಿತ್ಯದಲ್ಲಿ ಆದಿಪಂಪನ ವೃತ್ತಗಳೂ, ಹರಿಹರನ ರಗಳೆಗಳೂ, ಬಸವೇಶ್ವರನ ವಚನಗಳೂ, ಲಕ್ಷ್ಮೀಶನ ವಾರ್ಧಕ ಗಳೂ, ಚಾಮರಸನ ಭಾಮಿನಿಗಳೂ, ಷಡಕ್ಷರನ ಕಂದಗಳೂ, ರತ್ನಾಕರನ ಸಾಂಗತ್ಯಗಳೂ, ಪುರಂದರದಾಸರ ಹಾಡುಗಳೂ ಪ್ರಸಿದ್ಧವಾಗಿರುವಂತೆ ಸರ್ವಜ್ಞನ ತ್ರಿಪದಿಗಳೂ ಜನರಲ್ಲಿ ವಿಖ್ಯಾತವಾಗಿವೆ.

'ತ್ರಿಪದಿ'ಯ ಛಂದಸ್ಸು ಸಂಸ್ಕೃತಜನ್ಯವಲ್ಲ. ದ್ರಾವಿಡಕ್ಕೆ ಸೇರಿದುದು. ನಾಗವರ್ಮನು ( ಕ್ರಿ. ಶ. ೯೯೦ ) ತನ್ನ 'ಛಂದೋಂಬುಧಿ'ಯಲ್ಲಿ ತ್ರಿಪದಿಯ ಲಕ್ಷಣವನ್ನು ಹೇಳಿದ್ದಾನೆ. ನಾಗವರ್ಮನ ಸಮಕಾಲೀನನಾದ ರನ್ನನೂ ತನ್ನ ಗದಾಯುದ್ಧದಲ್ಲಿ ತ್ರಿಪದಿಯನ್ನು ಸೇರಿಸಿದ್ದಾನೆ. ಸೋಮರಾಜನು ಉದ್ಭಟ ಕಾವ್ಯದಲ್ಲಿಯೂ, ಷಡಕ್ಷರದೇವನು ರಾಜಶೇಖರವಿಳಾಸದಲ್ಲಿಯೂ ತ್ರಿಪದಿಗಳನ್ನು ಉಪಯೋಗಿಸಿಕೊಂಡಿದ್ದಾರೆ. ಇದರಿಂದ ನಾಗವರ್ಮನ ಕಾಲದಿಂದ ಇಂದಿನವರೆಗೆ ಅಂದರೆ ಸುಮಾರು ಸಾವಿರ ವರ್ಷಗಳಿಂದ ಕನ್ನಡಿಗರಲ್ಲಿ ತ್ರಿಪದಿಗಳು ಬಳಕೆಯಲ್ಲಿವೆಯೆಂದು ಹೇಳಬಹುದಾಗಿದೆ.

ವೀರಶೈವ ಕವಿಗಳನೇಕರು ತ್ರಿಪದಿಗಳಲ್ಲಿಯೇ ತಮ್ಮ ಗ್ರಂಥಗಳನ್ನು ಬರೆದಿದ್ದಾರೆ. ಇಂಥವುಗಳಲ್ಲಿ ನಿಜಗುಣಶಿವಯೋಗಿಯ **ಪುರಾತನ ತ್ರಿವಿಧಿ**ಯೂ, ಬಸವಲಿಂಗ ಶರಣರ **ಗುರುಕರುಣ ತ್ರಿಪದಿಯೂ, ಪುರಾತನ ದೇವಿಯರ ತ್ರಿಪದಿಯೂ** ಮುಖ್ಯವಾಗಿವೆ.

## ತ್ರಿಪದಿಯ ಲಕ್ಷಣ

'ತ್ರಿಪದಿ'ಗಳಿಗೆ ತಿವಳಿ, ತಿವದಿ, ಎಂಬ ಬೇರೆ ಹೆಸರುಗಳೂ ಉಂಟು. ಸರ್ವಜ್ಞನ ವಚನಗಳೆಲ್ಲವೂ ತ್ರಿಪದಿಗಳಲ್ಲಿರುವುದರಿಂದ ಅವುಗಳ ಲಕ್ಷಣವನ್ನು ತಿಳಿಯುವುದು ಆವಶ್ಯಕವಾಗಿದೆ. ಅದನ್ನಿಲ್ಲಿ ಸಂಗ್ರಹವಾಗಿ ಹೇಳಲಾಗಿದೆ.

'ತ್ರಿಪದಿ' ಅಂದರೆ ಮೂರು ಪಾದವುಳ್ಳ ಪದ್ಯ ಎಂದರ್ಥ. ಮೊದಲನೆಯ ಪಾದದಲ್ಲಿ ೨೦ ಮಾತ್ರೆಗಳೂ, ಎರಡನೆಯ ಪಾದದಲ್ಲಿ ೧೮ ಮಾತ್ರೆಗಳೂ, ಮೂರನೆಯ ಪಾದದಲ್ಲಿ ೧೩ ಮಾತ್ರೆಗಳೂ ಬರುತ್ತವೆ. ಇತರ ಪದ್ಯಗಳಂತೆ ಇದರಲ್ಲಿಯೂ ದ್ವಿತೀಯಾಕ್ಷರವು ಪ್ರಾಸವೆನಿಸುತ್ತದೆ. ಪ್ರಥಮ ಪಾದದಲ್ಲಿ ಅರ್ಧಚರಣವಾದ ಮೇಲೆ ಉಳಿದರ್ಧವಾದ ಮೇಲೂ ಮೊದಲು ಬಂದ ಪ್ರಾಸವೇ ಬರುತ್ತದೆ. ಇದನ್ನು ತ್ರಿಪದಿಯ ಅಸಾಧಾರಣ ಲಕ್ಷಣವೆನ್ನಬಹುದು. ಕೆಲವರು ತ್ರಿಪದಿಗಳನ್ನು ಹೇಳುವಾಗ ದ್ವಿತೀಯ ಪಾದದ ಮೂರು ಗಣಗಳವರೆಗೆ ಹೇಳಿ ಮತ್ತೆ ಆ ಎರಡನೆಯ ಸಾಲನ್ನು ಮೊದಲಿನಿಂದ ಪ್ರಾರಂಭಿಸುತ್ತಾರೆ. ಈ ಪದ್ಧತಿಯು ಹಳ್ಳಿಗರು ಹೇಳುವ ತ್ರಿಪದಿ ಛಂದಸ್ಸಿನ **ಒನಕೆವಾಡು** ಗಳಲ್ಲುಂಟೆಂದು ಹೇಳಬಹುದು.

ನಾಗವರ್ಮನು ತನ್ನ ಛಂದೋಂಬುಧಿಯಲ್ಲಿ ತ್ರಿಪದಿಯ ಲಕ್ಷಣವನ್ನು **ಬಿಸರುಹೋದ್ಭವಗಣಂ ರಸದಶಸ್ಥಾನದೊಳ್ । ಬಿಸರುಹ ನೇತ್ರಗಣ ಮೆಂಬಕರ್ಮಳಿದುವು । ಬಿಸರುಹ ನೇತ್ರೆತ್ರಿಪದಿಗೆ ॥'** ಎಂದು ಹೇಳಿದ್ದಾನೆ. ಈ ತ್ರಿಪದಿಯಲ್ಲಿ ಆರು ಮತ್ತು ಪತ್ತನೆಯಗಣ ಬ್ರಹ್ಮಗಣವಾಗಿರಬೇಕೆಂದು ನಾಗವರ್ಮನ ಮತ. ಆದರೆ ಸರ್ವಜ್ಞ, ಷಡಕ್ಷರದೇವ, ಸೋಮರಾಜ ಕವಿಗಳು ಹೇಳುವ ತ್ರಿಪದಿಗಳಲ್ಲಿ ರಸ ದಶಸ್ಥಾನದಲ್ಲಿ ಪ್ರಾಯೇಣ ನಾಗವರ್ಮನು ಹೇಳಿದ ಲಕ್ಷಣವಿಲ್ಲ. ಕವಿಚಕ್ರವರ್ತಿ ರನ್ನನು ಗದಾಯುದ್ಧದಲ್ಲಿ ಹೇಳಿರುವ 'ತಿವಳಿ'ಯು ಇವೆಲ್ಲಕ್ಕೂ ಭಿನ್ನವಾಗಿದೆ.

ತ್ರಿಪದಿ ॥ ಪದ್ಯರಚನೆಯೊಳ್ ಕಾಳಿದಾಸನುಂ ।
ಗದ್ಯರಚನೆಯೊಳ್ ಬಾಣನುಂ ಮುಂ ಕವಿಗಳಿರ್ವರುಂ ॥
ನೆಗಳ್ದರದರಿಂ ಸತ್ಕವಿಗಳಿರ್ವರ್ ಎಮಗಭಿವಂದ್ಯರ್ ॥

ಕವಿರತ್ನನ ಈ ತ್ರಿಪದಿಯ ಲಕ್ಷಣವು ಯಾವ ಛಂದೋಗ್ರಂಥದಲ್ಲಿದೆಯೋ ತಿಳಿದುಬಂದಿಲ್ಲ. ರನ್ನನೂ ನಾಗವರ್ಮನೂ ಸಮಕಾಲೀನರಾದುದರಿಂದ ಆ ಮಹಾಕವಿಗಳಿಬ್ಬರ ಕಾಲದಲ್ಲಿಯೇ ತ್ರಿಪದಿಯು ಕನ್ನಡ ನಾಡಿನಲ್ಲಿ, ಮೇಲೆಕಂಡ ಕವಿಗಳು ಹೇಳಿರುವ ಬೇರೆ ಬೇರೆ ರೂಪದಿಂದ

ರೂಢಿಯಲ್ಲಿದ್ದಿತೆಂದು ತೋರುತ್ತದೆ. ಇಲ್ಲವಾದರೆ ಆ ಕವಿಗಳಿಬ್ಬರೂ ತಮ್ಮ ತಮ್ಮ ಗ್ರಂಥವಲ್ಲಿ ತ್ರಿಪದಿಗಳನ್ನು ಈ ರೀತಿಯಾಗಿ ಬೇರೆ ಬೇರೆಯಾಗಿ ನಿರೂಪಿಸುತ್ತಿದ್ದರೆಂತು?

## ಕವಿಯ ಜಾಣ್ಮೆ

ತನ್ನ ಗ್ರಂಥವನ್ನು ಬರೆಯಲಿಕ್ಕೆ ಸರ್ವಜ್ಞನು ಕೇವಲ ಅಪ್ರಸಿದ್ಧವಾದ ಹಾಗೂ ಕನ್ನಡಮಯವಾದ ಛಂದಸ್ಸನ್ನೇ ಹುಡುಕಿಕೊಂಡಿದ್ದಾನೆ. ತ್ರಿಪದಿಯ ಕಾಡುಕೊರಡನ್ನು ಸ್ಫುರತರುವನ್ನಾಗಿ ಮಾಡಿದ್ದಾನೆ. ಇದ್ದಿಲನ್ನು ವಜ್ರವಾಗಿ ಮಾರ್ಪಡಿಸಿದ್ದಾನೆ. ಪಾಮರರ ಒನಕೆವಾಡಿನಲ್ಲಿದ್ದ ತ್ರಿಪದಿಗಳು ಸರ್ವಜ್ಞನ ದಸ್ತಗುಣದಿಂದ ರಾಜನೀತಿಗಳಾಗಿ ಅರಮನೆಗಳನ್ನು ಕೂಡ ಪ್ರವೇಶಿಸುವಂತಾದುವು. ಇದರಲ್ಲಿ ಸರ್ವಜ್ಞನ ನೈಪುಣ್ಯವೆಂತಹುದೆಂಬುದನ್ನು ನಾವು ಊಹಿಸಬಹುದು. ಪ್ರತಿಭಾಶಾಲಿಗಳಾದ ಕವಿಗಳೆಲ್ಲರೂ ಜನಸೇವೆಗಾಗಿ ಸರ್ವಜ್ಞನ ಮಾರ್ಗವನ್ನೇ ಅನುಸರಿಸಿದಂತೆ ತೋರುತ್ತದೆ. ಮಹಾಕವಿ ಹರಿಹರದೇವನು ಪ್ರೌಢರು ಪರಿಹಾಸ್ಯಮಾಡುತ್ತಿದ್ದ ರಗಳೆಯ ಛಂದಸ್ಸಿನಲ್ಲಿಯೇ ಶಿವಶರಣರ ಕಥೆಗಳನ್ನೆಲ್ಲಾ (ರಘಟಾಕಾವ್ಯ) ಬರೆದನು. ಮಹಾತ್ಮಕೆರೆಯ ಪದ್ಮರಸನು ತನ್ನ **ದೀಕ್ಷಾಬೋಧೆ**ಯಲ್ಲಿ ಹರಿಹರನ ಮಾರ್ಗವನ್ನೇ ಹಿಂಬಾಲಿಸಿದನು. ಉಭಯಕವಿ ಕಮಲರವಿ ರಾಘವಾಂಕ ಪಂಡಿತನು ದೇಶೀಯ ಛಂದಸ್ಸೆನಿಸಿದ ಷಟ್ಪದಿಗಳಲ್ಲಿಯೇ ತನ್ನ ಷಟ್ಕಾವ್ಯಗಳನ್ನೂ ಬರೆದನು. ಸಕಲ ಶಾಸ್ತ್ರವಿಶಾರದನಾದ ನಿಜಗುಣ ಶಿವಯೋಗಿಯು ತನ್ನ ಏಳು ಕನ್ನಡ ಗ್ರಂಥಗಳನ್ನೂ ರಗಳೆ, ಸಾಂಗತ್ಯ, ತ್ರಿಪದಿ, ಹಾಡುಗಳು, ವಚನ ಎಂಬೀ ವಿವಿಧ ಛಂದಸ್ಸುಗಳಲ್ಲಿಯೇ ಬರೆದನು. ಬಸವೇಶ್ವರನು ಬಿಡುಗನ್ನಡ ವಚನಗಳಲ್ಲಿ ಗ್ರಂಥಗಳನ್ನು ಬರೆದು ಅಸಂಖ್ಯ ಶಿವಶರಣರಿಗೆ ಮಾರ್ಗದರ್ಶಿಯಾಗಿ 'ಶರಣರ ವಚನಗಳೆಂದರೆ ಕನ್ನಡದ ಉಪನಿಷತ್ತುಗಳು, ಎಂದು ಹೇಳುವಂತೆ ಮಾಡಿದನು. ಪುರಂದರಾದಿ ಹರಿದಾಸರು, ಹಾಡುಗಳು, ದ್ವಿಪದಿಗಳು, ಸುಳಾದಿಗಳು ಮೊದಲಾದ

ವಿವಿಧ ಛಂದಸ್ಸಿನಲ್ಲಿ ತಮ್ಮ ಗ್ರಂಥಗಳನ್ನು ಬರೆದರು. ರತ್ನಾಕರವರ್ಣಿಯೆಂಬ ಮಹಾಕವಿಯು ಸಾಮಾನ್ಯವಾದ ಸಾಂಗತ್ಯದಲ್ಲಿ 'ಭರತೇಶ ವೈಭವ' ದಂತಹ ಅಗಾಧವಾದ ಮಹಾ ಗ್ರಂಥವನ್ನು ಬರೆದನು.

ಆಂಧ್ರ ಕವಿಕುಲಪಿತಾಮಹನಾದ **ಪಾಲ್ಕುರಿಕೆಯ ಸೋಮನಾಥನು** 'ದ್ವಿಪದಿ' ಎಂಬ ಕಿರಿಯ ಛಂದಸ್ಸಿನಲ್ಲಿ ಬಸವಪುರಾಣ, ಪಂಡಿತಾರಾಧ್ಯಚರಿತ್ರೆ ಗಳಂತಹ ಮಹಾಕಾವ್ಯಗಳನ್ನು ನಿರ್ಮಿಸಿದನು. ತಮಿಳುಭಾಷೆಯಲ್ಲಿ ಸರ್ವೋ ತ್ತಮ ಗ್ರಂಥವನ್ನು ನಿರ್ಮಿಸಿದ ಋಷಿಕವಿಯಾದ **'ತಿರುವಳ್ಳುವರ್'** ಕವಿ ಯು 'ಕುರಳ್'ಎಂಬ ಲೋಕ ಪ್ರಸಿದ್ಧ ನೀತಿ ಗ್ರಂಥವನ್ನು'ದ್ವಿಪದಿ' ಛಂದಸ್ಸಿ ನಲ್ಲಿಯೇ ಬರೆದನು. ಆಂಧ್ರ ಕವಿಕೋಕಿಲೆಯೆನಿಸಿದ ವೇಮನನು ಪ್ರೌಢ ವಾದ ಚಂಪೂ ಶೈಲಿಯನ್ನು ಬಿಟ್ಟು ಸಾಮಾನ್ಯವಾದ ಗೀತೆಗಳಲ್ಲಿಯೇ ತನ್ನ ವಿಶ್ವಮೋಹಕವಾದ ಕವಿತೆಗಳನ್ನು ಹಾಡಿದನು. ಇದರಂತೆಯೇ ಕನ್ನಡಿಗರ ಮನ್ನಣೆಗೆ ಪಾತ್ರನಾದ ಸರ್ವಜ್ಞನು ಕಿರಿದಾದ 'ತಿವಳಿ'ಗಳಲ್ಲಿ ಹಿರಿದಾದ ತತ್ವ ಗಳನ್ನು ಹೇಳಿ ಎಲ್ಲರನ್ನೂ ಬೆರಗುಗೊಳಿಸಿ, ತನ್ನ ಜಾಣ್ಮೆಯನ್ನು ಈ ಮೂಲಕ ಕನ್ನಡ ಜಗತ್ತಿಗೆ ಪ್ರಕಟಗೊಳಿದನು. ಜನಸೇವೆಗೋಸ್ಕರವಾಗಿಯೇ ಅಡಿಗೆಯಮನೆಯ ಛಂದಸ್ಸು ಎನ್ನಿಸಿಕೊಳ್ಳುವ 'ತ್ರಿಪದಿ'ಯನ್ನು ತಲೆಯಲ್ಲಿ ಹೊತ್ತಿದ್ದಾನೆ ಕನ್ನಡ ಜಾಣ ಸರ್ವಜ್ಞಮೂರ್ತಿ.

## ಸರ್ವಜ್ಞನ ವಿಶಿಷ್ಟತೆ

ಸರ್ವಜ್ಞನ ವಚನಗಳಲ್ಲಿ ಮಹಾಕಾವ್ಯಗಳಲ್ಲಿರುವ ಕೆಲವು ಅಲಂಕಾರ ಗಳಿವೆ. ಅವುಗಳಲ್ಲಿ ರೂಪಕ, ಯಮಕ, ಉಪಮಾ, ದೃಷ್ಟಾಂತ, ಶ್ಲೇಷ ಇವುಗಳೇ ಮುಖ್ಯವಾದುವೆನ್ನಬಹುದು.

ಇವನ ಗ್ರಂಥದಲ್ಲಿ ಶೃಂಗಾರ, ಕರುಣ, ಭೀಭತ್ಸಾದಿ ರಸಗಳಿದ್ದರೂ ಹಾಸ್ಯರಸವೇ ಪ್ರಾಮುಖ್ಯವಾದುದೆಂದು ಹೇಳಬಹುದು. ಕರ್ಣಾಟಕ ಸಾಹಿತ್ಯ ಪ್ರಪಂಚದಲ್ಲಿ, ಷಡಕ್ಷರ ಕವೀಂದ್ರನು ಶೃಂಗಾರರಸದಲ್ಲಿಯೂ, ಹರಿಹರ ದೇವನು ಭಕ್ತಿರಸದಲ್ಲಿಯೂ, ರಾಘವಾಂಕ ಪಂಡಿತನು ಕರುಣರಸದಲ್ಲಿಯೂ ಕವಿರತ್ನನು ವೀರರಸದಲ್ಲಿಯೂ, ಚಾಮರಸನು ಶಾಂತಿರಸದಲ್ಲಿಯೂ ಬಲ್ಲಿದ ರಾಗಿರುವಂತೆ ಸರ್ವಜ್ಞನು ಹಾಸ್ಯರಸದಲ್ಲಿ ಪ್ರಸಿದ್ಧನಾಗಿರುವನು.

ಗಾಂಭೀರ್ಯಕ್ಕೆ ಆಂದಿಪಂಪನೂ, ಸರಲತೆಗೆ ಅಭಿನವ ಪಂಪನೂ, ಔದಾರ್ಯಕ್ಕೆ ಕುಮಾರವ್ಯಾಸನೂ, ಮಧುರತೆಗೆ ಲಕ್ಷ್ಮೀಶನೂ, ಆವೇಶಕ್ಕೆ ಹರಿಹರನೂ, ಜಾಣತನಕ್ಕೆ ನೇಮಿಚಂದ್ರನೂ, ಸಂಭಾಷಣಾಕೌಶಲ್ಯಕ್ಕೆ ರಾಘವಾಂಕನೂ, ನವೀನತೆಗೆ ಮುದ್ದಣನೂ, ಭಾಷಾಂತರ ನೈಪುಣ್ಯಕ್ಕೆ ಅಭಿನವ ಕಾಳಿದಾಸನೂ ಶೀಮಾಪುರುಷರಾದಂತೆ ವಿನೋದ ಪ್ರಿಯತೆಗೆ ಸರ್ವಜ್ಞನು ಸರ್ವಶ್ರೇಷ್ಠನೆನಿಸಿರುವನು.

## ಸರ್ವಜ್ಞನ ಶೈಲಿ

ಕವಿಗಳನ್ನು ವಶ್ಯವಾಕ್ಕುಗಳೆಂದೂ, ವಾಗ್ವಶ್ಯರೆಂದೂ ಶಾಸ್ತ್ರಜ್ಞರು ಎರಡು ಭಾಗಮಾಡಿದ್ದಾರೆ. ಶಬ್ದಾರ್ಥಗಳನ್ನು ತಮ್ಮ ಅಂಕಿತದಲ್ಲಿಟ್ಟು ಕೊಂಡು ಯಾವ ಶಬ್ದ, ಅರ್ಥ, ಅಲಂಕಾರ, ಛಂದಸ್ಸನ್ನಾದರೂ ಸಮಯಕ್ಕೆ ಸರಿಯಾಗಿ ತಡೆಬಡೆಯಿಲ್ಲದೆ ಉಪಯೋಗಿಸಿಕೊಳ್ಳಲು ಸಮರ್ಥರಾದ ಮಹಾ ಕವಿಗಳನ್ನು ವಶ್ಯವಾಕ್ಕುಗಳೆಂದೂ, ಈ ಯೋಗ್ಯತೆಯಿಲ್ಲದ ಬಗೆಗುರುಡರೂ, ನಾಲಗೆವೆಳವರೂ ಆದ ಸಾಮಾನ್ಯ ಕವಿಗಳನ್ನುವಾಗ್ವಶ್ಯರೆಂದೂ ಬಲ್ಲವರು ಕರೆ ಯುತ್ತಾರೆ. ಸರ್ವಜ್ಞನು ವಶ್ಯವಾಕ್ಕುಎಂಬುದನ್ನುನಾವು ಅವನ ಒಂದೊಂದು ತ್ರಿಪದಿಗಳಲ್ಲಿಯೂ ಕಾಣಬಹುದಾಗಿದೆ. ಅವನು ತನ್ನ ಮನಸ್ಸಿಗೆ ಬಂದ ಯೋಚನೆಯನ್ನು ಯೋಗ್ಯ ಶಬ್ದಗಳಿಂದ ಉಚಿತವಾದ ರೀತಿಯಲ್ಲಿ ಧಾರಾಳ ವಾಗಿ ಹೇಳಲು ಸಮರ್ಥನಾಗಿದ್ದಾನೆ. ಈ ವಿಚಾರದಲ್ಲಿ ಸರ್ವಜ್ಞನು ಯಾವ ಮಹಾಕವಿಗೂ ಕಡಿಮೆಯಾದವನಲ್ಲವೆಂದು ಅವನ ವಚನಗಳ ಹೃದಯವನ್ನು ಬಲ್ಲವರೆಲ್ಲರೂ ಒಪ್ಪಲೇಬೇಕು.

## ಸರ್ವಜ್ಞನ ಕವನಶಕ್ತಿ

**'ನಾಋಷಿಃ ಕುರುತೇ ಕಾವ್ಯಂ'**ಎಂಬ ಪ್ರಾಚೀನ ವಾಕ್ಯದಂತೆ ಋಷಿ ಯ ಅಂಶವಿಲ್ಲದವನು ಕವಿಯಾಗಲಾರನು. ಕವಿತಾಶಕ್ತಿಯು ಸಂಸ್ಕಾರ ಜನ್ಯವಾದುದು. ಪ್ರಯತ್ನದಿಂದ ಕವಿಯಾಗಲಾಗುವುದಿಲ್ಲ. ಪಂಡಿತನಾಗ ಬಹುದು. ಈ ವಿಚಾರದಲ್ಲಿ ಮಹಾಕವಿ ಷಡಕ್ಷರದೇವನ

ಕಂದ ॥ ಕಲಿಸಿದೊಡೇಂ ಬರ್ಕುವೆ ಸ ।
ಲ್ಲಲಿತ ಕವಿತ್ವಂ ನಿಸರ್ಗಸುಭಗಂ ರಮಣೀ ॥
ವಿಲಸಿತರತಿರಸರಸಿಕತೆ ।
ತಲೆದೋರ್ಪುದು ತಾನೆ ಕಲಿಸಲೇಂ ಬಂದಪುದೇ ॥

ಎಂಬ 'ರಾಜಶೇಖರ ವಿಲಾಸದ' ಕಂದಪದ್ಯವು ನಮ್ಮ ಅಭಿಪ್ರಾಯಕ್ಕೆ ಸಾಕ್ಷ್ಯವಾಗಿದೆ. ಪೂರ್ವ ಜನ್ಮದ ಪುಣ್ಯಪ್ರಭಾವದಿಂದ ಪ್ರಾಪ್ತವಾದ ಕವಿತಾ ಶಕ್ತಿಯು ದೇಶಾಟನ, ಕಾವ್ಯಾವಲೋಕನ, ವಿದ್ವತ್ಸಂಭಾಷಣಗಳಿಂದ ಅಭಿವೃದ್ಧಿಯಾಗುವುದಲ್ಲದೆ ಸುಸಂಸ್ಕೃತವೂ ಆಗುತ್ತದೆ. ಸರ್ವಜ್ಞನಿಗೆ ಮೇಲೆ ಹೇಳಿದ ಎಲ್ಲ ಯೋಗ್ಯತೆಯೂ ಇದ್ದುದರಿಂದ ಅವನ ಕವಿತೆಯು ಅರ್ಥ ಪೂರ್ಣವೂ, ಪ್ರಾಸಾದಿಕವೂ ಅನುಭವ ಪೂರ್ಣವೂ ಆಗಿದೆ.

ಸರ್ವಜ್ಞನು ಆಶುಕವಿ. ಅಂದರೆ ಯಾವುದಾದರೊಂದು ವಿಷಯವು ನೆನಪಾದೊಡನೆಯೇ ಅದರ ಮೇಲೆ ಕವನ ಹೇಳತಕ್ಕ ಕವಿ. ಇವನು ಹಲಗೆ ಬಳಪವ ಪಿಡಿದು ಪೇಚಾಡಿದವನಲ್ಲ. 'ಬರೆಬರೆದಂತದಂತೊಡೆದು ತೊಟ್ಟನೆ ನಿಟ್ಟಿಸಿ' ಕಷ್ಟಪಟ್ಟವನಲ್ಲ. ಇವನ ಕವಿತೆಯು ಸರಳವಾದುದು. ಸಹಜ ವಾದುದು. ಇವನ ವಚನಗಳೆಲ್ಲವೂ ಒಂದೇಕಾಲದಲ್ಲಿ ಒಂದೆಡೆಯಲ್ಲಿ ಬರೆದವುಗಳಲ್ಲ. ಅವು ದೇಶಾಟನದಲ್ಲಿ ಪ್ರಸಂಗ ಬಂದಾಗ ಮಿಂಚಿನಂತೆ ಹೊಳೆದು ಊಟೆಯ ನೀರಿನಂತೆ ಉಕ್ಕಿಬಂದವು. ಅದು ಕಾರಣವೇ ಅವನ ವಚನಗಳಲ್ಲಿ ವಿವಿಧತೆಯೂ ಕೆಲವು ಕಡೆ ದ್ವಿರುಕ್ತಿಯೂ ಅಕೃತ್ರಿಮತೆಯೂ ಕಂಡುಬರುತ್ತದೆ.

## ಸರ್ವಜ್ಞನಿಗೆ ಶಾಸ್ತ್ರಜ್ಞಾನವಿತ್ತೆ?

ಇವನಿಗೆ ಶಾಸ್ತ್ರಜ್ಞಾನವಿತ್ತೆ? ಎಂದು ಕೆಲವರು ಶಂಕಿಸುತ್ತಾರೆ. ಇದಕ್ಕೆ ಕಾರಣವಿಲ್ಲ. ಈ ಕವಿಯು ಅನೇಕಶಾಸ್ತ್ರಗಳನ್ನು ಬಲ್ಲವನಾಗಿದ್ದನೆಂದು ಇವನ ವಚನಗಳ ಮೇಲಿಂದಲೇ ನಾವು ತಿಳಿಯಬಹುದಾಗಿದೆ. ಇವನು ವೀರಶೈವ ಸಿದ್ಧಾಂತದಲ್ಲಿ ಬಲ್ಲಿದನಾಗಿದ್ದನೆಂದು ಷಟ್ಸ್ಥಲವಚನಗಳಿಂದ ತಿಳಿಯಬಹುದಾಗಿದೆ. ಶಿವಯೋಗಪದ್ಧತಿಯ ವಚನಗಳಿಂದ ಇವನಿಗೆ ಯೋಗ

ಶಾಸ್ತ್ರದಲ್ಲಿ ತತ್ರಾಪಿ ಶಿವಯೋಗದಲ್ಲಿ ಉತ್ತಮ ಪಾಂಡಿತ್ಯವಿತ್ತೆಂದು ಭಾಸವಾಗುತ್ತದೆ. ರಸವಾದ, ಜ್ಯೋತಿಷ, ವೈದ್ಯಸಂಬಂಧ ವಚನಗಳಿಂದ ಇವನಿಗೆ ಈ ಶಾಸ್ತ್ರಗಳಲ್ಲಿ ಚೆನ್ನಾಗಿ ಪ್ರಾವೀಣ್ಯತೆಯಿತ್ತೆಂದು ತಿಳಿದುಬರುತ್ತದೆ. ಕವಿಯು ವಿಶೇಷತಃ ಜನಸಾಮಾನ್ಯಕ್ಕಾಗಿ ವಚನಗಳನ್ನು ಹಾಡಿದುದರಿಂದ ಎಲ್ಲಿಯೂ ತನ್ನ ವೈದುಷ್ಯದ ಪ್ರಭಾವವನ್ನು ಪ್ರಕಟಿಸದೆ ಸರಳವಾಗಿಯೇ ಗ್ರಂಥನಿರ್ಮಾಣಮಾಡಿದ್ದಾನೆ. ಇವನು ಬೆಡಗಿನವಚನಗಳನ್ನು ರಚಿಸಿದುದು, ತಾವು ಪಂಡಿತರೆಂದು ಬಿಗ್ಗನೆ ಬೀಗತಕ್ಕವರಿಗಾಗಿ; ಆದ್ದರಿಂದಲೇ ಆ ತ್ರಿಪದಿಗಳು ಕೊಂಚ ಪೆಡಸಾಗಿವೆ ಪ್ರೌಢವಾಗಿವೆ. ಹೀಗಿದ್ದರೂ ಇವನ ಗ್ರಂಥದ ಮನೋಹರತೆಗೆ ಮರುಳಾದ ಪಾಮರವೃಂದವು, ಪಂಡಿತರಿಗಿಂತಲೂ ಹೆಚ್ಚಾಗಿ ಆ ಬೆಡಗಿನ ವಚನಗಳನ್ನು ಕಂಠಪಾಠ ಮಾಡಿಕೊಂಡು ಅವುಗಳ ಅರ್ಥವನ್ನು ತಿಳಿದು ವಿವರಿಸುತ್ತ ವಿದ್ವಾಂಸರನ್ನೂ ಆಶ್ಚರ್ಯ ಪಡಿಸುತ್ತಾರೆ. ಮುಖ್ಯವಾಗಿ ಸರ್ವಜ್ಞನ ವಚನಗಳನ್ನೆಲ್ಲಾ ಓದಿದರೆ ಇವನು ಅನೇಕ ಶಾಸ್ತ್ರಗಳಲ್ಲಿ ಪಂಡಿತನಾಗಿದ್ದನೆಂದೂ, ಇವನಿಗೆ ಗೀತೆ, ಉಪನಿಷತ್ತು, ರಾಮಾಯಣ–ಭಾರತಾದಿ ಗ್ರಂಥಗಳ ಶಿವಪುರಾಣಗಳ ನಿಜಾಂಶಗಳು ಧಾರಾಳವಾಗಿ ತಿಳಿದಿದ್ದುವೆಂದೂ ಗೊತ್ತಾಗುತ್ತದೆ.

## ರಾಮಾಯಣ-ಭಾರತದ ನಿಂದಕನಲ್ಲ

ಸರ್ವಜ್ಞಮೂರ್ತಿಯು ರಾಮಾಯಣ-ಭಾರತದಂತಹ ಮಹಾಕಾವ್ಯಗಳನ್ನು ನಿಂದಿಸಿರುವನೆಂದು ಹಲವರು ಭಾವಿಸಿದ್ದಾರೆ. ಅವರೀಭಾವನೆಗೆ

**ಹಾದರದ ಕಥೆಯನ್ನು ಸೋದರರ ವಧೆಯನ್ನು ।**
**ಆದರಿಸಿ ಪುಣ್ಯಕಥೆಯೆಂದು ಕೇಳುವರು ।**
**ಮಾದಿಗರು ನೋಡ ಸರ್ವಜ್ಞ ॥**

ಎಂಬ ವಚನವನ್ನು ಮುಂದೊಡ್ಡುವರು. ಇದು ವೃಥಾಪವಾದವೆಂದು ನಮ್ಮ ಅಭಿಮತವಾಗಿದೆ. ಕವಿಯು ಹಾದರದ ಕಥೆಯೆಂದರೆ ರಾಮಾಯಣವೆಂದೂ, ಸೋದರರ ವಧೆಯೆಂದರೆ ಭಾರತವೆಂದೂ ಎಲ್ಲಿಯೂ ಹೇಳಿಲ್ಲ. ಹಲವುಮಂದಿ ಸೋಮಾರಿಗಳು, ನಾಡಿನಲ್ಲಿ ಪ್ರತಿದಿನ ನಡೆಯುತ್ತಿರುವ ವ್ಯಭಿಚಾರ ಸಂಬಂಧ

ವಾದ ಹಾಗೂ ಅಣ್ಣತಮ್ಮಂದಿರ ಕಲಹಸಂಬಂಧವಾದ ಪ್ರಸಂಗಗಳನ್ನು ಹಗಲಿರುಳು ಪ್ರೀತಿಯಿಂದ ಪುಣ್ಯಕಥೆಯೋ ಎಂಬಂತೆ ಕೇಳುತ್ತಿದ್ದಾರೆ. ಇದು ಸರಿಯಲ್ಲವೆಂದು ಬುದ್ಧಿ ಹೇಳುವುದೇ ಅಲ್ಲಿ ಕವಿಯ ತಾತ್ಪರ್ಯವೆಂದು ತಿಳಿಯ ಬೇಕು. ಆ ಉಭಯ ಮಹಾಕಾವ್ಯಗಳ ಬಗ್ಗೆ ಅಂದರೆ ಅವುಗಳ ಕಥಾನಾಯಕ ರಾದ ಸೀತಾ, ರಾಮ, ದ್ರೌಪದಿ, ಮೊದಲಾದವರಿಗೆ ಅನಾದರವನ್ನು ತೋರಿ ಸಿದ್ದಾನೆಂಬುದಕ್ಕೆ ಎಲ್ಲಿಯೂ ನಿದರ್ಶನವಿಲ್ಲ. ಅದಕ್ಕೆ ಬದಲಾಗಿ ಸೀತಾ ದೇವಿ, ರಾಮಚಂದ್ರ, ಅಭಿಮನ್ಯು, ಹನುಮಂತ ಮೊದಲಾದವರ ಹೆಸರನ್ನು ಹೇಳುವಾಗ ಗೌರವವಾಗಿಯೇ ಹೇಳಿದ್ದಾನೆ. ಇದರಿಂದ ಸರ್ವಜ್ಞಕವಿಯು ರಾಮಾಯಣ, ಮಹಾಭಾರತ ನಿಂದಕನಲ್ಲವೆಂಬುದು ಸ್ಪಷ್ಟವಾಗುತ್ತದೆ.

## ಹೀನೋಪಮೆಗಳು

ಸರ್ವಜ್ಞನು ತನ್ನ ತ್ರಿಪದಿಗಳಲ್ಲಿ ಕೆಲವೆಡೆ ಹೀನೋಪಮೆಗಳನ್ನು ಕೊಟ್ಟಿ ರುವುದುಂಟು. ಇದು ಪ್ರೌಢರಿಗೆ ಸರಿಬೀಳುವುದಿಲ್ಲ. ಆದರೆ ಪಾಮರಜನರಿಗೆ ಬೋಧಿಸಲಿಕ್ಕೆ ಈ ಹೀನೋಪಮೆಗಳೇ ಬಹುಮಟ್ಟಿಗೆ ಸಹಾಯವಾಗಿವೆಯೆಂ ಬುದನ್ನು ನಾವು ಇಲ್ಲಿ ಗಮನಿಸಬೇಕಾಗಿದೆ. ಕೆಲವು ರೋಗಗಳು ಶಸ್ತ್ರಚಿಕಿತ್ಸೆ ಯಿಂದಲ್ಲದೆ ಔಷಧಿಯಿಂದ ನಿವಾರಣೆಯಾಗುವುದಿಲ್ಲವೆಂಬುದು ಹೇಗೋ ಹಾಗೆ **ಕತ್ತೆಮಾನವರಿಗೆ** ಅಂಟಿರುವ ಅಜ್ಞಾನವೆಂಬ ರೋಗವು ಈ ಹೀನೋಪಮೆಗ ಳಿಂದ ಕೊಂಚ ದೂರವಾಗಬಹುದೆಂದೂ, ಅಂಥವರಿಗೆ ಸವಿನುಡಿಗಳೂ, ಪ್ರೌಢ ವಾದ ಉಪಮೆಗಳೂ ತಲೆಗೆ ಹಿಡಿಯುವುದಿಲ್ಲವೆಂದೂ ಸರ್ವಜ್ಞನು ಮೊದಲೇ ತಿಳಿದಂತೆ ತೋರುತ್ತದೆ.

ಸರ್ವಜ್ಞನು ವಚನಗಳನ್ನು ಬರೆದುದು ಆಸ್ಥಾನ ಪಂಡಿತರಿಗಲ್ಲ; ಕವಿಗಳಿ ಗಲ್ಲ, ಕೇವಲ ಪಾಮರರಿಗಾಗಿ. ಪ್ರೌಢರಿಗೆ ಹೇಳಬೇಕಾದ ಅವಶ್ಯಕತೆಯೇ ಇಲ್ಲವೆಂಬುದು ಸರ್ವಜ್ಞನಿಗೆ ಗೊತ್ತು. ಸರ್ವಜ್ಞನ ತ್ರಿಪದಿಗಳು ಇತ್ತ ಪ್ರೌಢ ವಾಙ್ಮಯವೂ ಅಲ್ಲ; ಅತ್ತ ಜನಪದಸಾಹಿತ್ಯವೂ ಅಲ್ಲ. ಈಕವಿಯ ವಚನ ಗಳನ್ನು ಇಂದಿನವರೆಗೆ ಉಳಿಸಿದವರು, ಬಳಸಿದವರು, ವಿಶೇಷತಃ ಪಂಡಿತರಲ್ಲ; ಕೇವಲ ಪಾಮರರು. ಜನಸಾಮಾನ್ಯದಲ್ಲಿದ್ದ ಅಜ್ಞಾನ, ಅನಾಚಾರಗಳನ್ನು

ಹೋಗಲಾಡಿಸುವುದಕ್ಕಾಗಿ, ಅವರಿಗೆ ರುಚಿಸುವ ಭಾಷೆಯಲ್ಲಿ, ಅವರಿಗೆ ತಿಳಿಯುವ ರೀತಿಯಲ್ಲಿ, ಅವರಿಗೆ ತಿಳಿದಿರಬಹುದಾದ ಉಪಮೆಗಳೊಂದಿಗೆ ಕವಿಯು ತನ್ನ ವಚನಗಳನ್ನು ಹಾಡಿದ್ದಾನೆ. ವಿದ್ವಾಂಸರು ಅನುಚಿತವೆಂದು ಭಾವಿಸುವ ಹೀನೋಪಮೆಗಳು ಕವಿಯ ದೃಷ್ಟಿಯಿಂದ ಸಮಾಜದ **'ಕತ್ತೆಮಾನವರಿಗೆ'** ಉಪಯುಕ್ತವಾಗಿವೆ.

## ವಚನಕಾರರೂ ಸರ್ವಜ್ಞನೂ

ವೀರಶೈವ ವಚನಶಾಸ್ತ್ರಕಾರರಿಂದ ಈ ಕವಿಯು ಬಹು ವಿಚಾರಗಳನ್ನು ಸಂಗ್ರಹಿಸಿದ್ದಾನೆ. ಏಕೇಶ್ವರವಾದ, ಮೂರ್ತಿಪೂಜಾನಿರಸನ, ಅಹಿಂಸಾ ಪ್ರತಿಪಾದನ, ಜಾತಿಭೇದ ನಿರಾಕರಣ, ಕ್ಷುದ್ರದೇವತಾ ತಿರಸ್ಕಾರ, ಶಿವಾಧಿಕ್ಯ ಸ್ಥಾಪನೆ, ಖಂಡಿತವಾದಿತ್ವ ಈ ವಿಚಾರಗಳಲ್ಲೆಲ್ಲಾ ಸರ್ವಜ್ಞನಿಗೂ ವಚನಕಾರರಿಗೂ ಬಹಳಮಟ್ಟಿಗೆ ಸಾಮ್ಯವಿದೆ. ಆದರೆ ಸರ್ವಜ್ಞನು ಈ ವಿಚಾರಗಳನ್ನೇ ವಚನಕಾರರಿಗಿಂತಲೂ ಸುಂದರವಾಗಿಯೂ, ಸರಸವಾಗಿಯೂ ವಿನೂತನವಾಗಿಯೂ ಹೇಳಿದ್ದಾನೆ.

ವಚನಕಾರರಿಗಿಂತಲೂ ಇವನಲ್ಲಿ ಮಿಗಿಲಾದ ಕೆಲವು ಗುಣಗಳಿವೆ. ಉದಾರವಾದ ಭಾವಗಳಿವೆ. ವಚನಕಾರರಲ್ಲಿರುವ ಭವಿಭಕ್ತಭೇದವೂ, ಅನ್ಯಮತ ತಿರಸ್ಕಾರವೂ ಇವನಲ್ಲಿಲ್ಲ. ಸರ್ವಜ್ಞನು ಲೋಕಾನುಭವದಲ್ಲಿ ವಚನಕಾರರಿಗಿಂತಲೂ ಶ್ರೇಷ್ಠನಾಗಿದ್ದಾನೆ. ಅವರಿಗಿಂತಲೂ ಇವನಲ್ಲಿ ರಸಿಕತೆ, ವಿಶಾಲತೆ, ಉದಾರತೆಗಳು ಬಹಳವಾಗಿವೆ. ಬಹುಶ್ರುತತ್ವದಲ್ಲಿ ಇವನು ಯಾವ ವಚನಕಾರನಿಗೂ ಕಡಮೆಯಾದವನಲ್ಲ. ವಚನಶಾಸ್ತ್ರದಲ್ಲಿರುವುದಕ್ಕಿಂತಲೂ ಇವನ ಮಾತಿನಲ್ಲಿ ಜಾಣ್ಮೆಯೂ ಮೋಹಕತೆಯೂ ಮಿಗಿಲಾಗಿವೆ. ಒಟ್ಟಿನಲ್ಲಿ ಸರ್ವಜ್ಞನು ವಚನಕಾರರಲ್ಲಿರುವ ಸದ್ಗುಣಗಳನ್ನೊಳಗೊಂಡು, ಅವರಲ್ಲಿಲ್ಲದಿರುವ ಕೆಲವು ಮಿಗಿಲಾದ ಗುಣಗಳನ್ನೂ ಪಡೆದು, ರಸಭರಿತವೂ ಅನ್ಯಾದೃಶವೂ ಆದ ಕನ್ನಡ ವಚನಗಳಿಂದ ತನ್ನದೇ ಆದ ಒಂದು ಸುಶೈಲಿಯಿಂದ, ಸಕಲ ಕನ್ನಡಿಗರನ್ನೂ ತನ್ನ ಮಾತಿನ ಮಂತ್ರದಿಂದ ವಶೀಕರಿಸಿದ್ದಾನೆಂದು ಹೇಳಬಹುದು.

# ಕವಿಯು ವಿರಕ್ತನು

ಈ ಕವಿಯು ತನ್ನ ಅನೇಕ ವಚನಗಳಲ್ಲಿ ಸ್ತ್ರೀ ಪುರುಷ ರಹಸ್ಯಗಳನ್ನು ವಿವರಿಸಿರುವುದರಿಂದ ಕೆಲವರು ಇವನಿಗೆ ಸ್ತ್ರೀಸಂಸರ್ಗವಾಗಿರಬಹುದೆಂದು ತರ್ಕಿಸುತ್ತಾರೆ. ಇದಲ್ಲದೆ 'ಹೆಣ್ಣಿನ ವಶವಾಗಿ ನುಗ್ಗುನುಸಿಯಾದೆ' ಎಂಬ ವಚನದಿಂದ ಇವನು ಮೊದಲು ಒಬ್ಬ ವೇಶ್ಯೆಯ ಸಹವಾಸದಲ್ಲಿದ್ದು ತರುವಾಯ ಪಶ್ಚಾತ್ತಾಪಪಟ್ಟು ಒಬ್ಬ ಗುರುವಿನ ಬಳಿಗೆ ಬಂದನೆಂದೂ '**ಸೋಮಶೇಖರ ಗುರುವು**' ಎಂಬ ವಚನದಿಂದ ಇವನ ಗುರುವಿನ ಹೆಸರು ಸೋಮಶೇಖರನೆಂಬುದಾಗಿ ಇತ್ತೆಂದೂ ಕೆಲವರು ಅಭಿಪ್ರಾಯ ಪಡುತ್ತಾರೆ. ಆದರೆ ಇಡೀ ಗ್ರಂಥವನ್ನು ನೋಡಿದರೆ ಈ ಎರಡು ವಚನಗಳಿಂದ ತೆಗೆದುಕೊಂಡ ಊಹೆಯು ನಿರಾಧಾರವಾದುದೆಂದು ತಿಳಿದುಬರುತ್ತದೆ. ಶೃಂಗಾರರಸ ಪ್ರಸಂಗಗಳನ್ನು ಮಹಾಮಹಾಯೋಗಿಗಳೂ ಹೇಳಿರುವ ವಿಚಾರವು ಕನ್ನಡ ಸಾಹಿತ್ಯ ಚರಿತ್ರೆಯನ್ನು ಬಲ್ಲವರಿಗೆ ಹೊಸದಲ್ಲ. ಹರಿಹರದೇವ, ಗುಬ್ಬಿ ಮಲ್ಲಣಾರ್ಯ, ಷಡಕ್ಷರದೇವ ಮೊದಲಾದ ಬ್ರಹ್ಮಚಾರಿಗಳು ತಮ್ಮ ತಮ್ಮ ಕಾವ್ಯಗಳಲ್ಲಿ ಬೇಕಾದಹಾಗೆ ಸ್ತ್ರೀ ವರ್ಣನೆಗಳನ್ನು ಮಾಡಿದ್ದಾರೆ. ಹಗಲಿರುಳು ಸಂಸಾರದಲ್ಲಿ ತೇಲಿ ಮುಳುಗುತ್ತಿರುವ ಸ್ತ್ರೀಲೋಲರಿಗೆ ಸಹ ತಿಳಿಯದ ರಹಸ್ಯಗಳನ್ನೆಲ್ಲಾ ಕಾವ್ಯ ಮುಖದಿಂದ ಪ್ರಕಟಿಸಿದ್ದಾರೆ. ಆದರೆ ಅವರೆಲ್ಲರೂ ಪರಮ ವಿರಕ್ತರೆಂದೂ, ಶಿವಯೋಗಿಗಳೆಂದೂ ಅಂದಿನಿಂದ ಇಂದಿನವರೆಗೂ ಪರಿಗಣಿತರಾಗಿದ್ದಾರೆ. ಸರ್ವಜ್ಞಮೂರ್ತಿಯಾದರೂ ಈ ಪಙ್ಕ್ತಿಗೆಸೇರಿದವನು ಎಂದು ನಮ್ಮ ಭಾವನೆ.

ಶಾಸ್ತ್ರಜ್ಞಾನ, ಕಾವ್ಯ ಪರಿಚಯ, ಪಂಡಿತ ಭಾಷಣ, ದೇಶಾಟನಗಳ ಬಲದಿಂದಲೂ, ತಮ್ಮ ಅಸಾಧಾರಣವಾದ ಪ್ರತಿಭಾಶಕ್ತಿಯಿಂದಲೂ, ಕವಿಗಳು ಬೇಕಾದುದನ್ನು ಸಂಕೋಚವಿಲ್ಲದೆ ಬರೆಯಲು ಸಮರ್ಥರಾಗಿದ್ದಾರೆ. ವೇಶ್ಯಾವಾಟಿಯ ವಿಚಾರವಾಗಿ ತಮ್ಮ ಗ್ರಂಥಗಳಲ್ಲಿ ಒಂದೊಂದು ಆಶ್ವಾಸಗಳನ್ನೂ, ಅಧ್ಯಾಯಗಳನ್ನೂ ಬರೆದು ಭರ್ತಿಮಾಡಿರುವ ಮಹಾಕವಿಗಳೆಲ್ಲರೂ ಹೇಗೆ ಸೂಳೆಗೇರಿಯಲ್ಲಿ ಉತ್ತೀರ್ಣರಾಗಿರಬೇಕಾದ ಅವಶ್ಯಕತೆಯಿಲ್ಲವೋ ಹಾಗೆಯೇ ಸ್ತ್ರೀರಹಸ್ಯಗಳನ್ನು ವಿವರಿಸುವ ಕವಿಯೂ ಸ್ತ್ರೀಸಂಸರ್ಗದ ಅನುಭವವನ್ನು

ಪಡೆದಿರಲೇಬೇಕೆಂಬ ನಿಯಮವೇನೂ ಇಲ್ಲ. ವಾತ್ಸ್ಯಾಯನನ ಕಾಮಸೂತ್ರಗಳ ಅಧ್ಯಯನದಿಂದ ಕವಿಗಳು ಶೃಂಗಾರ ಸರ್ವಸ್ವವನ್ನೂ ಅರಿಯಬಹುದು.

ಸರ್ವಜ್ಞನು ತನ್ನ ಅಪಾರವಾದ ಶಾಸ್ತ್ರಜ್ಞಾನದಿಂದಲೂ, ಮಿಗಿಲಾದ ಲೋಕಾನುಭವದಿಂದಲೂ ಹಲವು ಸ್ತ್ರೀ ಪುರುಷ ರಹಸ್ಯವನ್ನು ಹೇಳಿರುವನು. ಹಸ್ತಿನಿ, ಚಿತ್ರಿನಿ, ಶಂಖಿನಿ, ಪದ್ಮಿನಿ ಎಂಬ ಸ್ತ್ರೀಯರ ನಾಲ್ಕು ಜಾತಿಯ ವಿಚಾರವನ್ನು ಶಾಸ್ತ್ರಜ್ಞರ ಮತದಂತೆ ಹೇಳಿರುವನಲ್ಲದೆ ಅನುಭವವನ್ನು ಪಡೆದು ಹೇಳಿದವನಲ್ಲ. ಸರ್ವಜ್ಞನು ವಿಶ್ವಕೋಶದಂತೆ ಸಕಲ ವಿಷಯಗಳ ಜ್ಞಾನವನ್ನು ಮಾಡಿಕೊಡುವುದಕ್ಕಾಗಿ ಕಾಮಶಾಸ್ತ್ರ, ರತಿಶಾಸ್ತ್ರಗಳಲ್ಲಿ ನಿರೂಪಿತವಾದ ರಹಸ್ಯದ ವಿಷಯಗಳನ್ನೇ ಸಂಗ್ರಹಿಸಿ ಹೇಳಿರುವನಲ್ಲದೆ ಬೇರೆ ಯಾವ ಉದ್ದೇಶವೂ ಇವನಲ್ಲಿದ್ದಿಲ್ಲವೆಂಬುದು ಅವನು ತನ್ನ ಪ್ರತಿಯೊಂದು ಪದ್ಯಕ್ಕೂ ಕೊಟ್ಟಿರುವ ನೈತಿಕ ಹೊಳಪಿನಿಂದ ಖಚಿತವಾಗುತ್ತದೆ.

## ಸರ್ವಜ್ಞನು ಸಂಸಾರಿಯೆ ?

ಸರ್ವಜ್ಞನನ್ನು ವಿಷಯಾಸಕ್ತನೆಂದೂ ಸ್ತ್ರೀ ಲಂಪಟನೆಂದೂ ಕೆಲವರು ತಿಳಿಯದೆ ವಾದಿಸುತ್ತಿರುವರು. ಆದರೆ ಅವನ ವಚನಗಳು ಅವನ ವೈರಾಗ್ಯ ಭಾವನೆಗೆ ನಿದರ್ಶನವಾಗಿವೆಯೆಂಬುದನ್ನು ಅವರರಿಯರು.

ಸುಂದರಾಂಗನೆ ಬಂದು ಮುಂದೆ ತಾ ನಿಂದಿರಲು ।
ಸಂದರಿಪನರಿದ ಜ್ಞಾನಿಯು ಎಲುಬಿನಾ ।
ಹಂದರವ ಕಾಂಬ ಸರ್ವಜ್ಞ ॥ ॥೧॥

ಐವರಟ್ಟಾಸವನು ಯೌವನದ ಹಿಂಡನ್ನು ।
ಹೊಯ್ಯುತ್ತ ವಶಕೆ ತಂದಾತ ಜಗದೊಳಗೆ ।
ದೈವತಾನಕ್ಕು ಸರ್ವಜ್ಞ ॥೨॥

ಆರರಟ್ಟುಳಿಗಳನು ಮೂರು ಕಂಟಕರನ್ನು ।
ಏರು ಜನ್ಮನವ ತಡೆಯುವಡೆ ಶಿವತಾನು ।
ಬೇರೆ ಇಲ್ಲೆಂದ ಸರ್ವಜ್ಞ ॥೩॥

ವಿಷಯದಾಬೇರನ್ನು ಬಿಸಿಮಾಡಿ ಕುಡಿದಾತ ।
ಪಶುಪತಿಯು ಆಕ್ಕು ಸಸಿನಕ್ಕುವ್ಯೈಬಣ್ಣ ।
ಮಿಸುನಿಯಂತಕ್ಕು ಸರ್ವಜ್ಞ ॥೪॥
ಕಚ್ಚೆ ಕೈ ಬಾಯಿಗಳು ಇಚ್ಛೆಯಲ್ಲಿದ್ದಿಪರೆ ।
ಅಚ್ಯುತನು ಅಪ್ಪ ಅಜನಪ್ಪ ಲೋಕದಲಿ ।
ನಿಶ್ಚಿಂತನಪ್ಪ ಸರ್ವಜ್ಞ ॥೫॥

ಮೇಲಿನ ವಚನಗಳು ಜಿತೇಂದ್ರಿಯನೇ ಈಶ್ವರನು ಎಂಬ ಅರ್ಥದಲ್ಲಿ ಸರ್ವಜ್ಞನು ಹಾಡಿದುವು. 'ವಿಷಯದಾಬೇರನ್ನು ಬಿಸಿಮಾಡಿ ಕುಡಿದ' ಆ ನಿಶ್ಚಿಂತಮೂರ್ತಿ ಸರ್ವಜ್ಞನು'ಐವರ ಅಟ್ಟಾಸವನು ಆರರ ಅಟ್ಟುಳಿಗಳನು' ಗೆಲ್ಲದಿದ್ದ ಪಕ್ಷದಲ್ಲಿ ಅವನ ಮುಖದಿಂದ ಇಂತಹ ಅಚ್ಚುಮೆಚ್ಚಿನ ಕೆಚ್ಚಿನ ಮಾತುಗಳು ಹೊರಡುವುದು ಸಾಧ್ಯವಾಗುವುದೇ.?

ಶೃಂಗಾರ ಶಾಸ್ತ್ರದ ರಹಸ್ಯಗಳನ್ನೆಲ್ಲ ಬಿಡಿ ಬಿಡಿಯಾಗಿ ಬಣ್ಣಿಸಿದ ಮಹಾ ಕವಿ ಷಡಕ್ಷರ ದೇವ, ಹಂಪೆಯ ಹರೀಶ್ವರ, ಮಹಾತ್ಮ ಕನಕದಾಸ ಮೊದ ಲಾದ ಕವಿಗಳು ಹೇಗೆ ಪರಿಶುದ್ಧ ಚರಿತ್ರರೆಂದು ಪರಿಗಣಿತರಾಗಿರುವರೋ ಹಾಗೆಯೇ ಸರ್ವಜ್ಞಮೂರ್ತಿಯೂ ಕೂಡ ಹೆಣ್ಣು, ಹೊನ್ನು, ಮಣ್ಣುಗಳಿಗೆ ಮನಗೊಡದ ನಿರ್ಮಲ ಸಂನ್ಯಾಸಿಯಾಗಿದ್ದನೆಂದು ನಾವು ದೃಢವಾಗಿ ಹೇಳ ಬಹುದು. ಅವನ ವಚನಗಳಲ್ಲಿ ಆತನ ವೈರಾಗ್ಯ ಜೀವನದ ನಿದರ್ಶನಗಳು ಮೇಲಿಂದ ಮೇಲೆ ಬರುತ್ತವೆ ಎಂಬುದನ್ನು ನಾವು ಆತನ ಗ್ರಂಥಾಭ್ಯಾಸ ದಿಂದ ಮನಗಾಣಬಹುದು.

## ಸರ್ವಜ್ಞನು ರಾಮ ಭಕ್ತನೆ ?

ಕೆಲವರು ಪರಮ ಶಿವಭಕ್ತನೂ ವೀರಶೈವನೂ ಆದ ಸರ್ವಜ್ಞ ಕವಿ ಯನ್ನು ರಾಮಭಕ್ತನೆಂದು ಹೇಳಿದ್ದಾರೆ. ಆದರೆ ಸರ್ವಜ್ಞ ಮೂರ್ತಿಯು ವಚನಕಾರರಂತೆ ಉದಾರವಾದಿ ಎಂಬುದು ತಿಳಿದಂತೆಯೇ ಇದೆ. ಆದಮಾತ್ರಕ್ಕೆ ಅವನು ವೀರಶೈವ ಮತಸಿದ್ಧಾಂತಕ್ಕೆ ಒಪ್ಪದ ಮಾರ್ಗದಲ್ಲಿ ನಡೆದನೆಂದು ಹೇಳುವುದು ತಿರುಳಿಲ್ಲದ ವಿಷಯವಷ್ಟೇ ಅಲ್ಲ ಸತ್ಯಕ್ಕೆ ದೂರವಾದ ಮಾತು ಕೂಡ ಆಗಿದೆ. ಇದರ ನಿಜಾಂಶವನ್ನು ಪರೀಕ್ಷಿಸೋಣ.

ಒಂದು ವೇಳೆ ಸರ್ವಜ್ಞನು ರಾಮುಭಕ್ತನಾಗಿರಬಾರದೇಕೆಂದು ವಾದಕ್ಕಾಗಿ ಒಪ್ಪಿಕೊಂಡರೂ ಅವನ ವಚನಗಳಲ್ಲಿ ಬರುವ, ವಿಷ್ಣುವಿಗೆ ನೈಚ್ಯಾನುಸಂಧಾನವನ್ನು ಮಾಡುವ ಮಾತುಗಳು ಮೇಲಿನ ವಾದಕ್ಕೆ ಮುಖಕವಾಟದಂತಿವೆ.

೧. ರಕ್ಕಸನು ಸೀತೆ ಸೆಳೆವಾಗ ರಾಮು ತರಿದಿಕ್ಕದೇಕಿರ್ದ?

೨. ಇಂಬರಿವ ಸೀತೆಕಳೆದು ಅಳಲು ರಾಮುನಾ ಅಂಬು ಮುರಿದಿತ್ತೆ?

೩. ಹತ್ತು ಭವವನು ಎತ್ತಿ ಎತ್ತು ಎಮ್ಮೆಯು ಕಾದು
ಮತ್ತೆ ಪಾಂಡವರಿಗಾಳಾದ
ಹರಿಯುತಾ ನೆತ್ತಣಾದೈವ?

೪. ನರಸಿಂಹನವತಾರ ಹಿರಿದಾದ ಅದ್ಭುತವು
ಶರಭನುಗುರಿಂದ ಕೊಲುವಾಗ ಹರಿಯು
ಊರನರಿಯಂದವಾದ

೫. ಶೂಲಿತಾ ಮಗನ ತಲೆ ಜಿಗುಟಿ ಹರಿಯೇಕೆ ಪಾಲಿಸದೆ ಹೋದ?

ಇತ್ಯಾದಿ ವಚನಗಳು ಯಾವನೊಬ್ಬ ರಾಮು ಭಕ್ತನಾದ ಕವಿಯ ಬಾಯಿಂದ ಹೊರಸೂಸತಕ್ಕುವಲ್ಲೆಂದು ತಲೆಯಲ್ಲಿ ಮೆದುಳುಳ್ಳವರೆಲ್ಲರಿಗೂ ತಿಳಿದ ವಿಷಯವಾಗಿದೆ.

ಇನ್ನು ಸರ್ವಜ್ಞನು ಶಿವಭಕ್ತನೆಂಬುದಕ್ಕೆ ಅವನ ವಚನಗಳಲ್ಲಿ ಬೇಕಾದಷ್ಟು ಪ್ರಮಾಣಗಳಿವೆ. ಅವನು ಗ್ರಂಥವನ್ನು ಪ್ರಾರಂಭಿಸುವಾಗ

ನಂದಿಯನು ಏರಿದನ ಚಂದಿರನ ಸೂಡಿದನ ।
ಕಂದನಂ ಬೇಡಿ ನಲಿವುತ್ತ................ಎಂದು

ಮುಂದೆ ವಚನಗಳನ್ನು ಹಾಡಿದ್ದಾನೆ. ಅಲ್ಲದೆ ತಾನು 'ಮುನ್ನ ಕೈಲಾಸದಲಿ ಪನ್ನಗಧರನಾಳು' ಎನ್ನಯ ಪೆಸರು ಪುಷ್ಪದತ್ತನು, ಎಂದು ಜನ್ಮಾಂತರದ ಸುದ್ದಿಯನ್ನು ಪ್ರಕಟಿಸಿದ್ದಾನೆ. 'ಎನ್ನ ಮನಸಿಗೆ ನೆನಹ ಪನ್ನಗಧರ ಕೊಟ್ಟ ಬಿನ್ನಾಣದಿಂದ ಸ್ತುತಿಗೈದು ಪೊಗಳುವೆನು ಚೆನ್ನಮೂರುತಿಯ' ಎಂದು

ತನ್ನ ಶಿವಭಕ್ತಿಯ ನಿಷ್ಠೆಯನ್ನು ಪ್ರಕಟಿಸಿದ್ದಾನೆ. ಅಲ್ಲದೆ ಕವಿಯು ವೀರ ಶೈವನಾದ್ದರಿಂದ ವೀರಶೈವಮತ ವಿಷಯಕಗಳಾದ **ಅಷ್ಟಾವರಣ, ಷಟ್ ಸ್ಥಲ, ಜಂಗಮ ಭಕ್ತಿ** ಮೊದಲಾದುವುಗಳನ್ನು ಯಥೇಚ್ಛವಾಗಿ ನಿರೂಪಿಸಿದ್ದಾನೆ. **ಅಸಮಾಕ್ಷನಡಿಯ ಬಿಡದಿರು, ಕೈಲಾಸ ನೆರೆಮನೆ ಅಕ್ಕು, ಶಿವಪೂಜೆ ಮಾಡಿದಡೆ ಶಿವನಕೊಂಡಾಡಿದಡೆ ಶಿವಲೋಕವವಗೆ, ಶರಣರಾಹೃದಯದಲಿ ನೆಲಸಿಹನು ಪರಶಿವನು, ಶಿವಪೂಜೆಮಾಡುವನ ದೇವನೆಂದೆಂಬೆ, ಕಪಿಯೆ ನೀ ಜಂಗಮಕೆ ನೀಡು, ತನ್ನಲಿಹ ಲಿಂಗವರಿಯದಲೆ, ಗಂಗೆಗೋದಾವರಿಯ ಮಿಂದುಫಲವೇನು? ಎಲ್ಲ ದೇವನ ಬೇಡಿ ಹಲ್ಲುಬಾಯ್ ದೆರೆಯದಲೆ ಬಲ್ಲಿದಾ ಶಿವನ ಭಜಿಸಿ ಬೇಡು, ಅರಿದು ಹರನ ಬೇಡು.** ಇತ್ಯಾದಿ ಅನಂತಾನಂತ ವಚನಗಳು ಅವನ ಶಿವಭಕ್ತಿಗೂ ಲಿಂಗ ನಿಷ್ಠೆಗೂ ನಿದರ್ಶನವಾಗಿವೆ. ಹೀಗೆ ಹದಿನಾರಾಣೆ ಶಿವ ಭಕ್ತನಾಗಿ ಪ್ರಸಂಗಬಂದಾಗ 'ಹರಿಯು ಎತ್ತು ಎಮ್ಮೆಯ ಕಾದ' ಎಂದು ಹೇಳಲು ಹಿಂಜಗ್ಗದ ಸರ್ವಜ್ಞಮೂರ್ತಿಯು ರಾಮಭಕ್ತನಾಗುವುದು ಸಾಧ್ಯವೆಂತು? ಹರಿನಾಮವನ್ನು ಅಕ್ಕರೆಯಿಂದ ಭಜಿಸುವುದೆಂತು.?

೧. ವ್ಯಸನದಾ ದೆಸೆಯಿಂದ ಮಸಿಹೆಣ್ಣ ನೊಶಸಾದೆ ।
ಹುಸಿದು ಹೊಗಳುವಳ ಒಡನಾಡಿ ನಾನುಗ್ಗು ।
ನುಸಿಯಾದೆ ಕಾಣೊ ಸರ್ವಜ್ಞ ॥

೨. ರಾಮನಾಮವೆ ನಾಮ ಸೋಮಶೇಖರ ಗುರುವು ।
ಆ ಮಹಾರುದ್ರ ಅಧಿದೈವ ಲೋಕಕ್ಕೆ ।
ಭೀಮನೇ ಭಕ್ತ ಸರ್ವಜ್ಞ ॥

ಎಂಬ ಈ ಎರಡು ವಚನಗಳನ್ನು ಕುರಿತು ವಿಚಾರ ಮಾಡೋಣ. ಈಗ ಪ್ರಕಟವಾಗಿರುವ ಸರ್ವಜ್ಞ ವಚನಗಳಲ್ಲಿ ಹಲವುಮಂದಿ ರಸಿಕರಾದ 'ಕಿಂಚಿಜ್ಞರ ವಚನಗಳು' ಬೆರತು ಹೋಗಿವೆ ಎಂದು ವಿಮರ್ಶೆಯಿಂದ ತಿಳಿದು ಬಂದಿದೆ. ಸರ್ವಜ್ಞ ಸಾಹಿತಿ ಶ್ರೀ ಉತ್ತಂಗಿಯವರು ತಮ್ಮ ಪ್ರಸ್ತಾವನೆ

ಯಲ್ಲಿ ಈ ಮಾತನ್ನು ಒಪ್ಪಿಕೊಂಡಿದ್ದಾರೆ. ಈಗ ಪ್ರಕಟವಾದ ಸರ್ವಜ್ಞ ವಚನಗಳಲ್ಲಿ ಸರ್ವಜ್ಞನವು ಎಷ್ಟು? ಇತರರವು ಎಷ್ಟು ಎಂದು ತೀರ್ಮಾನ ವಾಗಿಲ್ಲ. ಆದರೆ ವಿದ್ವಾಂಸರು ಸರ್ವಜ್ಞನ ಶೈಲಿ, ಭಾವ, ನಿರೂಪಣಪದ್ಧತಿ ಮೊದಲಾದವುಗಳಿಂದ ಅವನ ವಚನಗಳು ಯಾವುವೆಂಬುದನ್ನು ಸ್ಥೂಲವಾಗಿ ತಿಳಿದುಕೊಳ್ಳಬಹುದಾಗಿದೆ. ಮೇಲೆ ಕಂಡ 'ವ್ಯಸನದಾದೆಸೆಯಿಂದ' ಎಂಬ ವಚನವು ಪ್ರಕ್ಷಿಪ್ತವಾದುದೆಂದು ನಮಗೆ ತೋರುತ್ತದೆ. ಈ ಒಂದು ವಚನದ ಆಧಾರದಿಂದ ಅವನ ಮತ್ತುಳಿದ ನೂರಾರು ವಚನಗಳಲ್ಲಿ ಕಂಡು ಬರುವ ವೈರಾಗ್ಯದ ಕೆಚ್ಚನ್ನು ನಾವು ಕಡೆಗಣಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಈ ಪ್ರಕ್ಷಿಪ್ತ ವಚನವನ್ನು ಹಿಡಿದು ಸರ್ವಜ್ಞನನ್ನು ವ್ಯಭಿಚಾರದೋಷಕ್ಕೆ ಗುರಿಮಾಡುವುದು ಕೇವಲ ಕಾಕದೃಷ್ಟಿಯು ನ್ಯಾಯವೆಂದು ನಾವು ಹೇಳಬೇಕಾಗುತ್ತದೆ.

ಇನ್ನು 'ರಾಮ ನಾಮವೆ ನಾಮ' ಎಂಬ ವಚನವನ್ನು ಕುರಿತು ಆಲೋಚಿಸೋಣ. ಆ ವಚನದಲ್ಲಿ ರಾಮನಾಮವು ಜಗತ್ತಿಗೆ ಅತ್ಯಂತ ಪ್ರಿಯವಾದುದೆಂದೂ, ಸೋಮಶೇಖರನು ಲೋಕಕ್ಕೆ ಹಿರಿಯ ಗುರುವೆಂದೂ, ಆ ಮಹಾರುದ್ರನೇ ಲೋಕಗಳ ಅಧಿದೈವವೆಂದೂ, ಭೀಮನೇ ನಿಜವಾದ ಭಕ್ತನೆಂದೂ ಅರ್ಥವಾಗುತ್ತದೆ. ಇದರಿಂದ ಸರ್ವಜ್ಞನ ಶಾಸ್ತ್ರಜ್ಞಾನ ಮತ್ತು ಪ್ರಪಂಚಜ್ಞಾನ ಎಷ್ಟು ಹರಿತವಾಗಿತ್ತೆಂದು ಸ್ಪಷ್ಟವಾಗುತ್ತದೆಯೇ ಹೊರತು ಸರ್ವಜ್ಞನು ರಾಮಭಕ್ತನೆಂದು ಸಿದ್ಧವಾಗುವುದಿಲ್ಲ. ಈಗಲೂ ಹಿಂದೂಸ್ಥಾನದಲ್ಲಿ ವೈಷ್ಣವರಲ್ಲದ ಕೋಟಿಗಟ್ಟಲೆ ಹಿಂದುಗಳು ರಾಮಾಯಣವನ್ನು ಶ್ರದ್ಧಾಸಕ್ತಿಯಿಂದ ಪಾರಾಯಣ ಮಾಡುವುದನ್ನು ನಾವು ನೋಡುತ್ತಿದ್ದೇವೆ. ರಾಮಾಯಣವು ಒಂದು ಆದರ್ಶ ಗ್ರಂಥವೆಂದೂ ರಾಮನು ಲೋಕ ಪ್ರಿಯ ವಿಭೂತಿಯೆಂದೂ ಹೇಳುವುದರಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಸರ್ವಜ್ಞನು ಅನೇಕ ದೃಷ್ಟಿಯಿಂದ ಈ ವಚನವನ್ನು ಹೇಳಿರುವನೆಂದು ನಾವು ತಿಳಿಯಬಹುದು. ಒಂದು ವೇಳೆ ಸರ್ವಜ್ಞನು ರಾಮ ಭಕ್ತನಾಗಿದ್ದರೆ ರಾಮ ನಾಮದಿಂದ ಮುಕ್ತಿಯನ್ನು ಪಡೆಯಲು ಎಳಸಿದ್ದರೆ ಆ ಮಹಾರುದ್ರ ಲೋಕಕ್ಕೆ ಅಧಿದೈವನೆಂದೂ, ಸೋಮಶೇಖರ ಗುರುವೆಂದೂ ಹೇಳುತ್ತಿರಲಿಲ್ಲ. ಅಲ್ಲಿಂದ

ಮುಂದೆ ಭೀಮನು ಭಕ್ತ ಎಂಬ ಮಾತು ಮಹಾಭಾರತದಲ್ಲಿ ಪ್ರಸಿದ್ಧನಾದ ಶಿವಭಕ್ತ ಶಿಖಾಮಣಿ ಎಂದು ಪರಿಗಣಿತನಾದ ಪಾಂಡವಭೀಮಸೇನನನ್ನೇ ನಿರ್ದೇಶಿಸುತ್ತದೆ. ಆದುದರಿಂದ ಈ ವಚನದಲ್ಲಿಯೂ ಕೂಡ ಟೀಕಿಸು ವವರ ಸಿದ್ಧಾಂತವು ತಳವೂರಿನಿಲ್ಲಲು ಸಾಧ್ಯವಿಲ್ಲ. ಸೋಮಶೇಖರ ಗುರುವು ಎಂಬಲ್ಲಿ ಪರಶಿವನನ್ನು ಕುರಿತು ಹೇಳಿದುದೇ ಹೊರತು ಅನ್ಯಥಾ ಇಲ್ಲ. ಎಲ್ಲರೊಳಗೊಂದು ನುಡಿಗಲ್ತ ಸರ್ವಜ್ಞನಿಗೆ ಒಬ್ಬ ಗುರುವಿರುವ ಸಂಭವವಿಲ್ಲ. ಹಾಗಿದ್ದರೆ ಗ್ರಂಥಾರಂಭದಲ್ಲಿ ಅವನ ಸ್ಮರಣೆ ಬರದಿರುತ್ತಿರಲ್ಲಿಲ್ಲ. ಶಿವಸಹಸ್ರ ನಾಮದಲ್ಲಿ 'ರಾಮಾಯನಮಃ' ಎಂದು ಪರಶಿವನನ್ನು ಕುರಿತು ಹೇಳಿದೆ. ಲಿಂಗಾಯತರಲ್ಲಿ ಏಕಾಂತರಾಮ, ಏಕೋರಾಮ, ಸಿದ್ಧರಾಮ ಎಂಬ ಹೆಸರಿನ ವಿಭೂತಿಗಳಾಗಿದ್ದಾರೆ. 'ದ್ರಾಕ್ಷಾರಾಮ' ಎಂಬ ಒಂದು ಕ್ಷೇತ್ರವು ಲಿಂಗಾಯತ ರಿಗೆ ಪೂಜ್ಯವೆನಿಸಿದೆ. ರಾಮೇಶ್ವರ ಲಿಂಗವೂ ಶಿವಗೀತೆಯೂ ಶ್ರೀರಾಮನ ಶಿವ ಭಕ್ತಿಗೆ ಪ್ರತ್ಯಕ್ಷ ನಿದರ್ಶನವಾಗಿವೆ. ಲಿಂಗಾಯತರಿಗೂ ರಾಮನಾಮಕ್ಕೂ ಇರುವ ಬಾಂಧವ್ಯವನ್ನು ಇಲ್ಲಿ ತಿಳಿಯಬಹುದು.

## ಸ್ವಾತಂತ್ರ್ಯಪ್ರಿಯ

ಸರ್ವಜ್ಞನು ಸ್ವಾತಂತ್ರ್ಯಪ್ರಿಯನು. ಸಾವಿರಾರು ವರ್ಷಗಳಿಂದ ದಾಸ್ಯ ವೃತ್ತಿಯಲ್ಲಿ ಹುಟ್ಟಿ ದಾಸತ್ವದಲ್ಲಿ ಬಂದವರಿಗೆ ಇದರ ಬೆಲೆಯನ್ನು ತಿಳಿಯು ವುದು ಸಾಧ್ಯವಿಲ್ಲ. ನಾವು ಹೊಟ್ಟೆಯಸಲುವಾಗಿ ನಮ್ಮ ಮೇಲಧಿಕಾರಿಗಳನ್ನು ಮೆಚ್ಚಿಸುವುದಕ್ಕೆ ಸದಾ ಯತ್ನಿಸುತ್ತೇವೆ. ಇದೇ ನಮ್ಮ ಹಾಡು. ಯಾವ ನಾದರೂ ಇದಕ್ಕೆ ವಿರೋಧವಾಗಿ ನಿಂತು ನೈತಿಕ ಧೈರ್ಯವನ್ನು ತೋರಿಸಿದರೆ ಅವನಿಗೆ ಕೆಲಸದಿಂದ ನಿವೃತ್ತಿಯಾಗುವ ಪ್ರಸಂಗ ಬರುವುದು. ಸತ್ಯಕ್ಕೋ ಸ್ಕರವಾಗಿ ಹೋರಾಡಿ ತಮ್ಮ ಆದಾಯವನ್ನು ಕಳೆದುಕೊಂಡು ಬಡತನಕ್ಕೊಳ ಗಾದವನನ್ನು ಕಂಡರೆ ನಾವು ಇದು ನಿನಗೆ ಏಕೆ ಬೇಕಾಗಿತ್ತು? ಮೇಲಿನವರು ಹೇಳಿದಂತೆ ನೀನು ಕೇಳಿದ್ದರೆ ನೆಟ್ಟಗಾಗುತ್ತಿತ್ತೆಂದು ಹೇಳುತ್ತೇವಲ್ಲದೆ ಸತ್ಯ ಕ್ಕೋಸ್ಕರ ಎಂದಿಗೂ ಅವನನ್ನು ಶ್ಲಾಘಿಸುವುದಿಲ್ಲ. ಇದು ನಮ್ಮ ಸದ್ಯದ ಸ್ವಭಾವಕ್ಕೆ ವಿರೋಧ. ಈ ದಾಸ್ಯವೃತ್ತಿಯ ಸ್ವಭಾವದಿಂದ ನಮ್ಮ ರಾಷ್ಟ್ರವೂ

**ಸಮಾಜವೂ** ಮನೆಗಳೂ ಅಧೋಗತಿಗೆ ಹೋಗಹತ್ತಿವೆ. ದಾಸ್ಯದ ಮನೋವೃತ್ತಿಯೇ ನಮ್ಮ ಗುಣಸ್ವಭಾವವಾಗಿರುವುದರಿಂದ ಇದು ವಂಶಪಾರಂಪರ್ಯವಾಗಿಯೂ ನಮ್ಮಲ್ಲಿ ಕಂಡುಬರುತ್ತದೆ. ಇಂತಹ ರಾಷ್ಟ್ರದಲ್ಲಿ ವಿಶೇಷತಃ ನಮ್ಮ ಕರ್ಣಾಟಕದಲ್ಲಿ ಸರ್ವಜ್ಞನಂಥವರು ಉದಯುವಾಗಬೇಕು. ಅವನಂತಹ ಖಂಡಿತ ಗುಣ, ನೈತಿಕ ಧೈರ್ಯವುಳ್ಳವರು ಅನೇಕರು ತಲೆಯೆತ್ತಬೇಕು. ಮಹಾತ್ಮಾ ಗಾಂಧಿಯವರಲ್ಲಿ ಅಂತಹ ಸದ್ಗುಣಗಳಿದ್ದುವೆಂಬುದನ್ನು ನಾವು ತಿಳಿದಿರುತ್ತೇವೆ.

ಕಪ್ಪರದಲುಂಬುವರು। ಒಪ್ಪರದಿ ನಡೆಯುವರು।
ತಪ್ಪಿದರೆ ಹಲ್ಲ ಕಳೆಯುವರು ಮಹಾತ್ಮರ।
ಒಪ್ಪವಂ ನೋಡ! ಸರ್ವಜ್ಞ ॥

## ಕ್ರಾಂತಿಕಾರಕ ಕವಿ

ವೇದಧರ್ಮದಲ್ಲಿರುವ ನ್ಯೂನತೆಯನ್ನು ಹೊರಗೆಡವಲಿಕ್ಕೆ ಕೆಲವು ಮಂದಿ ಧಾರ್ಮಿಕ ಕ್ರಾಂತಿಕಾರರು ಹಿಂದೂಸ್ಥಾನದಲ್ಲಿ ಹುಟ್ಟಿದ್ದಾರೆ. **ಗೌತಮ ಬುದ್ಧನು** ಇಂತಹ ಕ್ರಾಂತಿಕಾರರಲ್ಲಿ ಅಗ್ರಗಣ್ಯನು. ಅನಂತರ **ಬಸವೇಶ್ವರ,** ರಾಮಾನಂದ, ಕಬೀರ, ತುಲಸೀದಾಸ, ಚೈತನ್ಯ ಮೊದಲಾದವರ ಹೆಸರುಗಳು ಬರುತ್ತವೆ. ಗೌತಮನು ಅಹಿಂಸಾವಾದಿ, ಇವನು ವರ್ಣಾಶ್ರಮಗಳ ಗೊಂದಲವನ್ನು ಕಿತ್ತೊಗೆದವನು. ಮಿಕ್ಕವರು ಕರ್ಮಮಾರ್ಗವನ್ನು ತ್ಯಜಿಸಿ ಭಕ್ತಿಪಂಥವನ್ನು ಬೆಳೆಸಿದವರು. ದ್ರಾವಿಡದೇಶದ ಅರುವತ್ತುಮೂವರುಪುರಾತನರೂ,ಮಹಾರಾಷ್ಟ್ರದ ವಾಲ್ಕರೀಪಂಥದ ಜನಕರಾದ ರಾಮದಾಸ, ತುಕಾರಾಮ, ಏಕನಾಥ ಮೊದಲಾದ ಸಾಧುಸಂತರೂ, ಭಕ್ತಿಭಾವವನ್ನು ಬಹಳವಾಗಿ ಬೆಳೆಸಿದವರು. ಗುರುನಾನಕನು ಏಕೇಶ್ವರವಾದ, ಸಮತಾವಾದದ ಪುರಸ್ಕರ್ತನು. ಈ ರೀತಿಯಾಗಿ ವೇದಧರ್ಮದಲ್ಲಿನ ಯಜ್ಞಯಾಗವೇಮೊದಲಾದ ತತ್ವಗಳಮೇಲೆಯೂ ಗೌತಮನಿಂದ ಇಂದಿನವರೆಗೆ ಗದೆಯನ್ನು ಎತ್ತಿದ ಕ್ರಾಂತಿಕಾರಕರು ಎಷ್ಟೋ ಮಂದಿಆಗಿಹೋಗಿದ್ದಾರೆ. ಅಂತಹವರಲ್ಲಿ **ಗಾಂಧಿಜಿಯೇ** ಇತ್ತೀಚಿನ ಅದ್ಭುತ ವ್ಯಕ್ತಿಯೆನ್ನಬಹುದು.

ಹಿಂದೂ ಜನಾಂಗದಲ್ಲಿಯೇ ಸೇರಿದ್ದು ವೇದಧರ್ಮದಲ್ಲಿನ ಯಜ್ಞ ಯಾಗ,ವರ್ಣಾಶ್ರಮ, ಸ್ತ್ರೀಪುರುಷಭೇದ ಈ ಮೊದಲಾದ ತತ್ತ್ವಗಳ ಮೇಲೆ ಕ್ರಾಂತಿಯ ಧ್ವಜವನ್ನು ಎತ್ತಿ ಹಿಡಿದು ಸಾಮೂಹಿಕ ರೀತಿಯಿಂದ ಚಳುವಳಿ ನಡೆಸಿದವರೆಂದರೆ ವೀರಶೈವರೇ ಎಂದು ಹೇಳಬೇಕು. ವೀರಶೈವ ಸಿದ್ಧಾಂತವು ಹಿಂಸಾಮಯವಾದ ಯಜ್ಞಯಾಗಗಳನ್ನೂ, ಜನಾಂಗದಲ್ಲಿ ತರತಮಭಾವವನ್ನೂ ಹುಟ್ಟಿಸುವ ವರ್ಣಾಶ್ರಮಗಳನ್ನೂ, ಪಕ್ಷಪಾತಮಯವಾದ ಸ್ತ್ರೀ ಪುರುಷಭೇದವನ್ನೂ ನಿರಾಕರಿಸಿದೆ. ಆದುದರಿಂದಲೇ ದ್ವೈತ, ವಿಶಿಷ್ಟಾದ್ವೈತ ಸಿದ್ಧಾಂತಗಳ ರೀತಿನೀತಿಗೂ ಶಕ್ತಿವಿಶಿಷ್ಟಾದ್ವೈತ (ವೀರಶೈವ) ಸಿದ್ಧಾಂತದ ಸ್ವರೂಪಕ್ಕೂ ಹಲವು ವ್ಯತ್ಯಾಸಗಳು ಕಾಣುತ್ತಿವೆ.

ವೀರಶೈವಮತೋದ್ಧಾರಕರಾದ ಶ್ರೀ ಬಸವೇಶ್ವರ, ಚೆನ್ನಬಸವೇಶ್ವರ, ಸಿದ್ಧರಾಮೇಶ್ವರ ಮೊದಲಾದ ಪ್ರಮಥರು ಕನ್ನಡದ ಉಪನಿಷತ್ತೆನಿಸುವ ವಚನಶಾಸ್ತ್ರದಲ್ಲಿ ವೀರಶೈವ ಸಿದ್ಧಾಂತಾನುಸಾರವಾಗಿ ಮೇಲೆ ಹೇಳಿದ ವಿಚಾರಗಳ ಬಗ್ಗೆ ಮಾರ್ಮಿಕವಾಗಿ ಟೀಕಿಸಿದ್ದಾರೆ. ವಿಶೇಷತಃ ಶರಣರು ಅನುಭವಕ್ಕೆ ಪ್ರಾಮುಖ್ಯತೆಯನ್ನು ಕೊಡತಕ್ಕವರೆಂದು ತೋರುತ್ತದೆ. ಸರ್ವಜ್ಞ ಮೂರ್ತಿಯು ಈ ವಿಚಾರದಲ್ಲಿ ಕ್ರಾಂತಿಕಾರರ ಗುಂಪಿಗೆ ಸೇರಿದವನು. ತನ್ನ ಅನುಭವಕ್ಕೆ ವಿರುದ್ಧವಾಗಿ ವೇದ ಪ್ರಮಾಣವನ್ನು ಹೇಳಬಂದ ವೈದಿಕರಿಗೆ ಇವನು ಖಡಾಖಡಿಯಿಂದ;

ವೇದವೇ ಹಿರಿದೆಂದು ವಾದವನು ಮಾಡುವಿರಿ ।
ವೇದದಲೇನು ಹಿರಿದಿಹುದು ? ಅನುಭವಿಯ ।
ವೇದವೇ ವೇದ ಸರ್ವಜ್ಞ ॥

ಎಂದು ಹೇಳಿ ಬಿಟ್ಟವನು. ಜಾತಿಜಾತಿಗಳ ಹೊಡೆದಾಟವನ್ನು ನೋಡಿ ಅಭಿಮಾನಿಯಾದ ಉಚ್ಚವರ್ಣದವರನ್ನು ಕುರಿತು '**ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ? ಯಾತರದು ಹೂವೇನು ನಾತರದು ಸಾಲದೇ?** ಎಂದು ಕೇಳಿ, ಕಡೆಗೆ;

ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು ।
ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ ।
ನಡುವೆಯೆತ್ತಣದು? ಸರ್ವಜ್ಞ ॥

ಎಂದು ವಿಶ್ವಬಂಧುತ್ವದ ತನ್ನ ಸಂದೇಶವನ್ನು ಸಾರಿದವನು. ಸ್ತ್ರೀಯರು ಪುರುಷರಿಗಿಂತ ಕಡಿಮೆ ಯೋಗ್ಯತೆಯುವರೆಂದೂ, ಸ್ತ್ರೀ ಜನಾಂಗಕ್ಕೇ ಮೋಕ್ಷಾಧಿಕಾರವಿಲ್ಲೆಂದೂ, ವೇದಾಧ್ಯಯನ, ದೇವಪೂಜಾದಿಗಳಿಗೆ ವನಿತೆಯರು ಅರ್ಹರಲ್ಲವೆಂದೂ ವಾದಿಸುವ ಸನಾತನಿಗಳನ್ನು ಕುರಿತು–

ಪಲ್ಲಕ್ಕಿ ಏರಿದವರೆಲ್ಲಿಂದ ಬಂದಿಹರು ।
ನೆಲ್ಲಕ್ಕಿಯಂತ ಸುಲಿವಲ್ಲ ಹಿರಿಯರು ।
ನಲ್ಲಳಿಂದಲ್ಲೆ? ಸರ್ವಜ್ಞ ॥

ನಲ್ಲೆಯೊಲ್ಲೆಂಬುವರ ಸೊಲ್ಲು ನಾಲಗೆ ಹೊಲೆಯು ।
ಬಲ್ಲಿದ ಶ್ರವಣ ಸಂನ್ಯಾಸಿ ಇವರುಗ ।
ಳೆಲ್ಲಿ ಉದಸಿದರು? ಸರ್ವಜ್ಞ ॥

ಎಂಬುದಾಗಿ ಪ್ರಶ್ನಿಸಿ,ಅವರ ಬಾಯಿಮುಚ್ಚಿಸಿ 'ನಿಶ್ಚಯವ ಬಿಡದೆ ಒಬ್ಬರಿಚ್ಛೆಯಲಿ ನಡೆಯದೆ, ತನ್ನ ಚಲವನ್ನು ಸಾರ್ಥಕಪಡಿಸಿಕೊಂಡವನೀ ಸರ್ವಜ್ಞನು. ಅಂಧ ಶ್ರದ್ಧೆಯಲ್ಲಿ ಸಿಕ್ಕು ಸ್ವಾರ್ಥಪರವೈದಿಕರ ಪಾಶದಲ್ಲಿ ಬಿದ್ದು ತೊಳಲಿ ಬಳಲುವ ಹಿಂದೂ ಸಮಾಜದ ಉದ್ಧಾರಕ್ಕಾಗಿ ಹುಟ್ಟಿದ ಧಾರ್ಮಿಕ ಕ್ರಾಂತಿಕಾರಕರಲ್ಲಿ ಸರ್ವಜ್ಞಮೂರ್ತಿಯು ಮೂರ್ಧನ್ಯನೆಂದು ಹೇಳಬಹುದು.

ಸುಲಭಶೈಲಿಯಲ್ಲಿ ಸರ್ವಜ್ಞನು ತನ್ನ ವಚನಗಳನ್ನು ಬರೆದದ್ದು ಕನ್ನಡ ಕಾವ್ಯ ಲೋಕದಲ್ಲಿಯೇ ಒಂದು ವಿಶೇಷತರದ ಮಾರ್ಪಾಟವನ್ನು ಮಾಡಿದೆಯೆಂದು ಹೇಳಬೇಕು. ಕಾವ್ಯಸಾಮ್ರಾಜ್ಯದಲ್ಲಿ ಪಂಡಿತರಿಗೆ ತಿಳಿಯುವಂತೆ ಬರೆದ ಕಾವ್ಯಗಳು, ಪಾಮರರಿಗೆ ತಿಳಿಯುವಂತೆ ಬರೆದ ಕಾವ್ಯಗಳು ಎಂದು ಎರಡು ಭಾಗಗಳನ್ನು ಮಾಡಿದರೆ, ಪಂಡಿತರಲ್ಲಿ ಮಾತ್ರ ಪ್ರಕಾಶಿಸುತ್ತಿದ್ದ ಆಸ್ಥಾನಕವಿಗಳು ದೊರೆಗಳನ್ನು ಮೆಚ್ಚಿಸುವುದಕ್ಕಾಗಲಿ ಅಲ್ಪವಿಷಯವನ್ನು ವರ್ಣಿಸುವುದರಲ್ಲಿ ತಮ್ಮ ಬುದ್ಧಿಯನ್ನು ತೋರಿಸುವುದಕ್ಕಾಗಲಿ ಧಾವತಿಪಟ್ಟಿರುವರೆಂದು ಹೇಳಬೇಕು. ಇವರಿಗೆ (Nominated Poets)

ಅಂದರೆ ರಾಜರಿಂದ ನೇಮಕವಾದವರೆಂದು ಹೇಳಬಹುದು. ಎರಡನೇತರದ ಕವಿಗಳೆಂದರೆ ಜನತೆಯ ಸುಖದುಃಖಗಳನ್ನು ಅರಿತು ಅವರಲ್ಲಿರುವ ಕುಂದು ಕೊರತೆಗಳನ್ನು ತಿಳಿದು ಅವರನ್ನು ಸನ್ಮಾರ್ಗಕ್ಕೆ ತರುವುದಕ್ಕಾಗಿ ಹೃದಯವು ಕರಗಿ ನೀರಾಗಿ ಅದನ್ನು ಕಾವ್ಯರೂಪವಾಗಿ ಪರಿಸಿದವರೇ. ಇವರಿಗೆ (Elected Poets) ಎಂದರೆ ಜನರಿಂದ ಚುನಾಯಿಸಲ್ಪಟ್ಟವರು ಎಂದು ಹೇಳಬಹುದು. ಸರ್ವಜ್ಞನು ಈ ಎರಡನೆಯ ವರ್ಗಕ್ಕೆ ಸೇರಿದ ಕವಿಯು ಪ್ರಜಾಸತ್ತಾತ್ಮಕವಾದ ಈ ಯುಗದಲ್ಲಿ ಇಂಥವರಿಗೆ ಈಗೀಗ ಮಹತ್ವವು ದೊರೆಯ ಹತ್ತಿದೆಯಷ್ಟೆ. **ಸರ್ವಜ್ಞ**ನೆಂಬುದಾದರೂ ಒಂದು ಬಿರುದಾಗಿದ್ದು ಅದು ಜನಸಾಮಾನ್ಯದಿಂದಲೇ ದೊರತದ್ದೆಂಬುವುದಕ್ಕೆ ಸೋಮೇಶ್ವರಶತಕದಿಂದ ಒಂದು ಶ್ಲೋಕವನ್ನು ಉದಾಹರ್ರಿಸುತ್ತೇವೆ. ಇದರಿಂದ ಅವನು ಆಗಿನ ಕಾಲದ ವಿಶ್ವವಿದ್ಯಾಸಿಲಯದ ಬಿರುದನ್ನು ಧರಿಸಿದಂತೆ ಕಾಣುತ್ತದೆ.

ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ ।
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ॥
ಕೆಲವಂ ಸಜ್ಜನಸಂಗದಿಂದಲರಿಯಲ್ ಸರ್ವಜ್ಞನಪ್ಪಂ ನರಂ ।

ಇದರಿಂದ ಬಹುಶ್ರುತನಾದವನಿಗೆ ಈ ತರದ ಬಿರದುಕೊಡುವ ರೂಢಿಯಿತ್ತೆಂದೂ ಆ ಬಿರುದು ಸರ್ವಜ್ಞನಿಗೆ ಜನತೆಯಿಂದಲ್ಲದೆ ಆಸ್ಥಾನದಿಂದ ದೊರೆತದ್ದಲ್ಲವೆಂದೂ ವಿಶದವಾಗುತ್ತದೆ. ಸರ್ವಜ್ಞನಾದರೂ ಈ ಮಾತಿಗೆ ಅಸ್ತುಪಟ್ಟಂತೆ ಮುಂದಿನ ಪದ್ಯದಿಂದ ತಿಳಿಯುತ್ತದೆ.

ಸರ್ವಜ್ಞನೆಂಬವನು । ಗರ್ವದಿಂದಾದವನೆ? ।
ಸರ್ವರೊಳೊಂದೊಂದು-ನುಡಿಗಲಿತು ವಿದ್ಯೆಯಾ ।
ಪರ್ವತವೆ ಆದ ಸರ್ವಜ್ಞ ॥

ಮೇಲೆ ಹೇಳಿದಂತೆ ಸರ್ವಜ್ಞನು ಪಂಡಿತ ಪಾಮರರಂಜಕನಾದ ಕವಿಯು. ಉದಾತ್ತವಾದ ತತ್ವಗಳನ್ನು ಸುಲಭವೂ ಸುಲಲಿತವೂ ಆದ ಕನ್ನಡದಲ್ಲಿ ಹೇಳುವದೇ ಇವನ ವಿಶಿಷ್ಟತೆಯು. ಜರ್ಮನಿಯಲ್ಲಿ ಒಬ್ಬ ತತ್ವಜ್ಞಾನಿಯು ತನ್ನ ವಿದ್ಯಾರ್ಥಿಗಳಿಗೆ ಒಂದು ವಾಖ್ಯಾನವನ್ನು ಕೊಟ್ಟಾಗ 'ನೂರ

ರಲ್ಲಿ ತೊಂಬತ್ತೊಂಭತ್ತು ವಿದ್ಯಾರ್ಥಿಗಳು ನನ್ನ ಭಾಷಣವನ್ನು ತಿಳಿದಿರಲಿಕ್ಕಿಲ್ಲ. ತಿಳಿದ ಆ ಒಬ್ಬನಾದರೂ ತಪ್ಪಾಗಿ ತಿಳಿದಿದ್ದಾನೆಂದು ನಾನು ನೆನಸುತ್ತೇನೆ ಎಂಬುದಾಗಿ ಹೇಳಿದನಂತೆ. ಆದರೆ ಸರ್ವಜ್ಞನು ಇಂಥವನಲ್ಲ. ಇವನು, ವಿಷಯವು ಎಷ್ಟು ಅಗಮ್ಯವಾಗಿದ್ದರೂ ಆದನ್ನು ನೂರರಲ್ಲಿ ತೊಂಬತ್ತೊಂಭತ್ತು ಮಂದಿಗೆ ತಿಳಿಯುವಂತೆ ಮಾಡುವುದಕ್ಕಾಗಿಯೇ ಹುಟ್ಟಿದವನು. ಆದುದರಿಂದ ಅವನು ಸುಲಭಶೈಲಿಯ ಪಂಡಿತನಾಗಿದ್ದು ಸುಲಭವಾದ ತ್ರಿಪದಿಯ ಛಂದಸ್ಸನ್ನು ತಲೆಯಲ್ಲಿಟ್ಟನು. / ಇಂದು ಹೆಣ್ಣುಮಕ್ಕಳು ಬೀಸುವ ಕುಟ್ಟುವ ಕಾಲದಲ್ಲಿ ಹಾಡುತ್ತಿರುವ ಪದಗಳೇ ತ್ರಿಪದಿಗೆ ಮೂಲವೆಂದು ಹಿಂದೆ ಸೂಚಿಸಿದ್ದೇವೆ. ಆದುದರಿಂದ ಇವನು ಅಡಿಗೆಯ ಮನೆಯ ಛಂದಸ್ಸೆನ್ನಿಸಿಕೊಳ್ಳುವ ಆ ತ್ರಿಪದಿಯ ಅಚ್ಚಿನಲ್ಲಿಯೇ ಸಾವಿರಾರು ಪದ್ಯಗಳನ್ನು ಉಸುರಿದಿದ್ದಾನೆ. ಹೀಗಾಗಿ ಇವನಿಗೆ 'ರೂಢಗನ್ನಡ ಕವಿಶಿಖಾಮಣಿ' ಎಂದು ಹೇಳಿದರೆ ತಪ್ಪಾಗದು. ಸರ್ವಜ್ಞಮೂರ್ತಿಗೆ **ಜಾನಪದ ಕವಿಚಕ್ರವರ್ತಿ** ಎಂಬ ಪ್ರಶಸ್ತಿ ಇನ್ನೂ ಚೆನ್ನಾಗಿ ಸಲ್ಲುವುದು./

ಸುಲಭ ಶೈಲಿಯಲ್ಲಿಯೂ ಸ್ವಲ್ಪ ಶಬ್ದಗಳಲ್ಲಿಯೇ ಬಹಳ ಅರ್ಥವನ್ನಿಟ್ಟು (Short and Sweet) ಹೇಳುವುದು ಈ ಕವಿಯ ಇನ್ನೊಂದು ವಿಶಿಷ್ಟತೆ. ಇದು ಸಹ ಸಾಹಿತ್ಯದೃಷ್ಟಿಯಿಂದ ಕನ್ನಡ ಭಾಷೆಯಮೇಲೆ ವಿಶೇಷ ಪರಿಣಾಮವನ್ನುಂಟುಮಾಡಿದೆ. ಸ್ವಭಾವ ಪರಿಚಯ, ದೃಷ್ಟಾಂತ ಯೋಜನೆಯಲ್ಲಿರುವ ಜಾಣ್ಮೆ, ಪದಗಳ ಲಾಲಿತ್ಯ, ಹತ್ತು ಶಬ್ದಗಳಲ್ಲಿ ಹತ್ತು ಪುಟಗಳಲ್ಲಿ ಬರೆಯಬಹುದಾದ ವಿಷಯವನ್ನೇ ಸ್ವಲ್ಪದರಲ್ಲಿ ಅಡಗಿಸುವ ಕೌಶಲ್ಯ ಇವುಗಳನ್ನು ತೋರಿಸುವದಕ್ಕೆ ಒಂದೆರಡು ಪದ್ಯಗಳನ್ನು ಉದಾಹರಿಸುತ್ತೇವೆ.

ಬಡವನಾ ಹೆಂಡತಿಯು । ಕುಡುಚೆಲುವೆಯಾಗಿಹರೆ ।  
ನಡುಬೀದಿಯೊಳಗೆ ದವನವನು ಬಿತ್ತಲು ।  
ಮುಡಿಯದವರಾರು? ಸರ್ವಜ್ಞ ॥

ಅಪ್ಪಿ ಸಪ್ಪಾದವಳ । ನಪ್ಪುವನು ಕಡುಹೆಡ್ಡ ।  
ತುಪ್ಪ ಉಂಡೊಗೆದ-ಎಲೆನೆಕ್ಕಿ ನಾಯಿ ಬಾಯ್ ।  
ಚಪ್ಪರಿಸಿದಂತೆ ಸರ್ವಜ್ಞ ॥

ಸರ್ವಜ್ಞನು ಕನ್ನಡಸಾಹಿತ್ಯದಮೇಲೆ ಮಾಡಿದ ಇನ್ನೊಂದು ವಿಶೇಷ ಪರಿಣಾಮವೆಂದರೆ ಅವನು ಕಾವ್ಯಕ್ಕೆ ಗಂಡು ಸ್ವರೂಪವನ್ನು ಕೊಟ್ಟದ್ದೇ ಎಂದು ಹೇಳಬೇಕು. ನಾವು ಈಗಿನ ಕಾಲದಲ್ಲಿ ಕ್ಲಿಷ್ಟ ಪದಗಳಿಂದಲೂ ದೀರ್ಘಸಮಾಸಗಳಿಂದಲೂ ಯುಕ್ತವಾಗಿದ್ದು ಛಂದೋಬದ್ಧವಾಗಿಯೂ ಸುಲಲಿತವಾಗಿಯೂ ನವರಸಭರಿತವಾಗಿಯೂ ಲಾಕ್ಷಣಿಕವಾಗಿಯೂ ಇರುವ ಕಾವ್ಯಕ್ಕೆ ಮಹಾಕಾವ್ಯವೆಂದು ಹೇಳುತ್ತೇವೆ. ಇಂತಹ ಕಾವ್ಯಗಳೇ ಕನ್ನಡ ವಾಙ್ಮಯದಲ್ಲಿ ಸೇರುವುದಕ್ಕೆ ಯೋಗ್ಯವಾದವುಗಳೆಂದು ನಮ್ಮ ತಿಳಿವಳಿಕೆ. ಸುಂದರವಾದ ಪದಾರ್ಥದಮೇಲೆ ಸಹಜವಾಗಿ ಮೋಹವು ಉಂಟಾಗುವಂತೆ ಇಂತಹ ಮಹಾಕಾವ್ಯಗಳ ಮೇಲೆಯೂ ಮೋಹವು ಉಂಟಾಗುವುದು ಸಹಜ. ಲಕ್ಷಣಬದ್ಧವಾದ ಕಾವ್ಯಗಳನ್ನು ಓದಿದ ಪಂಡಿತರಲ್ಲಿ ಕೆಲವರು ಅನೇಕಾವರ್ತಿ ಸರ್ವಜ್ಞನ ವಚನಗಳನ್ನು ಕಿಡಿಗಣ್ಣಿನಿಂದಲೂ ಕೆಲವರು ಕಡೆಗಣ್ಣಿನಿಂದಲೂ ನೋಡುವುದುಂಟು. ಇದು ರುಚಿಭೇದದಿಂದ ಉಂಟಾದ ಪರಿಣಾಮವಲ್ಲದೆ ಯೋಗ್ಯತಾಯೋಗ್ಯತೆಯನ್ನರಿತು ಉಂಟಾದುದಲ್ಲ. ಸರ್ವಜ್ಞನು ಕಾವ್ಯಕ್ಕೆ ಗಂಡುರೂಪವನ್ನು ಕೊಟ್ಟದ್ದೇ ಇಂತಹ ಭಿನ್ನರುಚಿಯುಳ್ಳವರು ಅವನ ಕಾವ್ಯಗಳನ್ನು ತಿರಸ್ಕರಿಸುವುದಕ್ಕೆ ಕಾರಣವೆಂದು ನಮಗೆ ತೋರುತ್ತದೆ. ನಾಟಕಶಾಲೆಯಲ್ಲಿ ರಂಗಸ್ಥಳದಮೇಲೆ ಒಬ್ಬ ಯುವಕನು ಸ್ತ್ರೀಯ ಉಡುಪುಗಳನ್ನು ಧರಿಸಿಕೊಂಡು ನಿಂತರೆ ಅವನು ಸ್ತ್ರೀ ಪಾತ್ರಕ್ಕೆ ಬಹು ಯೋಗ್ಯವಾಗಿ ಒಪ್ಪುತ್ತಾನೆಂದು ಅವನ ವಿಷಯವಾಗಿ ಆನಂದ ಪಡುತ್ತೇವೆ. ಅದೇ ಒಬ್ಬ ಯುವತಿಯು ಪುರುಷನ ವೇಷವನ್ನು ಹಾಕಿಕೊಂಡು ರಂಗಸ್ಥಳದಲ್ಲಿ ನಟಿಸುವುದು ಗೊತ್ತಾದೊಡನೆ ನಮಗೆ ರೋಮಾಂಚನವಾಗುತ್ತದೆ. ಇದಕ್ಕೆ ಕಾರಣವೇನು? ನಮ್ಮ ಪೂರ್ವದ ರುಚಿಯು ಕಾರಣವಲ್ಲದೆ ವಸ್ತುಸ್ಥಿತಿಯು ಕಾರಣವಲ್ಲ. ಇನ್ನೊಂದು ಉದಾಹರಣೆಯನ್ನು ಹೇಳಿದರೆ ದೇವರು ನಮ್ಮ ಅಂಗರಕ್ಷಣೆಗೋಸ್ಕರ ದೇಹದಮೇಲೆ ಕೆಲವೆಡೆಯಲ್ಲಿ ಕೂದಲುಗಳನ್ನು ಕೊಟ್ಟಿದ್ದಾನೆ. ಇದು ಸ್ವಾಭಾವಿಕವಾದ ಸೃಷ್ಟಿಯ ನಿಯಮ. ಆದರೆ ನಾವು ಕಾರಣಾಂತರಗಳಿಂದ ಮುಖದಮೇಲಿನ ಕೂದಲುಗಳನ್ನು ತೆಗೆಸುವದೊಂದು ಹೊಸ ರೂಢಿಯನ್ನು ಸ್ಥಾಪಿಸಿದ್ದೇವೆ. ಕಾಲಾಂತರದಲ್ಲಿ ಇದೇ ನಮಗೆ

ಸ್ವಭಾವವಾಗಿ ಹೋಗಿದೆ. ಇದು ಕೃತ್ರಿಮಸೃಷ್ಟಿ. ಹೀಗಿದ್ದರೂ ಸ್ವಾಭಾವಿಕ ಸೃಷ್ಟಿಯಮೇಲೆ ಅಸಂತೋಷವೂ ಕೃತ್ರಿಮ ಸೃಷ್ಟಿಯಮೇಲೆ ಪ್ರೇಮವೂ ಉಂಟಾಗುವುದಕ್ಕೆ ನಾವು ಮಾಡಿಕೊಂಡ ರೂಢಿಯಲ್ಲದೆ ಮತ್ತೊಂದು ಕಾರಣವಿಲ್ಲ. ಹೀಗಾಗಿ ಸರ್ವಜ್ಞನು ಕಳೆದುಹೋಗಿದ್ದ ಸ್ವಾಭಾವಿಕ ಸೌಂದರ್ಯವನ್ನು ಪುನಃ ರೂಢಿಸುವದಕ್ಕಾಗಿ ಕಾವ್ಯಕ್ಕೆ ಗಂಡುರೂಪವನ್ನು ಕೊಟ್ಟನೆಂದು ಹೇಳಬೇಕಾಗುತ್ತದೆ. ಅವನು ತಾನು ರಚಿಸಿದ ಕಾವ್ಯಗಳಲ್ಲಿ, ನೋಡಿದ ಸೃಷ್ಟಿಯ ವಸ್ತುಗಳಲ್ಲಿ ಇಲ್ಲವೆ ಪ್ರಾಣಿಗಳಲ್ಲಿ ಗಂಡುತನವನ್ನು ಕೊಂಡಾಡಿರುವನಲ್ಲದೆ ಹೆಣ್ಣುತನವನ್ನು ಕೊಂಡಾಡಿದ್ದು ಕಡಿಮೆ. ಹೆಣ್ಣಿನಲ್ಲಿಯೂ ಗಂಡುತನವನ್ನೇ ಕೊಂಡಾಡಿರುವದಾಗಿ ಈ ಮುಂದಿನ ಪದ್ಯದಿಂದ ಪರಿಸ್ಫುಟವಾಗುತ್ತದೆ.

ಬಿಲ್ಲುಂ ಬಲ್ಲಿತು ನಾರು । ಬಿಲ್ಲಿಂದ ಕಡುಸಣ್ಣ ।
ಬಿಲ್ಲನೆ ಮುರಳಿ—ಎರಗಿಸಿತು ನಾರಿಯಿಂ ।
ಬಲ್ಲಿದರು ಯಾರು ? ಸರ್ವಜ್ಞ ॥

—ಅಂದರೆ ಬಿಲ್ಲಿನ ದಾರವು ಬಿಲ್ಲು ಕಟ್ಟಿಗೆಗಿಂತ ಬಹು ಸಣ್ಣದಾಗಿದ್ದರೂ ದಪ್ಪವಾದ ಆ ಕಟ್ಟಿಗೆಯನ್ನು ಅದು ಹೇಗೆ ಬಗ್ಗಿಸುವದೋ ಹಾಗೆಯೇ ಸ್ತ್ರೀಯು ಅಬಲೆಯಾಗಿದ್ದರೂ ಬಲವಾದ ಪುರುಷನನ್ನು ಬಗ್ಗಿಸಿಬಿಡುವಳು ಎಂದರ್ಥ. ಹೀಗೆ ಕಾವ್ಯಕ್ಕೆ ಗಂಡು ಸ್ವರೂಪವನ್ನು ಕೊಟ್ಟ ಗಂಡುಗಲಿಯಾದ ಸರ್ವಜ್ಞನು ಸ್ತ್ರೀಯರಲ್ಲೂಕೂಡ ಗಂಡುತನವನ್ನೇ ಕಂಡಿದ್ದಾನೆ. ಹೀಗಾಗಿ ಅವನು ಅಧೋಗತಿಗೆ ಹೋಗುತ್ತಿದ್ದ ಕರ್ಣಾಟಕದ ಪ್ರತಿಯೊಂದು ಸಮಾಜದವರನ್ನೂ ಎಬ್ಬಿಸಿ ಅವರಲ್ಲಿರುವ ದೋಷಗಳನ್ನು ಬೈಲಿಗೆಳದು ಅಬಲೆಯಂತಿದ್ದ ಕರ್ಣಾಟಕವನ್ನು ಗಂಡುತನಕ್ಕೆ ಕರೆಯುವುದಕ್ಕಾಗಿಯೇ ತನ್ನ ಕಾವ್ಯಗಳನ್ನು ಬರೆದನು. ಇದರ ಮರ್ಮವು ಹಾಗೂ ಯೋಗ್ಯತೆಯು ನಮಗೆ ಗೊತ್ತಾದಾಗ ಮಾತ್ರ ಇವನ ಕಾವ್ಯಕ್ಕೆ ತಕ್ಕ ಬೆಲೆಯು ಬರುವುದು. ಅದು ಈಗಲೇ ಬಂದಿದೆ.

## ಕಾವ್ಯಾಭ್ಯಾಸ

ಇನ್ನು ಸರ್ವಜ್ಞನ ವಚನಗಳನ್ನು ಹೇಗೆ ಅಭ್ಯಾಸಿಸಬೇಕೆಂಬುದರ ಬಗ್ಗೆ ಕೆಲವು ವಚನಗಳನ್ನು ಉದಾಹರಿಸುತ್ತೇವೆ. ಹೀಗೆ ಉದಾಹರಿಸುವಲ್ಲಿ ವಿಸ್ತಾರಭಯಕ್ಕೋಸ್ಕರ ಒಂದೊಂದು ವಿಷಯಕ್ಕೆ ಒಂದೊಂದು ಪದ್ಯವನ್ನು ಮಾತ್ರವೇ ಆರಿಸಿಕೊಂಡು ಅದನ್ನು ಸ್ವಲ್ಪದರಲ್ಲಿ ಹೇಳಲಾಗುವುದು.

## ಶಿಕ್ಷಣ ಪದ್ಧತಿ

ಶಿಕ್ಷಣ ದೃಷ್ಟಿಯಿಂದ ನೋಡಿದರೆ ಸರ್ವಜ್ಞನು ಒಬ್ಬ ಸಾಮಾಜಿಕ ಮಹೋಪಾಧ್ಯಾಯನೆಂದು ಹೇಳಬಹುದು. ಕನ್ನಡ ಜನರ ಜ್ಞಾನಾಭಿವೃದ್ಧಿಗಾಗಿ ಸರ್ವಜ್ಞನು ಇಡೀ ತನ್ನ ಆಯುಷ್ಯವನ್ನೆಲ್ಲಾ ವೆಚ್ಚಮಾಡಿದ್ದಾನೆ. ಇವನ ಕಾವ್ಯಗಳನ್ನು ಸೂಕ್ಷ್ಮವಾಗಿ ನೋಡಿದರೆ ಇವನಿಗೆ ಮಾನವಸ್ವಭಾವದ ಪರಿಚಯವೂ (Mass Paychology) ಜನತೆಯ ಮಾನಸಶಾಸ್ತ್ರದ ಪರಿಚಯವೂ ಸ್ವಾಭಾವಿಕವಾಗಿ ಇದ್ದಂತೆ ತೋರುತ್ತದೆ. ಶಿಕ್ಷಣ ಪದ್ಧತಿಯ ಮೇಲೆ ಈಗಿನ ಕಾಲದಲ್ಲಿ ವರ್ಷಂಪ್ರತಿ ಅನೇಕ ಗ್ರಂಥಗಳು ಹೊರಬೀಳುತ್ತವೆ. ಈ ವಿಷಯದಲ್ಲಿ ಅನೇಕ ಹೊಸ ಶೋಧಗಳು ಹೊರಬಿದ್ದಿವೆ. ಚಿಕ್ಕಂದಿನಲ್ಲಿ ಮಕ್ಕಳ ಮನಸ್ಸು ಬೇರೆ, ಯುವಕರ ಮನೋಬಲವು ಬೇರೆ, ಮುದಿಪ್ರಾಯದಲ್ಲಿ ಮನಸ್ಸಿನ ಸ್ಥಿತಿಯು ತೀರ ಬೇರೆ. ಹೀಗಾಗಿ ಮನಸ್ಸಿನಲ್ಲಿವೆ, ಗುಣಸ್ವಭಾವಗಳು ಬಳೆದಂತೆ ಆಯಾ ಪರಿಸ್ಥಿತಿಯವರಿಗೆ ಆಯಾ ವಿಷಯಗಳನ್ನು ಹೃದ್ಗತವಾಗುವಂತೆ ಹೇಳಿಕೊಡುವುದೇ ಶಿಕ್ಷಣ ಪದ್ಧತಿಯ ಮುಖ್ಯ ಕರ್ತವ್ಯವು. ಹೀಗಾಗಿ ಚಿಕ್ಕಮಕ್ಕಳ ಶಿಕ್ಷಣದ ಬಗ್ಗೆ ಹೊಸಹೊಸ ಪದ್ಧತಿಗಳು ಹೊಸಹೊಸ ಶೋಧಗಳಿಗನುಗುಣವಾಗಿ ಉದ್ಭವವಾಗಹತ್ತಿವೆ. ಈಗಿನ ಕಾಲದಲ್ಲಿ ಕೆಲವು ಪಾಶ್ಚಾತ್ಯ ಶಿಕ್ಷಣಶಾಸ್ತ್ರಜ್ಞರು ಮಕ್ಕಳಲ್ಲಿ ಜಾಗ್ರತವಾಗಿರುವ ಇಂದ್ರಿಯವನ್ನು ಗೊತ್ತುಹಚ್ಚಿ ಅದರ ಮೂಲಕವಾಗಿಯೇ ವಿಷಯಗಳನ್ನು ಒಳಸೇರಿಸುವುದಕ್ಕೆ ಪ್ರಯತ್ನಪಡುತ್ತಿದ್ದಾರೆ. ಈ ಮನಸ್ಸು ತಿಳಿಯುವುದಕ್ಕಾಗಿ ಕೆಲವು ಯಂತ್ರಗಳನ್ನೂ ಕಲ್ಪಿಸಿರುವುದಲ್ಲದೆ ಅನೇಕ

ಸಾಧನಗಳಿಂದ ಹುಡುಗರ ಮನಸ್ಸಿನ ಬಲವನ್ನೂ ತಿಳಿದು ವಿದ್ಯೆಯನ್ನು ಕೊಡುವರು. ಅವರು ಎರಡು ವರುಷದಿಂದ ನಾಲ್ಕೈದು ವರುಷಗಳವರೆಗ ಮಕ್ಕಳ ಮನಸ್ಸಿನ ಸ್ಥಿತಿಯನ್ನು ಪರಿಶೀಲಿಸಿ ಅದಕ್ಕನುಗುಣವಾಗಿ ವರ್ಗಗಳನ್ನು ಮಾಡುವರು. ಹೀಗಾಗಿ, ನೋಡಿ ನೆನಪಿಡುವ ಹುಡುಗರ ವರ್ಗವು ಬೇರೆ. ಕೇಳಿ ನೆನಪಿಡುವ ಹುಡುಗರ ವರ್ಗವು ಬೇರೆ. ಕಣ್ಣಿನ ತರಗತಿ, ಕಿವಿಯ ತರಗತಿ, ವಿಚಾರ ಶಕ್ತಿಯ ತರಗತಿ ಮುಂತಾದ ತರಗತಿಗನ್ನಾಗಿ ಮಕ್ಕಳನ್ನು ಒಳಗೆ ಸೇರಿಸುವರು. ಆದರೆ ಸರ್ವಜ್ಞನ ಕೈಯಲ್ಲಿರುವ ವಿದ್ಯಾರ್ಥಿಗಳೆಂದರೆ ಜನತೆಯೇ. ಇದೂ ಸಹ ಕೆಲವು ಹೊತ್ತಿನ ಮಟ್ಟಿಗೆ. ಇಂಥವರ ಮೇಲೆಯೂ ಸರ್ವಜ್ಞನು ತನ್ನ ಪರಿಣಾಮವನ್ನುಂಟುಮಾಡಿದುದನ್ನು ನೋಡಿದರೆ ಇವನು ಉತ್ತಮ ಶಿಕ್ಷಕನೆಂದೆನ್ನಬೇಕಾಗುತ್ತದೆ. ಕೇಳುವವರ ಲಕ್ಷ್ಯವನ್ನು ಸೆಳೆದುಕೊಳ್ಳುವುದು ಶಿಕ್ಷಕನು ಮಾಡತಕ್ಕ ಮೊದಲನೆಯ ಕರ್ತವ್ಯವಾಗಿದೆ. ಸರ್ವಜ್ಞನು ಈ ಕಾರ್ಯವನ್ನು ನಗೆ, ಹಾಸ್ಯ, ಇಲ್ಲವೆ ಆಶ್ಚರ್ಯ ಮುಂತಾದುವುಗಳಿಂದ ಸಾಧಿಸಿಕೊಳ್ಳುವನು. ಅವನ ಗ್ರಂಥದಲ್ಲಿ ಬೇಕಾದ ನಾಲ್ಕೆಂಟು ಪದ್ಯಗಳನ್ನು ಓದಿದರೂ ನಸುನಗೆ ಹುಟ್ಟದ ಮನುಷ್ಯನಿಲ್ಲ. ಈ ನಗೆಯಲ್ಲಿಯೂ ಖಂಡನೆಯು ತುಂಬಾ ಇದೆ. ಲಕ್ಷ್ಯವನ್ನು ಎಳೆದುಕೊಳ್ಳುವ ಕಾರ್ಯವನ್ನು ಸರ್ವಜ್ಞನು ಮೊದಲುಮಾಡಿ ತರುವಾಯ ಹೇಳತಕ್ಕ ವಿಷಯವನ್ನು ಕಡೆಯಲ್ಲಿ ಹೇಗೆ ಬಿಂಬಿಸುತ್ತಾನೆ ಎಂಬುದಕ್ಕೆ ಇನ್ನೊಂದು ಉತ್ತಮವಾದ ಉದಾಹರಣೆಗೆ—

**ಗಾಣಿಗನು ಈಶ್ವರನ ಕಾಣನೆಂಬುದು ಸಹಜ ।**
**ಏಣಾಂಕಧರನು-ಧರೆಗಿಳಿಯಲವನಿಂದ ।**
**ಗಾಣವಾಡಿಸುವ ಸರ್ವಜ್ಞ ॥**

ಭಕ್ತಿ ಹೀನನಿಗೆ ಇಲ್ಲವೆ ನಾಸ್ತಿಕನಿಗೆ ದೇವರು ಕಾಣಲಾರನೆಂದು ಹೇಳುವುದು ಕವಿಗಳಲ್ಲಿ ಹುಟ್ಟಬಹುದಾದ ಸಹಜ ಯೋಚನೆ. ಆದರೆ ಸರ್ವಜ್ಞನು ಹೀಗೆ ಹೇಳದೆ ಗಾಣಿಗನಿಗೆ ದೇವರು ಕಾಣುವದಿಲ್ಲವೆಂದೂ, ಇದು ಕೇವಲ ಸತ್ಯವಾದದ್ದೆಂದೂ ಒತ್ತಿ ಹೇಳಿರುವುದು ಬಹು ವಿಲಕ್ಷಣವಾಗಿ ತೋರುತ್ತದೆ.

ಈ ಸಮಯದಲ್ಲಿ "ಕಾಣಿಯ ಲೋಭ ಕೋಟಿಯ ಲಾಭ ಕೆಡಿಸಿತ್ತು." ಎಂದು ಬಸವಣ್ಣನವರು ಹೇಳಿರುವ ವಚನ ನೆನಪಿಗೆ ಬರುತ್ತದೆ. ಇವನು ಕುಂಬಾರ, ಕಮ್ಮಾರ, ಅಗಸ ಮುಂತಾದವರನ್ನು ಬಿಟ್ಟು ಗಾಣಿಗನಿಗೆ ದೇವರು ಕಾಣಲಿಕ್ಕಿಲ್ಲವೆಂದು ಹೇಳಿರುವದನ್ನು ನೋಡಿದರೆ ನೆರೆಯಲ್ಲಿದ್ದ ಗಾಣಿಗನು ಇವನಿಗೆ ಎಣ್ಣೆಯನ್ನು ಕೊಡದೆಹೋದುದೇ ಕಾರಣವಾಗಿ ಆ ಸಿಟ್ಟಿನಿಂದ ಹೀಗೆ ಹೇಳಿರಬಹುದೇನೋ ಎಂಬ ಸಂದೇಹ ಉಂಟಾಗುತ್ತದೆ. ಆದರೆ ಇದು ಹಾಗಲ್ಲ. ನಾವು ಮೇಲೆ ಹೇಳಿದಂತೆ ಈ ಮೊದಲನೆಯ ಗೆರೆಯಲ್ಲಿ ಜನತೆಯ ಶಿಕ್ಷಕನಾದ ಸರ್ವಜ್ಞನು ಅವರ ಲಕ್ಷ್ಯವನ್ನು ಸೆಳೆದುಕೊಳ್ಳುತ್ತಾನೆ. ಹೇಗೆಂದರೆ ಪೇಟೆಯ ಚೌಕದಲ್ಲಿ ಅಂದರೆ ವಿವಿಧ ಸಾಮಾನುಗಳನ್ನು ಕೊಂಡುಕೊಳ್ಳುವುದರಲ್ಲಿ ಮಗ್ನರಾದ ಜನರ ಮಧ್ಯದಲ್ಲಿ ನಿಂತು ಅವರ ಲಕ್ಷ್ಯವನ್ನು ಎಳೆಯುವುದಕ್ಕಾಗಿ **'ಗಾಣಿಗನು' ಈಶ್ವರನ ಕಾಣನೆಂಬುದು ಸಹಜ** ಎಂದು ಗಟ್ಟಿಯಾಗಿ ಹೇಳಿದಕೂಡಲೇ ಸರ್ವರೂ ಚಕಿತರಾಗಿ ವ್ಯಾಪಾರಮಾಡುವದನ್ನು ಬಿಟ್ಟು ಇದೇನು ವಿಲಕ್ಷಣವಾದ ಸಂಗತಿ ಎಂದು ಆ ಕಡೆಗೆ ಕಿವಿಗೊಡುವರು. ಮುಂದೆ ಏನು ಹೇಳುವನೋ ಎಂದು ಇವರು ಕುತೂಹಲವುಳ್ಳವರಾಗಿರುವಾಗ 'ಏಣಾಂಕಧರನು ಧರೆಗಿಳಿಯಲವನಿಂದ ಗಾಣವಾಡಿಸುವ' ಎಂದು ಹೇಳುತ್ತಾನೆ. ಅಂದರೆ ಚಂದ್ರನನ್ನು ತಲೆಯಲ್ಲಿ ಧರಿಸಿದ ಶಿವನು ನಂದಿವಾಹನನಾಗಿ ಆ ಬಡ ಗಾಣಿಗನನ್ನು ಉದ್ಧಾರಮಾಡುವ ಉದ್ದೇಶದಿಂದ ಭೂಮಿಗೆ ಇಳಿದುಬರಲು ಗಾಣಿಗನು ನಂದಿಯನ್ನು ನೋಡಿ ಇದೊಂದು ಬಲವಾದ ಎತ್ತು, ನನ್ನ ಎತ್ತುಗಳನ್ನೆಲ್ಲಾ ಗಾಣವಾಡಿ ಸೋತುಹೋದವು. ಮೇಲೆ ಕೂತಿರುವ ಮನುಷ್ಯನಾದರೂ ಗಟ್ಟಿಮುಟ್ಟಾಗಿದ್ದಾನೆ ಎಂದೆಂದುಕೊಂಡು ಇವನಿಂದ ತನ್ನ ಗಾಣವನ್ನು ಆಡಿಸಿಕೊಂಡಾನಲ್ಲದೆ ಬೇಡಿದ್ದನ್ನು ಕೊಡುವ ಶಿವನು ನನ್ನ ಮನೆಗೆ ಬಂದಿದ್ದಾನೆ. ಇಂದು ಅವನಿಂದ ಉದ್ಧಾರವಾಗಬೇಕು. ಎಂಬ ಯೋಚನೆಯೇ ಅವನೊಳಗೆ ಉದಿಸದು. ಅಂದರೆ ಆ ಗಾಣಿಗನು ನಂದಿ ಶಿವರನ್ನು ತನ್ನ ಗಾಣಕ್ಕಾಗಿ ಪ್ರಯೋಗಿಸಿಕೊಂಡನಲ್ಲದೆ ದೇವರೆಂದು ತಿಳಿಯಲಿಲ್ಲ. ಆದುದರಿಂದ ಗಾಣಿಗನು ಈಶ್ವರನ ಕಾಣನೆಂಬುದು ಸಹಜ ! ಎಂಬ ಮಾತನ್ನು ಈ ಪ್ರಕಾರವಾಗಿ ಸಿದ್ಧಾಂತ ಪಡಿ

ಸುತ್ತಾನೆ. ಇದು ಲೋಭಿಗಳಿಗೆ ಸರ್ವಜ್ಞನು ಮಾಡಿದ ಉಪದೇಶದಂತಿದೆ. ತತ್ವ ದೃಷ್ಟಿಯಿಂದ ನೋಡಿದರೆ ನಮ್ಮೆಲ್ಲರ ಸ್ಥಿತಿಯೂ ಈ ಗಾಣಿಗನಂತೆಯೇ ಇದೆ. ದೇವರು ನಮಗೆ ಲಾಭವನ್ನುಂಟುಮಾಡಿದರೆ ಇಲ್ಲವೆ ಮಕ್ಕಳನ್ನು ಕೊಟ್ಟರೆ ನಾವು ಆತನನ್ನು ಅರ್ಚಿಸುತ್ತೇವೆ. ಇದು ಪ್ರಯೋಜನ ದೃಷ್ಟಿದೇವರಿಗಾಗಿ ದೇವರನ್ನು ಕೊಂಡಾಡುವುದು. ನಿಷ್ಕಾಮ ಭಕ್ತಿ. ನಮ್ಮ ಲಾಭಕ್ಕಾಗಿ ದೇವರನ್ನು ಕೊಂಡಾಡುವುದು ಸಕಾಮಭಕ್ತಿ. ಇದನ್ನು ಮಾಡುವವನು ದೇವರು ತನ್ನ ಪ್ರಯೋಜನಕ್ಕೆ ಬಿದ್ದ ಪ್ರಮಾಣದಿಂದ ಗಾಣಿಗನಂತೆ ಅವನನ್ನು ಪ್ರಯೋಗಿಸಿಕೊಳ್ಳುವದರಿಂದ ಆತನ ನಿಜಸ್ವಭಾವವನ್ನು ಕಾಣದೇಹೋಗುವನು. ಹೀಗಾಗಿ ಪುಣ್ಯವು ಕ್ಷೀಣವಾಗುವವರೆಗೆ ಜನನ ಮರಣದ ಭವರಾಟಿಯಲ್ಲಿ ತಿರುಗಬೇಕಾಗಿ ಇವನ ಸ್ಥಿತಿಯು ಗಾಣಿಗನ ಎತ್ತಿನಂತೆ ಆಗುತ್ತದೆ. ನಿಷ್ಕಾಮಭಕ್ತಿಯನ್ನು ಮಾಡುವವನು ದೇವರ ನಿಜಪ್ರೇಮವನ್ನು ತಿಳಿಯುವದರಿಂದ ಅವನಿಗೆ ಮಾತ್ರವೇ ದೇವರು ಕಾಣುವನು. ಈ ಸಣ್ಣ ಪದ್ಯದಲ್ಲಿ ಉದಾತ್ತವಾದ ತತ್ವವನ್ನು ಇಷ್ಟು ಸ್ವಲ್ಪ ಶಬ್ದಗಳಲ್ಲಿ ಹೃದ್ಗತವಾಗುವಂತೆ ಹೇಳಿರುವುದನ್ನು ನೋಡಿದರೆ ಸರ್ವಜ್ಞನ ಜಾಣ್ಮೆಯು ಎಷ್ಟು ಚಮತ್ಕಾರವಾದದ್ದೆಂದು ವಿಶದವಾಗುತ್ತದೆಯಲ್ಲವೆ?

## ತತ್ವವಿಚಾರ

ನಮ್ಮ ದೇಶವು ತತ್ವವಿಚಾರಕ್ಕೆ ತವರು ಮನೆಯು. ಉಪನಿಷತ್ತುಗಳು ಷಡ್ದರ್ಶನಗಳು, ಬ್ರಹ್ಮಸೂತ್ರಗಳು, ನಾನಾಭಾಷ್ಯಗಳು ಈ ತರದ ವಿಚಾರದ ಫಲಿತಾಂಶಗಳು. ಇದರಲ್ಲಿ ಒಂದೊಂದು ಶಾಖೆಯವರು ಒಂದೊಂದು ತರದ ವಿಚಾರಸರಣಿಯನ್ನು ಸಮರ್ಥಿಸಿದ್ದಾರೆ. ಶ್ರೀ ಶಂಕರಾಚಾರ್ಯರು ಅದ್ವೈತಮತಸ್ಥಾಪನಾಚಾರ್ಯರು. ಮಧ್ವರು ದ್ವೈತಮತಪ್ರತಿಪಾದಕರು. ವೀರಶೈವರು ಶಕ್ತಿ ವಿಶಿಷ್ಟಾದ್ವೈತ ತತ್ವಾವಲಂಬಿಗಳು. ಹೀಗೆ ಶುದ್ಧಾದ್ವೈತ, ವಿಶಿಷ್ಟಾದ್ವೈತ, ಕೇವಲಾದ್ವೈತ ಮುಂತಾದ ಸಪ್ತಾದ್ವೈತ ಮತಗಳು ನಮ್ಮ ದೇಶದಲ್ಲಿ ರೂಢಿಯಾಗಿವೆ. ಇವುಗಳಲ್ಲಿ ಪ್ರತಿಯೊಂದು ತತ್ವವೂ ಇತರ ಮತ ತತ್ವಗಳನ್ನು ಖಂಡಿಸಿ ತನ್ನದೇ ಸತ್ಯವೆಂದು ಸಿದ್ಧಾಂತಗೊಳಿಸುವುದಕ್ಕೆ ಭಗೀ

ರಥ ಪ್ರಯತ್ನಪಟ್ಟಿವೆ. ಆದರೆ ಇವುಗಳಲ್ಲಿ ಪ್ರತಿಯೊಂದು ಮತವು ಅವರವರಿಗೆ ಯೋಗ್ಯವಾಗಿರುವುದಲ್ಲದೆ ಸರ್ವರಿಗೂ ಸಮ್ಮತವಾದ ಒಂದು ತತ್ವವೂ ಇದುವ ರೆಗೆ ನಿರ್ಣಯವಾಗಿರುವುದಿಲ್ಲ. ಅದ್ವೈತವಾದವು ಸಕಲಾಂಗಸುಂದರವಾ ಗಿದ್ದು ಅದರಲ್ಲಿ ಲವಲೇಶವೂ ಕೊರತೆ ಇಲ್ಲದೆ ಹೋಗಿದ್ದರೆ ಅದು ಸಕಲ ತತ್ವಗ ಳಲ್ಲಿ ಸತ್ಯವಾದದ್ದೆಂದು ಸರ್ವರೂ ಇಷ್ಟರೊಳಗಾಗಿ ಸ್ವೀಕರಿಸುತ್ತಿದ್ದರು. ವಸ್ತು ಸ್ಥಿತಿಯು ಹೀಗಿರುವುದಿಲ್ಲ. ಸಕಲ ಮಾರ್ಗಗಳೂ ವಿಚಾರ ಸಂಬಂಧವಾದ ಕಷ್ಟಪ್ರಶ್ನೆಗಳನ್ನು ಒಂದೊಂದು ದೃಷ್ಟಿಯಿಂದ ವಿವರಿಸುವುದಕ್ಕೆ ಪ್ರಯತ್ನ ಮಾಡಿರುವವಲ್ಲದೆ ನಿರ್ವಿವಾದವಾದ ಉತ್ತರವು ಯಾರಿಂದಲೂ ದೊರೆಯುವಂ ತಿಲ್ಲ. ವಾಙ್ಮನಾಗೋಚರನಾದ ಪರಬ್ರಹ್ಮವನ್ನು ಬುದ್ಧಿಯಿಂದ ವಿವರಿಸುವುದು ಅಸಾಧ್ಯ. ಅದು ಅನುಭವದಿಂದ ತಿಳಿಯತಕ್ಕ ಒಂದು ವಿಷಯವಾಗಿರುವುದ ಲ್ಲದೆ ತರ್ಕದಿಂದ ತಿಳಿಯಲಸಾಧ್ಯವಾದ ಸಂಗತಿಯಾಗಿದೆ. ಹೀಗಾಗಿ ಸರ್ವ ಜ್ಞನು:—

ಬೊಮ್ಮವನು ಅರಿದಿಹರೆ । ಸುಮ್ಮನಿದ್ದಿರಬೇಕು ।
ಬೊಮ್ಮವನು ಅರಿದು-ಉಸುರಿದರೆ ಕಳಹೋಗಿ ।
ಕೆಮ್ಮಿದಂತಕ್ಕು ಸರ್ವಜ್ಞ ॥

ಎಂದು ಹೇಳಿರುವನು. ತಾತ್ಪರ್ಯ—ಪರಬ್ರಹ್ಮವನ್ನು ತಿಳಿದವನು ಬುದ್ಧಿ ಯಿಂದ ಅದನ್ನು ತಿಳಿಸಲಾರನಾದುದರಿಂದ ಮೌನಿಯಾಗಿರುವನು. ಹೀಗಿ ದ್ದರೂ ಯಾವನೊಬ್ಬನು ಅಹಂಕಾರದಿಂದ ನಾನು ಸಿದ್ಧಾಂತಪಡಿಸುತ್ತೇನೆಂದು ಪಂಥಕ್ಕೆ ನಿಂತರೆ ಅವನು, ಕಳವುಮಾಡುವುದಕ್ಕೆ ಹೋಗಿದ್ದ ಒಬ್ಬ ಕಳ್ಳನು ಆಭರಣಗಳನ್ನು ಕಟ್ಟಿಕೊಂಡು ನಿಶ್ಶಬ್ದವಾಗಿ ಹೊರಗೆ ಬರುತ್ತಿದ್ದ ವೇಳೆಯಲ್ಲಿ ಕೆಮ್ಮು ಬಂದರೆ ನಿರುಪಾಯನಾಗಿ ಹೇಗೆ ಇನ್ನೊಬ್ಬರ ಕೈಯಲ್ಲಿ ಸಿಕ್ಕಿ ಸಾಯು ವನೋ ಹಾಗೆಯೇ ಇವನ ಗತಿಯಾಗುವುದು ಅಂದರೆ ಅನುಭವವಿಲ್ಲದ ಬಹು ಶ್ರುತತ್ವವು ಕಳವು ಮಾಡುವುದಕ್ಕೆ ಹೋದಂತೆ ಇರುತ್ತದೆಂತಲೂ, ಹೆಚ್ಚು ಗ್ರಂಥಗಳನ್ನು ಓದಿದವನು ಇಲ್ಲವೆ ಬುದ್ಧಿಯಲ್ಲಿ ಮಿಗಿಲಾದವನು ಇವನಿಗೆ ಗಂಟುಬಿದ್ದರೆ ಇವನು ಅವನ ಕೈಯಲ್ಲಿ ಸಿಕ್ಕಿ ಕೆಮ್ಮಿ ಅಂದರೆ ವಿಚಾರ ನ್ಯೂನತೆ

ಹೊರಬೀಳಲು ಇವನು ಅವನ ಕೈಯಲ್ಲಿ ಸಿಕ್ಕಿ ಸಾಯುವನು, ಪರಾಜಯ ಹೊಂದುವನು ಆದ್ದರಿಂದ ಸರ್ವಜ್ಞನು:–

ಸತ್ಯವನು ಅರಿದಿಹರೆ । ಸತ್ತಹಾಗಿರಬೇಕು ।
ಸತ್ಯವನು ಅರಿದು-ಉಸುರಿದರೆ ಸತ್ತವರಿ-
ಗತ್ತ ಹಾಗಕ್ಕು, ಸರ್ವಜ್ಞ ॥

ಎಂದು ಹೇಳಿದ್ದಾನೆ.

## ಸಾಮಾಜಿಕ ವಿಚಾರ

ಸಾಮಾಜಿಕ ದೃಷ್ಟಿಯಿಂದ ನೋಡಿದರೆ ಸರ್ವಜ್ಞನು ತೋರಿಸುವ ಚಿತ್ರಪಟಗಳು ಬಹು ವಿಚಿತ್ರವಾದವುಗಳಾಗಿವೆ. ಇವುಗಳಲ್ಲಿ ಮಕ್ಕಳಿಲ್ಲದ ಮನೆಯೊಂದನ್ನು ಎಷ್ಟು ವಿಚಿತ್ರವಾಗಿ ವರ್ಣಿಸಿರುವನೆಂದು ತೋರಿಸಿರುವುದಕ್ಕೆ ಕೆಳಗಿನ ಪದ್ಯಗಳನ್ನು ಉದ್ಧರಿಸಿರುತ್ತೇವೆ.

ಮಕ್ಕಳಿಲ್ಲದ ಮನೆಯು ಪಕ್ಕಿಯಿಲ್ಲದ ವನವು ।
ದಿಕ್ಕಿಲ್ಲದವನ-ಸಂಸಾರ ಕಳನು ಮನೆ ।
ಹೊಕ್ಕು ಹೋದಂತೆ ಸರ್ವಜ್ಞ ॥

ಅಂದವಿಲ್ಲದ ವಸ್ತು ಹಂದರಿಲ್ಲದ ಮದುವೆ ।
ಕಂದನಿಲ್ಲದಳ-ಮನೆವಾರ್ತೆ ಇವು ಮೂರು ।
ಕುಂದುಕಾಣಯ್ಯ ಸರ್ವಜ್ಞ ॥

ಮೊಸರು ಇಲ್ಲದ ಊಟ ಕೆಸರು ಇಲ್ಲದ ಗದ್ದೆ ।
ಬಸುರಾಗದವಳ-ಬಾಳುವೆಯು ಬೇಸಿಗೆಯ ।
ಬಿಸಿಲು ಕಾದಂತೆ ಸರ್ವಜ್ಞ ॥

ರೊಕ್ಕವಿಲ್ಲದ ಬಾಳ್ವೆ ಮಕ್ಕಳಿಲ್ಲದ ಮನೆಯು ॥
ಅಕ್ಕರಿಲ್ಲದ-ತವರೂರು ಇವು ಮೂರು ।
ದುಕ್ಕ ಕಾಣಯ್ಯ ಸರ್ವಜ್ಞ ॥

ಈ ಪದ್ಯಗಳನ್ನು ವಿಶೇಷ ಚಿಕಿತ್ಸಕ ಬುದ್ಧಿಯಿಲ್ಲದೆ ಸುಮ್ಮನೆ ಓದುವವರು, "ಸುಣ್ಣಾಕೊಡುವೆನು ಸುರಿಯೆಲೆ ಮಳೆಯೇ ಬಣ್ಣಾಕೊಡುವೆನು ಬಾ ಎಲೆ

ಮಳೆಯೇ!" ಎಂದು ಮಕ್ಕಳು ಹೇಳುವಹಾಗಿದೆ ಎಂದೆನ್ನಬಹುದು. ಈನಾಲ್ಕು ಪದ್ಯಗಳು ಮಕ್ಕಳಿಲ್ಲದ ಮನೆಯನ್ನು ಕುರಿತು ಹೇಳುತ್ತಿರುವುವಲ್ಲದೆ ಇದರಲ್ಲಿ ವಿಶೇಷವೇನಿದೆ? ಎಂದು ಕೇಳಲೂಬಹುದು. ಆದರೆ ಸರ್ವಜ್ಞನು ಇಲ್ಲಿ ನಾಲ್ಕು ಮನೆಗಳ ಚಿತ್ರಗಳನ್ನು ಬಹು ಅಂದವಾಗಿ ಬಿಡಿಸಿದ್ದಾನೆ. ಈ ನಾಲ್ಕು ಪದ್ಯಗಳು ಮಕ್ಕಳಿಲ್ಲದ ಮನೆಯನ್ನು ಕುರಿತು ಹೇಳುತ್ತಿದ್ದರೂ ಇವುಗಳಲ್ಲಿರುವ ಭೇದವು ಬಹು ಚಿತ್ತಾಕರ್ಷಕವಾಗಿದೆ.

ಸರ್ವಜ್ಞನು ಪ್ರಾಸಗಳಲ್ಲಿ ತನಗಿರುವ ಜಾಣ್ಮೆಯನ್ನು ಇತರರಿಗೆ ತೋರಿಸುವುದಕ್ಕೆ ಹೊರಟ ಕವಿಯಲ್ಲ. ಚರ್ವಿತಚರ್ವಣವೆಂದು ತೋರ್ಬುವ ಅನೇಕ ಪದ್ಯಗಳು ಅನುಭವದಿಂದ ತುಂಬಿ ತುಳುಕುತ್ತಿರುವುವು. ಆ ಅನುಭವ ಹನಿಗಳು ಒಂದುಗೂಡಿ ರಸವತ್ತಾಗಿ ಹರಿದದ್ದೇ ಸರ್ವಜ್ಞನ ವಚನಪ್ರವಾಹ. ಈ ಅನುಭವದ ಚಿತ್ರಗಳು ಯಾವುವೆಂದರೆ:

ಸರ್ವಜ್ಞನು ಒಂದು ಮನೆಗೆ ಹೋದನು. ಆ ಮನೆಯಲ್ಲಿ ತುಂಬಾ ಐಶ್ವರ್ಯವಿದೆ; ಆದರೂ ಅದರಲ್ಲಿರುವ ಬಂಜೆಯೊಬ್ಬಳು ದುಃಖಾಗ್ನಿಯಲ್ಲಿ ಮುಳುಗಿರುವದನ್ನು ಕಂಡು ಇಂದು ಹುಟ್ಟಿ ನಾಳೆಯೇ ಸತ್ತುಹೋದರೂ ಚಿಂತೆಯಿಲ್ಲ; ತನಗೊಬ್ಬ ಮಗನು ಬೇಕು' ಎಂದು ಪ್ರಲಾಪಿಸುತ್ತಿದ್ದಳು. ಅದೇ ದಿನ ಬೇರೊಂದು ಕಡೆಯಲ್ಲಿ ಒಂದು ಭತ್ತದ ಗದ್ದೆಯನ್ನು ಕಂಡನು; ತೆನೆ ಬಿಡುವ ಸಮಯ; ಆದರೆ ಅದು ನೀರಿಲ್ಲದೆ ಗಳಗಳನೆ ಒಣಗುತ್ತಿತ್ತು. ಹಾಗೆಯೇ ಮಜ್ಜಿಗೆಯಿಲ್ಲದ ಊಟದಿಂದಲೂ ಅವನಿಗೆ ಆದಿನ ಸಂಕಟವಾಯಿತು. ಅದು ಬೇಸಿಗೆಯ ಬಿಸಿಲಿನಂತೆ ಅವನಿಗೆ ತಾಪವನ್ನುಂಟುಮಾಡಿತು. ಹೀಗೆ ಶಾರೀರಕ, ಮಾನಸಿಕ, ತಾಪಗಳು ಒಟ್ಟುಗೂಡಿ ಬಂದಾಗ ಈ ಪದ್ಯವು ರಚಿಸಲ್ಪಟ್ಟಿತು. ಇದು ಮೊದಲನೆಯ ಮನೆಯ ಚಿತ್ರ. ಸರ್ವಜ್ಞನು ಇನ್ನೊಂದು ಮನೆಗೆ ಹೋದ. ಆ ಮನೆಯಲ್ಲಿ ತುಂಬಾ ಮಕ್ಕಳು; ಆದರೂ ತಾಯಿಗೆ ದುಃಖವು ತಪ್ಪಿದ್ದಿಲ್ಲ. ಯಾಕೆಂದರೆ ಹುಟ್ಟಿದ ಮಕ್ಕಳೆಲ್ಲ ಹೆಣ್ಣು; ದೇವರು ತನಗೊಂದು ಗಂಡು ಮಗುವನ್ನು ಕೊಡಬೇಕೆಂದು ಬೇಡುತ್ತಿದ್ದಳು. ಹಾಗೆಯೇ ಬಹು ಅಂದವಾದ ಹಾಗೂ ಬೆಲೆಯುಳ್ಳ ಒಂದು ವಸ್ತ್ರ: ಆದರೆ ಅದನ್ನು ಹೊಲಿದ ಚಿಪ್ಪಿಗನು ಅದರ ಅಂಚವನ್ನು ಕೆಡಿಸಿಬಿಟ್ಟಿದ್ದನು. ಆದುದರಿಂದ ಅದನ್ನು

ಪ್ರೀತಿಯಿಂದ ಹೊಲಿಸಿದವನಿಗೆ ದುಃಖವುಂಟಾಗಿತ್ತು. ಅದರಂತೆಯೇ ಮದುವೆಯಕಾಲದಲ್ಲಿ ಶೋಭೆಯನ್ನು ಉಂಟುಮಾಡುವ ಹಂದರವು ಇಲ್ಲದಿರುವವನ ಮನೆಯನ್ನು ಕಂಡನು. ಈ ಮೂರು ತೆರದ ಅನುಭವಗಳು ಕೂಡಿಬಂದಾಗ ಈ ಎರಡನೆಯ ಪದ್ಯವು ರಚಿತವಾಯಿತು. ಮೂರನೆಯ ಮನೆ; ಇದರಲ್ಲಿ ಗಂಡುಮಕ್ಕಳು ಹೆಣ್ಣುಮಕ್ಕಳು ತುಂಬಾ ಇದ್ದಾರೆ. ಆದರೂ ದಂಪತಿಗಳಿಬ್ಬರಿಗೆ ಘೋರವಾದ ದುಃಖವು ತಪ್ಪಲಿಲ್ಲ; ಯಾಕೆಂದರೆ ಎಲ್ಲಾಮಕ್ಕಳು ಉತ್ತಮ ಸ್ಥಿತಿಯಲ್ಲಿದ್ದು ಅವರು ಸಂತೋಷದಿಂದಿರುವಾಗ ಫಕ್ಕನೇ ರೋಗದಿಂದ ಎಲ್ಲರೂ ತೀರಿಕೊಂಡರು. ಮನೆಯು ಮೊದಲಿದ್ದಂತೆ ಆಯಿತು ಬಹಳ ಕಷ್ಟಪಟ್ಟು ಸಂಪಾದಿಸಿದ ದ್ರವ್ಯವನ್ನು ಕಳ್ಳನು ಒಂದೇ ರಾತ್ರಿಯಲ್ಲಿ ದೋಚಿಕೊಂಡು ಹೋದರೆ ಮನೆಯವರು ಹೇಗೆ ಎದೆ ಎದೆ ಬಡಿದುಕೊಳ್ಳುತ್ತಾರೋ ಅದರಂತೆಯೇ ಈ ಮಕ್ಕಳಿಲ್ಲದ ಮನೆಯವರು ನಿರ್ಗತಿಕರಾಗಿ ಎದೆ ಬಡಿದುಕೊಳ್ಳುತ್ತಿದ್ದರು. ಈ ಮನೆತನಗಳಲ್ಲಿರುವ ತಾಪವು ಇವನ ಅನುಭವ ಸರಣಿಯಲ್ಲಿ ಬಂದಾಗ ಮೂರನೆಯ ತರಹದ ಮನೆಯ ಚಿತ್ರವು ಬರೆಯಲ್ಪಟ್ಟಿತು. ಸರ್ವಜ್ಞನು ನಾಲ್ಕನೆಯ ಮನೆಗೆ ಹೋದ. ಅದರಲ್ಲಿ ಗಂಡುಮಕ್ಕಳೂ ಹೆಣ್ಣುಮಕ್ಕಳೂ ಕಡೆಯವರೆಗೂ ಜೀವಂತರಾಗಿ ಉಳಿದಿದ್ದಾರೆ. ಆದರೆ ಆ ಮನೆಯಲ್ಲಿ ಪ್ರೀತಿಯು ಇದ್ದಿಲ್ಲ. ಮುದುಕರಾದ ತಂದೆ ತಾಯಿಗಳನ್ನು ವೈರಿಗಳಂತೆ ಕಾಣುತ್ತಿದ್ದರು. ಈ ದುಃಖವೂ ರೊಕ್ಕವಿಲ್ಲದೆ ಬಳಲುತ್ತಿರುವ ಬಡವನ ಮನೆಯಲ್ಲಿ ಕಂಡುಬಂದ ತಾಪವೂ ಒಂದೇ ಸರಣಿಯಲ್ಲಿ ಬಂದಾಗ ಈ ನಾಲ್ಕನೆಯ ಚಿತ್ರವು ಕಲ್ಪಿಸಲ್ಪಟ್ಟಿತು. ಹೀಗೆ ಈ ಪದ್ಯಗಳು ಮೇಲೆ ಮೇಲೆ ನೋಡಿದರೆ ಒಂದೇ ವಿಷಯವನ್ನು ಕುರಿತು ಹೇಳುತ್ತಿದ್ದರೂ ಅದರಲ್ಲಿಯೂ ಸೂಕ್ಷ್ಮವಾದ ಭೇದಗಳು ಸಹಜವಾಗಿ ಒಡೆದು ಕಾಣುತ್ತಿವೆ.

## ರಾಷ್ಟ್ರ ವಿಚಾರ

ಈಗಿನ ಕಾಲದಲ್ಲಿರುವ ರಾಷ್ಟ್ರಗಳು, ಒಂದೊಂದು ಕಾರಣದಿಂದ ಪ್ರಸಿದ್ಧಿಗೆ ಬಂದಿವೆ. ಪ್ರತಿಯೊಂದರಲ್ಲಿಯೂ ಒಂದು ವೈಶಿಷ್ಟ್ಯವನ್ನು ಕಾಣಬಹುದು. ಇದಕ್ಕೆ ಆಯಾದೇಶಗಳಿಗೆ ಒದಗಿದ ಪರಿಸ್ಥಿತಿಯೇ ಕಾರಣವಾಗಿರುತ್ತದೆ.

ಜರ್ಮನಿದೇಶವು ಬಲಿಷ್ಠ ರಾಷ್ಟ್ರಗಳಲ್ಲಿ ಒಂದು ಎಂದುಎಣಿಸಲ್ಪಡಹತ್ತಿದಂದಿನಿಂದ ಸಾಮ್ರಾಜ್ಯಾಧಿಪತ್ಯದ ಮಹತ್ವಾಕಾಂಕ್ಷೆಗೊಳಗಾಯಿತು. ಅದು ಸಾಮ್ರಾಜ್ಯವನ್ನು ವಿಸ್ತರಿಸುವುದರಲ್ಲಿ ಸಮೀಪದ ರಾಷ್ಟ್ರಗಳಮೇಲೆ ಅಭಿಯೋಗ ಮಾಡಿದ್ದಲ್ಲದೆ ಸಮುದ್ರದ ಮೇಲಿನ ಹಕ್ಕನ್ನೂ ಸಂಪಾದಿಸುವುದಕ್ಕಾಗಿ ಹೆಣಗಿತು. ಈ ಕಾರಣದಿಂದ ಅದು ತನ್ನ ರಾಷ್ಟ್ರಕ್ಕೆ (Military Education) ಯುದ್ಧ ಶಿಕ್ಷಣವನ್ನು ಕಡ್ಡಾಯವಾಗಿ ಕೊಡಹತ್ತಿತು. ಎರಡು ಪ್ರಪಂಚಯುದ್ಧಗಳಿವೆ ಕಾರಣವಾಗಿ ಪರಾಜಯವಾಯಿತು ಅಮೇರಿಕವನ್ನು ನೋಡಿದರೆ ಅದು ತನ್ನ ಪರಿಸ್ಥಿತಿಗನುಸಾರವಾಗಿ ಔದ್ಯೋಗಿಕ ಶಿಕ್ಷಣವನ್ನು ಅವಲಂಬಿಸಿತು. ಇಡೀ ಪ್ರಪಂಚದ ಮೇಲೆ ತನ್ನ ಆರ್ಥಿಕ ಪ್ರಭುತ್ವವನ್ನು ಸ್ಥಾಪಿಸಿತು. ಇಂಗ್ಲೆಂಡ್ ದೇಶವು ವ್ಯಾಪಾರದಲ್ಲಿ ಗಳ್ಳಾಳಿಯ ಮೇಲೆ (Commission) ಬದುಕವ ದೇಶವಾಗಿದೆ. ಹೀಗೆ ಒಂದೊಂದು ದೇಶವು ತನ್ನ ಆಸ್ಥಿತ್ವವನ್ನು ಕಾಪಾಡಿ ಕೊಳ್ಳುವುದಕ್ಕೆ ತನ್ನ ತನ್ನ ಪರಿಸ್ಥಿತಿಗನುಗುಣವಾಗಿ ಆಯಾ ತೆರದ ಶಿಕ್ಷಣವನ್ನು ಕೊಡುತ್ತಿರುವುದು. ನಮ್ಮ ದೇಶದ ಆಧುನಿಕ ಪರಿಸ್ಥಿತಿಯನ್ನು ನೋಡಿದರೆ ಇದು ಪರತಂತ್ರಗಲ್ಲಿರುವವರೆಗೆ ಮೇಲೆ ಹೇಳಿದ ಯಾವ ಶಿಕ್ಷಣಗಳನ್ನೂ ಕೊಡುವುದಕ್ಕೆ ಸಾಮ್ಯವಿರುವುದಿಲ್ಲ. ಈಗಿನಃ ಕಾಲದ ವಿದ್ಯಾರ್ಥಿಗಳು ಬಹಳ ಮಾನಸಿಕಶ್ರಮ ಮಾಡುವುದರಿಂದ ಅವರ ಶಾರೀರಕ ಬಲವು ಕುಂದುತ್ತ ನಡೆದಿದೆ. ಹೀಗಾಗಿ ಈ ದೈನ್ಯಸ್ಥಿತಿಯಲ್ಲಿ ಕೃಷಿಕರ್ಮ ಶಿಕ್ಷಣ। ಮಾತ್ರವೇ ನಮ್ಮ ರಾಷ್ಟ್ರವನ್ನು ಉನ್ನತಸ್ಥಿತಿಗೆ ತರಬಹುದಾಗಿದೆ. ಈ ವಿಷಯವನ್ನು ಸರ್ವಜ್ಞನು ಹೀಗಂದು ಹೇಳಿದ್ದಾನೆ.

ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೆ ಮೇಲು।
ಮೇಟಿಯಿಂ ರಾಟಿ-ನಡೆದುದಲ್ಲದೆ ದೇಶ।
ದಾಟವೇ ಕೆಡಗು ಸರ್ವಜ್ಞ ।

ಇದಲ್ಲದೆ

ಭಂಡಾರತುಂಬಿ ನೀ ಭಂಡಿಯಲಿ ಹೇರುವರೆ।
ಮಂಡಲನಾಳಿ-ಮೆರೆಯುವರೆ ಒಕ್ಕಲನು।
ಕೊಂಡಾದಬೇಕು ಸರ್ವಜ್ಞ ॥

ಎಂದು ಹೇಳಿದ್ದಾನೆ.

# ಸಂಸ್ಕೃತ-ಕನ್ನಡ ವಿಚಾರ

ಬ್ರಹ್ಮಸೂತ್ರ, ಗೀತೆ ಹಾಗೂ ಉಪನಿಷತ್ತುಗಳಲ್ಲಿ ಗುಣಲಕ್ಷಣಗಳನ್ನು ಹೇಳುವುದಕ್ಕೆ ಪರಮಾತ್ಮನನ್ನು "ದಿಕ್ಕಾಲಾದ್ಯಾನವಚ್ಛಿನ್ನಾನಂದಾದ್ವೈತ ನಿತ್ಯಮುಕ್ತವಿಭು"ಎಂದು ಹೊಗಳಿರುವುದು. ಆರ್ಯರ ಇಂಥ ಗಹನ ವಿಚಾರವನ್ನು ಸಂಸ್ಕೃತ ಶಬ್ದಗಳಿಲ್ಲದೆ ಯಾವುದೊಂದು ಅನಾರ್ಯ ಭಾಷೆ ಯಲ್ಲಿ ಹೇಳುವುದು ದುಸ್ಸಾಧ್ಯವೆಂಗು ಪಂಡಿತರೆಲ್ಲರೂ ಏಕಮುಖವಾಗಿ ಒಪ್ಪಿ ಕೊಳ್ಳುವರು. ಬಹಳ ಪ್ರಯತ್ನಿಸಿದರೆ ಕೆಲವರು ಕಾಲಾತೀತ, ಅನಾಧ್ಯ ನಂತ, ಅಯೋನಿಜ ಇತ್ಯಾದಿ ಹೇಳಬಹುದಲ್ಲದೆ ಇದಕ್ಕಿಂತ ಸುಲಭವಾಗಿ ಯಾರಿಂದಲೂ ಹೇಳಲಾಗದೆಂದೂ, ಶುದ್ಧ ಕನ್ನಡದಲ್ಲಿ ಇದನ್ನು ಹೇಳಿದವರಿಗೆ ಇಂತಿಷ್ಟು ಸಂಭಾವನೆ ಕೊಡುವೆವೆಂದೂ ಬೇಕಾದರೆ ಪಂಥಕ್ಕೆ ನಿಲ್ಲುವರು. ಇಂಥ ಉನ್ನತ ವಿಚಾರವನ್ನು ಸನ್ನುತ ಸರ್ವಜ್ಞನು ಮನ್ನಣೆಯ ಕನ್ನಡ ದಲ್ಲಿ ಚೆನ್ನಾಗಿ ಹೇಳಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

> **ಆಗಿಲ್ಲ ಹೋಗಿಲ್ಲ ಮೇಗಿಲ್ಲ ಕೆಳಗಿಲ್ಲ ।**
> **ತಾಗಿಲ್ಲ ತಪ್ಪು-ತಡೆಯಿಲ್ಲ ಲಿಂಗಕ್ಕೆ ।**
> **ದೇಗುಲವೆ ಇಲ್ಲ ಸರ್ವಜ್ಞ ॥**

# ವೈದ್ಯ ವಿಚಾರ

ಸರ್ವಜ್ಞನು ಭಕ್ತಿ, ಜ್ಞಾನ, ವೈರಾಗ್ಯ, ನೀತಿ ಮುಂತಾದ ವಿಷಯ ಗಳನ್ನು ಕುರಿತು ಹೇಳುವುದಲ್ಲದೆ ವೈದ್ಯ ವಿಚಾರದಲ್ಲಿಯೂ ಅವನು ತನ್ನ ವಚನ ಗಳನ್ನು ಹೇಳದೆ ಬಿಟ್ಟಿಲ್ಲ. ಈಗಿನ ಕಾಲದಲ್ಲಿ ಔಷಧ ಚಿಕಿತ್ಸೆಯ ಬಗ್ಗೆ ಲಭ್ಯವಾಗಿರುವ ಸಾಧನಗಳನ್ನು ಎರಡು ವಿಧಗಳಾಗಿ ವಿಭಾಗಿಸಬಹುದು. ಮೊದಲನೆಯ ಪಕ್ಷದವರು ಅಲ್ಪಸ್ವಲ್ಪ ಬೇನೆಗಳಿಗೆ ವಿಪರೀತ ಔಷಧಗಳನ್ನು ಕೊಡುವವರು, ಇವರು ಬೇಗನೇ ಗುಣವಾಗಬೇಕೆಂದು ಇಂಜಕ್ಷನ್ನುಗಳನ್ನು ಕೊಡುವರು. ಶಾರೀರಕ ಬಲವು ರೋಗಕ್ಕೆ ವಿರೋಧವಾಗಿ ನಿಲ್ಲಲು ಶಕ್ತಿ ಯಿಲ್ಲದುದರಿಂದ ಔಷಧದಿಂದ ವಿಷ ಉಂಟಾಗಿ ಹಿತಕ್ಕಿಂತ ಹಾನಿಯಾಗುವ

ಸಂಭವವೇ ಹೆಚ್ಚು. ಆದುದರಿಂದ ಮತ್ತೊಂದು ಪಕ್ಷದವರು ಶರೀರದಲ್ಲಿರುವ ವಿಷವನ್ನು ದೂರೀಕರಿಸುವುದಕ್ಕೆ ಔಷಧದ ಬದಲಾಗಿ ಲಂಘನ ಪದ್ಧತಿಯನ್ನು ಅವಲಂಬಿಸುವರು. ಈ ಪದ್ಧತಿಯನ್ನನುಸರಿಸಿ ಅನೇಕ ದಿವಸ ಉಪವಾಸ ಮಾಡಲು ಕೆಲವಾವರ್ತಿ ರೋಗಿಗಳ ಮರಣವನ್ನು ಅನುಭವಿಸಬೇಕಾಗುವದು. ಚೀಣಾದೇಶದಲ್ಲಿ ಕೆಲವು ಸಾಹುಕಾರರು ಮನೆ ಗೊಬ್ಬ ವೈದ್ಯನನ್ನು ಇಟ್ಟುಕೊಂಡಿರುತ್ತಾರೆ. ಮನೆಯಲ್ಲಿ ಯಾರಿಗೆ ಎಷ್ಟು ದಿವಸ ಅಸ್ವಸ್ಥವಾಗುವುದೋ ಅಷ್ಟು ದಿವಸಗಳ ಸಂಬಳವನ್ನು ಅವನ ವೇತನದಿಂದ ಕಡಿಯುತ್ತಾರೆ. ಹೀಗಾಗಿ ಅಲ್ಲಿನ ವೈದ್ಯರು ಔಷಧ ಚಿಕಿತ್ಸೆಗಿಂತಲೂ ರೋಗಬಾರದ ಹಾಗೆ ಮಾಡುವ ಪ್ರಯತ್ನಗಳಲ್ಲಿಯೇ ಹೆಚ್ಚು ಮಗ್ನರಾಗಿರುತ್ತಾರೆ. ಈ ಎರಡೂ ಕಡು ಪಕ್ಷದವರ ಮಧ್ಯದಲ್ಲಿ ಸರ್ವಜ್ಞನು ನಿಂತುಕೊಂಡು ಹೀಗೆ ನುಡಿದಿರುತ್ತಾನೆ

ಹಸಿಯದಿರೆ ಉಣಬೇಡ ಹಸಿದು ಮತ್ತಿರಬೇಡ ।
ಬಿಸಿಗೂಡಿ ತಂಗಳುಣಬೇಡ ವೈದ್ಯರ ।
ಬೆಸಸಲೇ ಬೇಡ ಸರ್ವಜ್ಞ ॥

ಹಸಿಯದಿರೆ ಕಡುಗಾಯ್ದ ಬಿಸಿನೀರ ಕುಡಿಯುವುದು ।
ಹಸಿವಕ್ಕು ಸಿಕ್ಕ—ಮಲವಕ್ಕು ದೇಹವದು ।
ಸಸಿನವಾಗಿಹುದು ಸರ್ವಜ್ಞ ॥

## ಆಹಾರಗಳ ಪರಿಣಾಮ

ನಮ್ಮ ದೇಶದಲ್ಲಿ ದೊರೆಯುವ ನವಸಧಾನ್ಯ, ಕಾಯಿಪಲ್ಯ, ಹಣ್ಣುಹಂಪಲುಗಳನ್ನು ಪೃಥಕ್ಕರಿಸಿ ಅವುಗಳಲ್ಲಿ ಶರೀರಕ್ಕೆ ಆರೋಗ್ಯವಾಗಿರುವ ಪೌಷ್ಟಿಕ ಪದಾರ್ಥಗಳು ಇಂತಿಷ್ಟೇಯೆಂದು ತೋರಿಸುವ ಒಂದು ಪಟ್ಟಿಯು ಇರುವುದಿಲ್ಲ. ಈ ತೆರದ ಪಟ್ಟಿಗಳನ್ನು ಐರೋಪ್ಯರ ವೈದ್ಯಗ್ರಂಥಗಳಲ್ಲಿ ಕಾಣಬಹುದು. ಸರ್ವಜ್ಞನು ಪ್ರಾಕೃತಿಕ ವಿಜ್ಞಾನಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಶರೀರಶಾಸ್ತ್ರ ಮುಂತಾದ ವಿದ್ಯೆಗಳನ್ನು ಅರಿಯದವನಾಗಿದ್ದರೂ

ತಯಾ ಆಹಾರಗಳಿಂದುಂಟಾಗುವ ಪರಿಣಾಮಗಳಿಂದ ನವಸ ಧಾನ್ಯಗಳ ಗುಣ ದೋಷಗಳನ್ನು ಕುರಿತು ಹೇಳಿರುವುದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಅವು ಹೀಗಿವೆ:—

ಅಕ್ಕಿಯನು ಉಂಬುವನು ಹಕ್ಕಿಯಂತಾಗುವನು ।
ಸಿಕ್ಕು ರೋಗದಲಿ—ಸೊಕ್ಕಿದ ವೈದ್ಯನಿ-।
ಗಿಕ್ಕುತ್ತಲಿರುವ ಸರ್ವಜ್ಞ ॥

ಜೋಳವನು ತಿಂಬುವನು ತೋಳದಂತಾಗುವನು ।
ಬೇಳೆ ಬೆಲ್ಲಗಳ—ನುಂಬುವನು ಬಹುಕಾಲ ।
ಬಾಳ ನೆಂದರಿಗು ಸರ್ವಜ್ಞ ॥

ನವಣೆಯನು ತಿಂಬುವನು ನವಿರಾಗಿ ಇರುತಿಹನು ।
ಬವಣೆಗಳಿಗವನು ಒಳ ಬೀಳನೀ ಮಾತು ।
ತವಣೆಯಲ್ಲೆಂದ ಸರ್ವಜ್ಞ ॥

ಈಗಿನ ಕಾಲದಲ್ಲಿ ಮಧುಮೂತ್ರ (Diabets) ಇರುವವರಿಗೆ ವೈದ್ಯರು ನವಣೆಯ ಆಹಾರವನ್ನು ರಾಗಿಯ ಮುದ್ದೆಯನ್ನೂ ವಿಧಿಸುತ್ತಾರೆ.

ರಾಗಿಯನು ತಿಂಬುವನು ನಿರೋಗಿಯೆಂದೆನಿಸುವನು ।
ರಾಗಿಯು ಭೋಗಿ—ಗಳಿಗಲ್ಲ ಬಡವರಿ ।
ಗಾಗಿ ಬೆಳೆದಿಹುದು ಸರ್ವಜ್ಞ ॥

ಕನಕದಾಸನು ರಾಗಿ ಮತ್ತು ವ್ರೀಹಿ (ಭತ್ತ) ಇವುಗಳ ವಿಷಯವಾಗಿ ಒಂದು ಕಾವ್ಯವನ್ನು (ರಾಮಧಾನ್ಯ ಚರಿತ್ರೆ) ಬರೆದಿದ್ದಾನೆ. ಅದರಲ್ಲಿ ಅಕ್ಕಿಗೂ, ರಾಗಿಗೂ ಉಂಟಾದ ಸಂವಾದವಿದೆ. ಇವರಿಬ್ಬರು ತಮ್ಮ ತಮ್ಮ ಅಗ್ಗಳಿಗೆಯನ್ನು ಹೇಳಿಕೊಂಡಬಳಿಕ ಸಕಲ ಧಾನ್ಯಗಳಲ್ಲಿ ರಾಗಿಯೇ ಶ್ರೇಷ್ಠವಾದದ್ದೆಂದು ಶ್ರೀರಾಮನು ತೀರ್ಮಾನ ಮಾಡಿದನೆಂತಲೂ, ಅದಕ್ಕೆ ಮೆಚ್ಚಿ 'ರಾಘವ' ಎಂಬ ತನ್ನ ಹೆಸರನ್ನು ಕೊಟ್ಟಿದ್ದರಿಂದ ಅದು ಜನರ ಬಾಯಿಯಲ್ಲಿ 'ರಾಗಿ' ಎಂದು ಹೆಸರಾಯಿತೆಂತಲೂ ಬರೆದಿರುತ್ತಾನೆ.

ಸರ್ವಜ್ಞನು ಸಾವಿರಾರು ವಿಷಯಗಳನ್ನು ಕುರಿತು ಬಹು ಸ್ವತಂತ್ರ ವಿಮರ್ಶೆಯನ್ನು ಮಾಡಿದ್ದಾನೆ. ವಿಸ್ತಾರಭಯಕ್ಕೋಸ್ಕರ ಅವೆಲ್ಲವುಗಳನ್ನೂ ಬಿಟ್ಟು ಕರ್ಣಾಟಕದ ವರ್ಣನೆಯ ಸಂಬಂಧವಾದ ನಾಲ್ಕೈದು ಪದ್ಯಗಳನ್ನು ಉದ್ಧರಿಸುತ್ತೇವೆ.

## ಕರ್ಣಾಟಕವನ್ನು ಕುರಿತು

ಗೋದಾವರೀ ತೀರದಿಂದ ಕೃಷ್ಣಾತೀರದವರೆಗೆ ಇರುವ ಕನ್ನಡ ದೇಶವನ್ನು ಅನೇಕ ಕವಿಗಳು ಬಹು ಚೆನ್ನಾಗಿ ವರ್ಣಿಸಿದ್ದಾರೆ. ಅದರಲ್ಲಿ ಕರ್ಣಾಟಕದಲ್ಲಿರುವ ಸೃಷ್ಟಿ ಸೌಂದರ್ಯ, ಹಕ್ಕಿ ಪಕ್ಕಿ, ಹಳ್ಳ ಕೊಳ್ಳ, ಹೊಳೆ, ಸರೋವರ, ಗಿಡ, ಬಳ್ಳಿ ಮುಂತಾದವುಗಳ ವರ್ಣನೆಗಳು ಬಹು ಲಲಿತವಾಗಿವೆ. ಆದರೆ ಸರ್ವಜ್ಞನು ಇವೆಲ್ಲವುಗಳನ್ನೂ ಬಿಟ್ಟು ಒಂದು ವಿಶಿಷ್ಟ ದೃಷ್ಟಿಯಿಂದ ಮಾಡಿರುವ ವರ್ಣನೆಯನ್ನು ನೋಡಿದರೆ ಸಖೇದಾಶ್ಚರ್ಯವೆನಿಸುತ್ತದೆ.

ಬಟ್ಟೆ ಬಟ್ಟೆಯೊಳಿಲ್ಲ ಹೊಟ್ಟೆ ಜಾಲಿಯ ಮುಳ್ಳು ।  
ಹುಟ್ಟಿದವರೆಲ್ಲ— ಗಿಜವಾಯಿ ಮೂಡಲಾ ।  
ಬಟ್ಟೆ ಬೇಡೆಂದ ಸರ್ವಜ್ಞ ॥

ಊರು ಸನಿಹದಲಿಲ್ಲ ನೀರೊಂದು ಗಾವುದವು ।  
ಸೇರಿ ನಿಲ್ಲುವರೆ— ನೆರಳಿಲ್ಲ ಬಡಗಲಾ ।  
ದಾರಿ ಬೇಡೆಂದ ಸರ್ವಜ್ಞ ॥

ಸರ್ವಜ್ಞನು ಕರ್ಣಾಟಕದ ಉನ್ನತಿಗಾಗಿ ಉಪದೇಶವನ್ನು ಮಾಡುತ್ತಾ ಸಂಚರಿಸುತ್ತಿದ್ದುದರಿಂದ ಯಾತ್ರಿಕರಿಗೆ ಕಷ್ಟವನ್ನುಂಟುಮಾಡುವ ಸಂಗತಿಗಳು ಅವನ ಕಣ್ಣೆದುರಿಗೆ ಬರಲು ಹೀಗೆ ಹೇಳದಂತೆ ತೋರುತ್ತದೆ. ಆದರೂ ಕನ್ನಡ ನಾಡಿನ ಒಂದು ವೈಶಿಷ್ಟವನ್ನು ಇವನು ಎಂದಿಗೂ ಮರೆತಿಲ್ಲ. ಅದೇನೆಂದರೆ ಊಟದ ಸೌಕರ್ಯ. ಇದು ಮುಂದಿನ ಪದ್ಯಗಳಿಂದ ವಿಶದವಾಗುತ್ತದೆ.

ಜೋಳದಾ ಬೋನಕ್ಕೆ ಬೇಳೆಯಾ ತೊಗೆಯಾಗಿ ।  
ಕಾಳೆಮ್ಮೆ ಕರೆದ— ಹೈನಾಗಿ ಬೆಳೆವಲಾ ।  
ಮೇಳ ನೋಡೆಂದ ಸರ್ವಜ್ಞ ॥

ನವಣೆಯಾ ಬೋನಕ್ಕೆ ಹವಣಾದ ತೊಗೆಯಾಗಿ।
ಕವಣೆಗಲಷ್ಟು— ಬೆಣ್ಣ್ಯಾದರೂಟದ।
ಹವಣ ನೋಡೆಂದ ಸರ್ವಜ್ಞ॥

ಕಡಲೆಯನು ಗೋಧಿಯನು ಮಡಿಕದ್ದು ಬೇಳದರೂ।
ಸುಡಬೇಕು ನಾಡ—ನೆಂದವನ ಬಾಯೊಳಗೆ।
ಪುಡಿಗಡುಬು ಬೀಳ್ಗು ಸರ್ವಜ್ಞ

ಕರ್ಣಾಟಕನ ನೆಲ, ನೀರು, ಬೆಳೆ ಮುಂತಾದುವುಗಳಲ್ಲಿ ಎಣ್ಣೆಯು ಹೆಚ್ಚಾಗಿರುವುದರಿಂದ ಇಲ್ಲಿಯ ಹಾಲು, ಹೈನುಗಳನ್ನು ಊಟಮಾಡುವವರಿಗೆ ಒಂದು ತರದ ಕೊಬ್ಬು ಬರುವುದುಂಟು. ಇದರಿಂದ ಜ್ಞಾನತಂತುಗಳ ಮೇಲೆ ಒಂದು ಬಗೆಯ ಪರಿಣಾಮವಾಗಿ ದೇಹಾಲಸ್ಯ ಉಂಟಾಗುತ್ತದೆ ಈ ಲಕ್ಷಣ ವನ್ನು ಕಂಡು ಆರ್ಯರು, ದ್ರಾವಿಡರ ವಿಷಯವಾಗಿ "ಆರಂಭಶೂರಾಃಖಲು ದಾಕ್ಷಿಣಾತ್ಯಾಃ" ಎಂದು ಹೇಳಿದಂತೆ ತೋರುತ್ತದೆ. ಸಮುದ್ರಕರಾವಳಿಯಲ್ಲಿದ್ದ ವರು ಅಲ್ಲಿ ಯಾವಾಗಲೂ ನೀರು, ನೆರಳು, ಹಸರು ಹನ್ನೆರಡು ತಿಂಗಳಲ್ಲಿಯೂ ನೋಡಲಿಕ್ಕೆ ಸಿಕ್ಕುವುದರಿಂದ ಥಕ್ಕನೆ ಕರ್ಣಾಟಕದ ಬೆಳವಲ ಸೀಮೆಗೆ ಬಂದರೆ ಬೇಸಗೆಯಲ್ಲಿ ಹಾಳುಬಿದ್ದ ಭೂಮಿಯನ್ನು ನೋಡಿ "ಸುಡಬೇಕು ನಾಡ" ಎಂದೆನ್ನಬಹುದು. ಇಂಥವರಬಾಯಿಯಲ್ಲಿ ಕೊಬ್ಬರಿಯ ಹೂಸಲದಿಂದ ತಯಾರಿಸಿದ ಸುರಳಿಯ ಹೋಳಿಗೆ, ಕೆರಜಿಕಾಯಿ, ಸಕ್ಕರೆಯಹೋಳಿಗೆ, ತುಪ್ಪ ಮೊದಲಾದುವುಗಳು ಬಿದ್ದರೆ ಕನ್ನಡಿಗರ ಊಟದ ಸೌಕರ್ಯವು ಗೊತ್ತಾ ಗುವುದೆಂದು ಕವಿಯ ತಾತ್ಪರ್ಯ.

ಇಂತಹ ಪದಾರ್ಥಗಳನ್ನು ಹೇಗೆ ತಿನ್ನಬೇಕೆಂಬುದರ ಬಗ್ಗೆ ಹೇಳಿರುವ ಸತ್ಯವೂ ಬಹು ಚಮತ್ಕಾರವಾಗಿದೆ. ಅದೇನಂದರೆ :—

ಹರಕು ಹೋಳಿಗೆ ಲೇಸು ಮುರುಕು ಹಪ್ಪಳ ಲೇಸು।
ಕುರುಕುರು ಕಡಲೆ-ಬಲು ಲೇಸು ಪಾಯಸದ।
ಸುರುಕು ಲೇಸೆಂದ ಸರ್ವಜ್ಞ॥

ಬಿಸಿ ಬಿಸಿ ಹೋಳಿಗೆಯನ್ನುಂಡರೆ ಅದು ಮುದ್ದೆಯಾಗಿ ಪಚನ ಕ್ರಿಯೆ ಯು ನಡೆಯುವುದಕ್ಕೆ ಕಠಿಣವಾಗುತ್ತದೆ. ಅದನ್ನೇ ಮರುದಿನ ತಂಗಳು

ಹೋಳಿಗೆಯನ್ನುಂಡರೆ: ಅದು ರುಚಿಕರವಾಗಿರುವುದು. ಇದಲ್ಲದೆ ತಂಗಳು ರೊಟ್ಟಿಯು ಬಿಸಿ ರೊಟ್ಟಿಗಿಂತ ಜೀರ್ಣಕ್ಕೆ ಸುಲಭವಾಗಿರುವುದು. ತಂಗಳು ರೊಟ್ಟಿಯನ್ನು ಸ್ವಲ್ಪ ಸ್ವಲ್ಪ ಮುರಿದು ಬಹಳ ಹೊತ್ತಿನವರೆಗೆ ಅರೆದು ತಿನ್ನಬೇಕಾಗುತ್ತದೆ. ಇದರಿಂದ ಬಾಯೊಳಗಿನ ಲಾಲಾರಸವು ಚೆನ್ನಾಗಿ ಮಿಶ್ರವಾಗಿ ಪಚನಕ್ಕೆ ಸುಲಭವಾಗುತ್ತದೆ. ಅದರಂತೆ ಭೋಜ್ಯ ಪದಾರ್ಥಗಳನ್ನು ಕಡಲೆಯಂತೆ ಒಂದೊಂದಾಗಿ ಸ್ವಲ್ಪ ಸ್ವಲ್ಪ ಚೆನ್ನಾಗಿ ಅಗಿದು ತಿನ್ನಬೇಕೆಂದು ತಾತ್ಪರ್ಯ. ಇದಲ್ಲದೆ ಲೇಹ್ಯ ಪದಾರ್ಥಗಳನ್ನು ಒಮ್ಮೆಲೆ ಬಾಯೊಳಗೆ ಹಾಕಿಕೊಳ್ಳದೆ ಸುರಿದುಕೊಳ್ಳುವುದರಿಂದ ತುದಿ ನಾಲಗೆಯಿಂದ ಕಿರುನಾಲಗೆಯವರೆಗೆ ರುಚಿ ಹತ್ತಿ ಲಾಲಾರಸವು ಮಿಶ್ರವಾಗುವುದು. ಇದು ದೀರ್ಘಾಯುಷ್ಯದ ಕ್ರಮವು. ಹೀಗೆ ಊಟದ ಕ್ರಮವನ್ನು ಅರಿಯದೆ ಗಬಗಬನೆ ತಿನ್ನುವವರಿಗೆ ಅಗ್ನಿಮಾಂದ್ಯವಾಗುವುದು. ಇಂಥವರು ಊಟದಲ್ಲಿ ಕೃತ್ರಿಮ ಪದಾರ್ಥಗಳನ್ನು ಅಂದರೆ ಹಪ್ಪಳ, ಸಂಡಿಗೆ, ಉಪ್ಪಿನಕಾಯಿ ಮುಂತಾದ ಮೇಲೋಗರದ ಮೂಲಕವಾಗಿ ಲಾಲಾರಸವನ್ನು ನಾಲಗೆಯಲ್ಲಿ ಪ್ರೇರಿಸಿ ಊಟಮಾಡಬೇಕಾಗುವುದು. ಇಂಥವರ ವಿಷಯವಾಗಿ ಸರ್ವಜ್ಞನು ಹೇಳಿರುವುದೇನಂದರೆ:—

ನಾಲಗೆಯ ಕಟ್ಟಿದನು ಕಾಲನಿಗೆ ದೂರಹನು।
ನಾಲಗೆಯು ರುಚಿಯ-ಮೇಲಾಡುತಿರಲವನ।
ಕಾಲ ಹತ್ತಿರವು ಸರ್ವಜ್ಞ॥

ರುಚಿಗಳನು ನೆರೆಗೆಳೆದು ಶುಚಿಗಳಲಿ ಮೆರೆವಂಗೆ।
ಪಚನವು ಬೆಳಗಿ-ಬಲದಿ ಬಾಳುವನೆಂಬ।
ವಚನವೊಂದಿಹುದು ಸರ್ವಜ್ಞ॥

ಸರ್ವಜ್ಞನು ಹತ್ತು ಶಬ್ದಗಳಲ್ಲಿ ಉದಾತ್ತವಾದ ವಿಷಯಗಳನ್ನು ಅಡಗಿಸಿರುವ ರೀತಿಯನ್ನು ನೋಡಿದರೆ ಬಹು ಆಶ್ಚರ್ಯವಾಗುತ್ತದೆ. ಇದರ ಸ್ವಾರಸ್ಯವನ್ನು ಇಷ್ಟೇ ಶಬ್ದಗಳಲ್ಲಿ ತರುವುದು ಅಸಾಧ್ಯ. ಹೀಗಿದ್ದರೂ ಇವನ ಪದ್ಯಗಳಲ್ಲಿ ಮುಖ್ಯವಾದ ಕೆಲವನ್ನು ಆಂಗ್ಲಭಾಷೆಯ ಕವಿತೆಯಲ್ಲಿ ಭಾಷಾಂತರ ಮಾಡುವುದಕ್ಕೆ ಶ್ರೀಮಾನ್ ಉತ್ತಂಗಿಯವರು ಪ್ರಯತ್ನಪಟ್ಟಿದ್ದಾರೆ. ವಾಚ

ಕರ ವಿನೋದಕ್ಕಾಗಿ ಅವರದೊಂದು ಪದ್ಯವನ್ನು ಕೊನೆಯಲ್ಲಿ ಸೇರಿಸಿ ಈ ಪ್ರಸಂಗ ಮುಗಿಸುತ್ತೇವೆ. ಅದು ಹಿಂದೆ ಹೇಳಿದ ಪದ್ಯವೇ.

"ಕಡಲೆಯನು ಗೋಧಿಯನು ಮಡಿಕುದ್ದ ಬೆಳೆದರೂ ಸುಡಬೇಕು ನಾಡ ನೆಂದವನ ಬಾಯೊಳಗೆ ಪುಡಿಗಡುಬು ಬೀಳ್ಗು" ಈ ವಚನ ಭಾಷಾಂತರ ವನ್ನು ಮಾನ್ಯ ಉತ್ತಂಗಿಯವರು ಈ ಮುಂದೆ ಹೇಳುವಂತೆ ಮಾಡಿದ್ದಾರೆ.

Gram, wheat, peas and pulse,
They grow so rich no-where else ;
The mouth that curseth soil as such
Be filled with grains ol pan-cake much.

ನಾವು ಇದುವರೆಗೆ ಹೇಳಿದ ಎಲ್ಲ ಕಾರಣಗಳಿಂದ ಕನ್ನಡ ಸಾಹಿತ್ಯದ ಸೊಗಸು, ಕನ್ನಡ ಸಂಸ್ಕೃತಿಯ ತಿರಳು. ಈ ಮೊದಲಾದುವನ್ನು ತಿಳಿಯ ಲಿಚ್ಛಿಸುವವರು ಸರ್ವಜ್ಞ ವಚನಗಳನ್ನು ಓದುವುದು, ಕೇಳುವುದು ಆವಶ್ಯಕ ಎಂದು ಹೇಳುತ್ತೇವೆ.

# ಸರ್ವಜ್ಞ ವಚನಗಳು

ಜನಜೀವನದ ಪ್ರಗತಿಗೆ ಸಾಹಿತ್ಯವು ಸಾಧಕ. ಸಾಹಿತ್ಯದ ನಿರ್ಮಾಣಕ್ಕೆ ಪ್ರತಿಭಾನ್ವಿತ ಕವಿಗಳು ಕಾರಣ. ಅಂತಹ ಕವಿಗಳಲ್ಲಿ ಪಂಡಿತ ಕವಿಗಳಿಗಿಂತ ಜನಪ್ರಿಯರಾದ ರಾಷ್ಟ್ರಕವಿಗಳು ಬಹುಮುಖ್ಯರು. ಈ ಜಾತಿಯ ಕವಿಗಳ ಸಂಖ್ಯೆ ಎಲ್ಲ ದೇಶ-ಕಾಲಗಳಲ್ಲಿಯೂ ವಿರಳ. ಸಮಗ್ರ ಭಾರತದ ಸಾಹಿತ್ಯವನ್ನು ಪರೀಕ್ಷಿಸಿದರೂ ಇಂತಹ ಜಾನಪದಕವಿಗಳು ಬೆರಳಿನಲ್ಲಿ ಎಣಿಸುವಷ್ಟು ಮಾತ್ರ. ಹಿಂದಿಯ ಕಬೀರ್, ಮರಾಠಿಯ ತುಕಾರಾಂ, ತೆಲುಗಿನ ವೇಮನ, ತಮಿಳಿನ ತಿರುವಳ್ಳುವರ್, ಕನ್ನಡದ ಸರ್ವಜ್ಞಮೂರ್ತಿ ಇತ್ಯಾದಿಗಳೇ ಜನಪ್ರಿಯ ಜೀವಂತ ಕವಿಗಳು. ಇಂಥವರೇ ಸಾಹಿತ್ಯದ ಉನ್ನತಿಗೆ ಪ್ರಾಣನಾಡಿಯಂತೆ ಇರತಕ್ಕವರು. ಜನತೆಗೂ ಸಾಹಿತ್ಯಕ್ಕೂ ನಿಕಟ ಸಂಬಂಧವನ್ನು ಕಲ್ಪಿಸತಕ್ಕವರು.

ಸಾಹಿತ್ಯದ ಉದ್ದೇಶ ಜನತೆಗೆ ಸಂತೋಷವನ್ನೂ ಜ್ಞಾನವನ್ನೂ ಉಂಟುಮಾಡುವುದೆಂದು ಒಪ್ಪಿಕೊಳ್ಳುವುದಾದರೆ, ಸರ್ವಜ್ಞನಂತಹ ಜಾನಪದಕವಿಗಳಿಗೆ ಸಂತೆಯ ಮಂದಿಯಲ್ಲಿಯೇ ಅಲ್ಲ ಸಾಹಿತ್ಯ ಮಂದಿರದಲ್ಲಿಯೂ ಕೂಡ ಅಗ್ರತಾಂಬೂಲ ಸಲ್ಲುವುದು ಅಗತ್ಯವಾಗಿದೆ. ಕರ್ಣಾಟಕದಲ್ಲಿ ಪಂಡಿತ ಪಾಮರರಿಗೆಲ್ಲಾ ತಿಳಿಯುವಂತಹ ಸರಳ ಸುಂದರ ಸುಮನೋಹರ ಭಾಷೆಯಲ್ಲಿ, ತ್ರಿಪದಿಯ ಛಂದಸ್ಸಿನಲ್ಲಿ ಘನತಮತತ್ವಗಳನ್ನು ವಿಶ್ವಪ್ರೇಮದಿಂದ ಸ್ಫೂರ್ತಿಗೊಂಡು ಲೋಕಾನುಭವ, ಶಾಸ್ತ್ರಾನುಭವಗಳ ಪರಿಪಕ್ವ ಹೃದಯದಿಂದ ವಚನಗಳ ರೂಪದಲ್ಲಿ ಹಾಡಿ, ಜನತೆಯಿಂದ ಹಾಡಿಸಿ, ಕನ್ನಡ-ನಾಡಿಗೂ ನುಡಿಗೂ ಸರ್ವಜ್ಞನು ಸಲ್ಲಿಸಿದ ಸೇವೆಯು ಅಮೋಘ ಹಾಗೂ ಅನುಪಮವಾದುದು.

'ರಸಿಕನಾಡಿನ ಮಾತು ಶಶಿಯುದಿಸಿ ಬಂದಂತೆ' 'ಸಾಹಿತ್ಯವೆಲ್ಲರಿಗೆ ಇಲ್ಲ' 'ಎಲ್ಲಬಲ್ಲವರಿಲ್ಲ' ಇತ್ಯಾದಿ ಸವಿಕಟ್ಟಾದ ಈ ಕವಿಯ ಮಾತುಗಳಿಂದ ಸರ್ವ

---

ತಾ॥ ೨೭-೫-೪೯ರ ದಿನ ಮದರಾಸು ಆಕಾಶವಾಣಿಯಿಂದ ಶ್ರೀ ಬ. ಶಿವಮೂರ್ತಿಶಾಸ್ತ್ರಿಗಳು ಮಾಡಿದ ಭಾಷಣ.

ಜ್ಞನು ಸಾಹಿತ್ಯದ ಗುಟ್ಟು-ಗುರಿಗಳನ್ನು ಎಷ್ಟು ಚೆನ್ನಾಗಿ ಅರಿತಿರುವನೆಂಬು ದನ್ನು ನಾವು ಮನಗಾಣಬಹುದು.

ಕನ್ನಡ ಜಾಣ ಸರ್ವಜ್ಞನು ಸುಮಾರು೧೬ನೆಯ ಶತಕದವನು. ಧಾರ ವಾಡ ಜಿಲ್ಲಾ 'ಅಂಬಲೂರು' ಮತ್ತು 'ಮಾಸೂರು'ಗಳಲ್ಲಿ ಹುಟ್ಟಿ ಬಳೆದವನು. ಆರ್ಯದ್ರಾವಿಡ ಸಂಸ್ಕೃತಿಯ ಸಂಮಿಶ್ರಣವೆಂಬಂತೆ ಮೂರ್ತಿವೆತ್ತವನು. ಕೈಲಾಸದ **ಪುಷ್ಪದತ್ತನ** ಅವತಾರವೆನಿಸಿ ಮೊದಲು **ವರರುಚಿಕವಿಯಾಗಿ,** ಕಡೆಗೆ ಆಶುಕವಿ ಸರ್ವಜ್ಞನಾಗಿ ಭೂಮಿಯಲ್ಲಿ ಜನಿಸಿದವನು. ಚಂದ್ರ ಶೇಖರನವರಿಂದ ಪುಟ್ಟದ ಕಂದನೆನಿಸಿದವನು. ಸರ್ವರೊಳಗೆ ಒಂದೊಂದು ನುಡಿ ಕಲಿತು ವಿದ್ಯೆಯ ಪರ್ವತವೇ ಆದವನು, ಬಾಳಲೋಚನನ ಶರಣರ ಆಳಾಗಿ ವಚನಗಳನ್ನು ಹಾಡಿದವನು, ಮುಂಡೆ ಬೋಳಿಸಿಕೊಂಡು, ತುಂಡು ಗಂಬಳಿ ಹೊದೆದು, ಹಿಂಡನಗಲಿದ ಗಜದಂತೆ ಕನ್ನಡ ನಾಡಿನಲ್ಲಿ ಓಡಾಡಿದ ವನು. ಎಂಬಿಷ್ಟು ವಿಚಾರಗಳನ್ನು ಅವನ ಜೀವನ ಕುರಿತು ಸಂಗ್ರಹವಾಗಿ ನೆನಪಿಟ್ಟುಕೊಳ್ಳಬೇಕು.

ಸರ್ವಜ್ಞನ ವಚನಗಳು ವಿವಿಧ ವಸ್ತುಕೋಶದಂತೆ (Encycloph edia) ಜನಜೀವನಕ್ಕೆ ಬೇಕಾದ ಎಲ್ಲ ವಿಷಯಗಳನ್ನೂ ಒಳಗೊಂಡಿವೆ. "ಅನುಭವಿಯ ವೇದವೇ ವೇದ"ವಾದ ಆ ತಿರುಳ್ಗನ್ನಡಿಗನ ವಚನಗಳು ಹೇಳು ವವನ ಹೃದಯದಿಂದ ಹೊರಟು, ಕೇಳುವವರ ಹೃದಯಕ್ಕೆ ನೇರವಾಗಿ ಹೋಗತಕ್ಕವುಗಳು. "ಮನೋಭವ ನಲರಂಬಿನಂತೆ ಕೃತಿವೇಳ್ವುದು ಕಬ್ಬಿಗ ನುಬ್ಬಿ ಧಾತ್ರಿಯೊಳ್" ಎಂಬ **ಷಡಕ್ಷರ ಕವಿಯ** ಮಾತು ಸರ್ವಜ್ಞನ ವಚನ ಗಳನ್ನು ಅನ್ವರ್ಥಗೊಳಿಸಿದೆ.

ಅನುಭಾವಿಯಾದ ಸರ್ವಜ್ಞನ ವಚನಗಳು ಅಡವಿಯ ಹೂವುಗಳಂತೆ ಸಹಜ ಸುಂದರ. ಅರಣ್ಯದ ಔಷಧಗಳಂತೆ ಜೀವನಕ್ಕೆ ಉಪಯುಕ್ತ. ವಸಂತ ಕಾಲದ ಗಿಡಮರಗಳಂತೆ ರಸಿಕರಿಗೆ ಆನಂದದಾಯಕ. ಮಳೆಗಾಲದ ಮಿಂಚಿನಂತೆ ಜನಸಾಮಾನ್ಯರಿಗೆ ಕೌತುಕ ಜನಕ ವೀರರ ಸಿಂಹನಾದಗಳಂತೆ ತರುಣರಿಗೆ ಉತ್ಸಾಹ ವಿವರ್ಧಕ ಮತ್ತು ದೇಶಾಭಿಮಾನಜನಕ ಎಂದೆನ್ನಬಹುದು. ಒಳ್ಳೆಯ ಭಾವನೆಗಳಿಂದ ಜನತೆಯನ್ನು ಕಟ್ಟುವುದು, ಅವರ ಮನಸ್ಸಿನಲ್ಲಿ ಉತ್ತಮ

ಗುಣಗಳನ್ನು ಹುಟ್ಟಿಸುವುದು, ಓದುಗರ ಜೀವನಕ್ಕೆ ಕೈದೀವಿಗೆಯಂತೆ ಸದಾ ನೆರವಾಗುವುದು ಸತ್ಕಾವ್ಯದ ಲಕ್ಷಣವೆನ್ನುವುದಾದರೆ, ಸರ್ವಜ್ಞ ವಚನಗಳು ಇಂತಹ ಶ್ರೇಷ್ಠತಮ ಕಾವ್ಯವೆಂದು ಧೈರ್ಯವಾಗಿ ಹೇಳಬಹುದು. ಸರ್ವಜ್ಞ ಕವಿಯು ಕರ್ಣಾಟಕದ ಮೂಲಕ ಸಮಗ್ರ ಭಾರತಕ್ಕೂ ವಿಶ್ವಕ್ಕೂ ಕೊಟ್ಟ ಸಂದೇಶವು ಅತ್ಯಂತ ಸಾರತಮವಾದುದು; ತ್ರಿಕಾಲಾಬಾಧಿತವಾದುದು.

## ಗುರುವನ್ನು ಕುರಿತು

ಸರ್ವಜ್ಞನು ತನ್ನ ವಚನದಲ್ಲಿ ಗುರುವಿಗೆ ಅಗ್ರತಾಂಬೂಲವಿತ್ತಿದ್ದಾನೆ. "ಊರಿಂಗೆ ದಾರಿಯನು ಯಾರುತೋರಿದೋಡೇನು ? ಸಾರಾಯದ ನಿಜವ ತೋರುವ ಗುರು ತಾನಾರಾದೊಡೇನು ?" ಎಂದು ಹೇಳುವ ಅವನ ಮಾತುಗಳು ಕುಲ, ಜಾತಿ, ಪಂಥಗಳ ಎಲ್ಲೆಯನ್ನು ಮೀರಿದ ವಿಶ್ವಪ್ರೇಮಿಗಳಾದ ಕೃಷ್ಣ, ಬುದ್ಧ, ಬಸವ, ಗಾಂಧಿಯವರಂತಹ ಲೋಕಗುರುಗಳನ್ನು ಸ್ಮರಣೆಗೆ ತರುತ್ತವೆ. ನಿಷ್ಕಾಮಪ್ರೇಮಿಗಳಾದ ಗುರುಗಳನ್ನು ಕುರಿತು ಸರ್ವಜ್ಞ ಮೂರ್ತಿಯು "ಜ್ಯೋತಿಯಿಂದಲಿನೇತ್ರ ರಾತ್ರಿಯಲಿ ಕಾಂಬಂತೆ ಶಿವನ ಗುರುನಾಥನಿಂದರಿಗು, ತಂದೆಗೂ ಗುರುವಿಗೂ ಒಂದು ಅಂತರವುಂಟು. ತಂದೆ ಸದ್ಗುರುವ ತೋರುವನು ಗುರುರಾಯ ಬಂಧನವ ಕಳೆವ, ಗುರುತೋರುವನು ದೈವದೆಡೆಯನ್ನು ಆದೈವ ಗುರುವ ತೋರುವುದೆ? ಸುರತರವು ಮರನಲ್ಲ, ಸುರಭಿಯೊಂದು ಆವಲ್ಲ ಗುರುರಾಯ ನರರೊಳಗಲ್ಲ. ಎತ್ತಾಗಿ ತೊತ್ತಾಗಿ ಹಿತ್ತಲದ ಗಿಡವಾಗಿ ಗುರುವಿನ ಪಾದದ ಕೆರವಾಗಿ ಸದಾ ಅವನ ಹತ್ತಲಿರು ಇತ್ಯಾದಿ ಮಾತುಗಳಿಂದ ಗುರುವಿನ ಅಗತ್ಯವು ಸಮಾಜಕ್ಕೂ ವ್ಯಕ್ತಿಗೂ ಎಷ್ಟೊಂದು ಅಗತ್ಯವೆಂದು ಸರ್ವಜ್ಞನು ಒತ್ತಿಹೇಳುತ್ತಾನೆ. ರಾಮಾಯಣದಲ್ಲಿ ಶ್ರೀರಾಮನಿಗೆ ವಸಿಷ್ಠ, ವಿಶ್ವಾಮಿತ್ರರೂ, ಭಾಗವತದಲ್ಲಿ ಶ್ರೀ ಕೃಷ್ಣನಿಗೆ ಜ್ಞಾನಿಯಾದ ಸಾಂದೀಪನೂ, ಸತ್ಯಶೋಧನೆಯಲ್ಲಿ ಗಾಂಧಿಯವರಿಗೆ ಪೂಜ್ಯ ಗೋಖಲೆಯೂ, ಬಸವಪುರಾಣದಲ್ಲಿ ಬಸವಣ್ಣನವರಿಗೆ ಸಂಗಮದ ಜಾತವೇದಮುನಿಯೂ ಗುರುಗಳೆಂದು ಹೇಳಿದೆ. ಎಂತಹ ಮಹಾಪುರುಷರಿಗಾದರೂ ಗುರುಗಳ

ಅಗತ್ಯ ಉಂಟೆಂಬುದನ್ನು ಈ ಪ್ರಮಾಣಗಳ ಆಧಾರದಿಂದ ನಾವು ಗ್ರಹಿಸಬಹುದಲ್ಲವೆ? ಸರ್ವಜ್ಞನು ಗುರುವಿಗೆ ಕೊಟ್ಟಿರುವ ಮಹತ್ವವು ಸನಾತನಧರ್ಮದ ಸಂಪ್ರದಾಯಕ್ಕೆ ಸಮ್ಮತವಾಗಿಲ್ಲವೆ?

## ದೇವರನ್ನು ಕುರಿತು

ಸಹಜ ಕವಿಯಾದ ಸರ್ವಜ್ಞನು ಸೃಷ್ಟಿಕರ್ತನನ್ನು ಕುರಿತು ಆಡಿರುವ ಮಾತುಗಳು ಮಾನವ ಜಾತಿಗೆ ಕೊಟ್ಟ ಉಪದೇಶದಂತಿವೆ. ಕಲ್ಲಿನೊಳು, ಕಂಭದೊಳು, ಬಳ್ಳದೊಳು, ಹಿಕ್ಕೆಯೊಳು ಇರ್ಪ ಜಗದ್ಭರಿತನನು ನಿಗಮಗಳು ಬಲ್ಲುವೆ? ಎಂದು ಹಾಕಿರುವ ಸವಾಲು ಉಪನಿಷತ್ತಿನ ''ನೇತಿನೇತಿ" ಎಂಬ ಮಾತುಗಳನ್ನೂ, ವೇದದ **ಪುರುಷಸೂಕ್ತ**ಮಂತ್ರಗಳನ್ನೂ ನಮ್ಮ ನೆನಪಿಗೆ ತರುತ್ತವೆ. "ಆಗಿಲ್ಲ, ಹೋಗಿಲ್ಲ, ಮೇಗಿಲ್ಲ, ಕೆಳಗಿಲ್ಲ, ತಾಗಿಲ್ಲ ತಪ್ಪು ತಡೆಯಿಲ್ಲ.ಲಿಂಗಕ್ಕೆ ದೇಗುಲವೆ ಇಲ್ಲ"ಎಂದು ಹೇಳುವ ಸರ್ವಜ್ಞನು ಎಂತಹ ದಾರ್ಶನಿಕ ಪಂಡಿತನೆಂಬುದು ನಿದರ್ಶನವಾಗಿದೆ. ಕವಿಯ ಈ ಮಾತುಗಳು ದಿಕ್ಕಾಲಾದ್ಯಾನವಚ್ಛಿನ್ನಾನಂತ ರೂಪನಾದ ಭರ್ತೃಹರಿಯ ಭಗವಂತನನ್ನು ನಮ್ಮ ನೆನಪಿಗೆ ತರುವುದಿಲ್ಲವೆ? 'ಒಬ್ಬನಲ್ಲದೆ ಜಗಕೆ ಇಬ್ಬರುಂಟೇ–ಒಬ್ಬನೇ ದೈವ, ಎಂಬ ಕವಿಯ ಮಾತು ಏಕೇಶ್ವರವಾದಕ್ಕೆ ನಿದರ್ಶನವಾಗಿದೆ.

## ಆತ್ಮಶುದ್ಧಿ ಬೇಕು.

ಗುರು ಮತ್ತು ದೈವದ ಸಾಧನೆಯಲ್ಲಿ ಜನರ ನಡೆನುಡಿಗಳು ಶುದ್ಧವಾಗಿರಬೇಕೆಂದು ಸರ್ವಜ್ಞನು ಹೇಳಿರುತ್ತಾನೆ. 'ಕೊಲುವ ಕೈಯೊಳು ಪೂಜೆ, ಮೆಲುವ ಬಾಯೊಳು ಮಂತ್ರ' ಸಲ್ಲದು ಎಂದು ಸರ್ವಜ್ಞನ ಅಭಿಪ್ರಾಯ. 'ಲಿಂಗಕ್ಕೆ ತೋರಿಸುತ ನುಂಗುವುದಕಿಂತ ಲಿಂಗಮುಖವಾದ ಜಂಗಮಗೆ ನೀಡುವುದು' ಉತ್ತಮವೆಂದು ಅವನ ತೀರ್ಮಾನ. ತನ್ನಲಿಹ ಲಿಂಗವರಿಯದಲೆ, ಗಂಗೆ. ಗೋದಾವರಿ, ತುಂಗಭದ್ರೆ, ಕೃಷ್ಣೆಯಲಿ ಮಿಂದು ಫಲವೇನು? ಎಂದು ಅವನ ಅಂಬೋಣ. ಈ ಮೇಲಿನ ಸರ್ವಜ್ಞನ ಉಪದೇಶಗಳು ಸಮಾಜದಲ್ಲಿ ವೇದಾಂತಿಗಳೆಂದು ವಿಜೃಂಭಿಸಿಕೊಳ್ಳುವವರಿಗೆ ಎದೆ ಮುಟ್ಟಿ ನೋಡಿಕೊಳ್ಳುವಂತೆ ಮಾಡುತ್ತವಲ್ಲವೆ? ಈ ಮೇಲೆಕಂಡಂತೆ ಗುರು

ದೈವ, ಮತ್ತು ಸತ್ಯಮಾರ್ಗವನ್ನು ಬೋಧಿಸಿದ ಸರ್ವಜ್ಞನು ಜನತೆಗೆ ಜ್ಞಾನದ ಅಗತ್ಯವನ್ನು ಕುರಿತು ಬೋಧಿಸುವುದು ನ್ಯಾಯವಾಗಿಯೇ ಇದೆ. "ಲೋಕಕ್ಕೆ ಜ್ಞಾನದಿಂ ಮೇಲಿಲ್ಲ. ಜಗದೊಳಗೆ ಜ್ಞಾನವೇ ಅಧಿಕ, ಜ್ಞಾನ ದಿಂದಲೇ ಇಹವು, ಜ್ಞಾನದಿಂದಲೇ ಪರವು" ಎಂಬ ಈ ಉಪದೇಶಗಳು ಸರ್ವ ಜ್ಞನ ಜ್ಞಾನ ಶ್ರದ್ಧೆಗೆ ನಿದರ್ಶನವಾಗಿವೆ.

ಜನರ ದುಃಖಕ್ಕೆ ಕಾರಣವೇನೆಂಬುದನ್ನು ಕವಿ ಸರ್ವಜ್ಞನು ಚೆನ್ನಾಗಿ ಅರಿತಿದ್ದಾನೆ. ಉತ್ತಮ, ಮಧ್ಯಮ, ಅಧಮ ಜನರ ಮನಸ್ಸಿನ ಭಾವನೆ ಗಳನ್ನು ಅವನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾನೆ. ಜನತೆಯ ಮಾನ ಸಿಕ ರೋಗಗಳ ಪರಿಹಾರಕ್ಕೆ ಅವನು ತನ್ನ ವಚನಗಳ ಮೂಲಕ ಔಷಧ ಗಳನ್ನು ಕೊಟ್ಟಿದ್ದಾನೆ. ಕಾವಿಯ ಹೊತ್ತ ವಿಷಯಾಸಕ್ತ ಸಾಧು ಸಿದ್ಧ ರನ್ನು 'ಶುದ್ಧ ಮಾದಿಗರು' ಎಂದೂ, ತತ್ವವನು ಅರಿಯದೇ ಭಸಿತವಿಟ್ಟವ ರನ್ನು 'ತಿಪ್ಪೆಯ ಬೂದಿಯಲ್ಲಿ ಹೊರಳುವ ಕತ್ತೆ'ಗಳೆಂದೂ ಹಳಿಯುತ್ತಾನೆ. 'ಅನ್ನವನ್ನು ಇಕ್ಕುವುದು, ನನ್ನಿಯನು ನುಡಿಯುವುದು ಕೈಲಾಸದ ಬಿನ್ನಾಣದ ದಾರಿ' ಎನ್ನುತ್ತಾನೆ.

## ದಾನ-ಧರ್ಮಗಳು

'ಸರ್ವಜ್ಞನು ದಾನಧರ್ಮವನ್ನು ಕುರಿತು ಆಡುವ ಮಾತುಗಳು ಗಮ ನಾರ್ಹವಾಗಿವೆ. ಸಿರಿಬಂದ ಕಾಲಕ್ಕೆ ಕರೆದು ದಾನವಮಾಡು, ಕೊಡುವಾತ ಹರನು, ಕೊಟ್ಟಿದ್ದು ಹೋಯಿತೆನಬೇಡ ಅದು ಮುಂದೆ ಕಟ್ಟಿದಾಬುತ್ತಿ, ಈ ಮಾತುಗಳಿಂದ ಅವನು ಹಣಗಾರರನ್ನು ಎಚ್ಚರಿಸುತ್ತಾನೆ. ಲೋಭಿಯ ಜೀವನ 'ಕೆಚ್ಚಲ ಉಣ್ಣೆಯಂತೆ' ಮತ್ತು 'ಇದ್ದು ಉಣದಿಪ್ಪವರ ಬಾಯೊಳಗೆ ಕತ್ತೆಯಾಲದ್ದಿ' ಎಂದು ಲೋಭಿಗಳಾದ ಧನಿಕರನ್ನು ಬಲವಾಗಿ ಮೂದಲಿ ಸುತ್ತಾನೆ.'

## ಸ್ವಾತಂತ್ರ್ಯದ ಹಿರಿಮೆ

ಜಗದಿ ಸ್ವತಂತ್ರವೇ ಲೇಸು, ಕಾಯಕವು ಇರುವನಕ ನಾಯಕನು ಎನಿಸುವನು, ಎಂದು ಜನತೆಗೆ ಸ್ವಾತಂತ್ರ್ಯದ ಮಹಿಮೆಯನ್ನೂ ಕರ್ತವ್ಯದ

ಅಗತ್ಯವನ್ನೂ ನಿರೂಪಿಸುತ್ತಾನೆ. ''ನಾಡೆಂಬ ದೇಪಕ್ಕೆ ರೂಢಿಪತಿಯೇ ಪ್ರಾಣ, ಅರಸು ಅಳಿಯೆನಾಡೆಲ್ಲಕೆಡುಗು" ಎಂದು ಆರಾಜಕ ಜನರಿಗೆ ರಾಜಭಕ್ತಿಯನ್ನೂ ಬೋಧಿಸುತ್ತಾನೆ. ಜಾತಿವೀರರು ಸಾವಭೀತಿಗೆ ಅಂಜುವರೇ? 'ಜಾತಸ್ಯಮರಣಂ ಧೃವಂ' ಎಂದೂ, ಅಡಿಯುಮುಂದಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕ. ಎಂದೂ ದೇಶಭಕ್ತರನ್ನು ಹುರಿದುಂಬಿಸುತ್ತಾನೆ. ದೇಶವು ಸುಭಿಕ್ಷದಿಂದ ಇರಬೇಕಾದರೆ 'ಒಕ್ಕಲನು ಕೊಂಡಾಡಬೇಕು ಎಂದು ಆರಸರಿಗೆ ಬುದ್ಧಿ ಹೇಳುತ್ತಾನೆ. ಬಲ್ಲಿದರ ಒಡನೆ ಸೆಣಸುವುದು ಹಾವಸೆಯ ಕಲ್ಲು ಮೆಟ್ಟಿದಂತೆ' ಎಂದು ಆತುರ ಬುದ್ಧಿಯವರಿಗೆ ವಿವೇಕ ಹೇಳುತ್ತಾನೆ. ಮಜ್ಜಿಗೆ ಇಲ್ಲದ ಊಟ ಅಜ್ಜಿಗೆಯಿಲ್ಲದ ಮನೆಯಂತೆ, ಮಧುರವಿಲ್ಲದ ಹಾಡು ಚದುರೆಯಿಲ್ಲದ ಸಂಸಾರದಂತೆ, ರೊಟ್ಟಿಯಿಲ್ಲದ ಊಟ ಹೊಟ್ಟೆಗಿಲ್ಲದ ಕೂಟದಂತೆ ಎಂದು ಅವನು ಹೇಳುವ ಮಾತುಗಳು ಲೋಕಾನುಭವದಿಂದ ಮಾತ್ರ ಅರ್ಥವಾಗತಕ್ಕುವುಗಳಾಗಿವೆ!

## ಸಜ್ಜನ-ದುರ್ಜನ

ಸರ್ವಜ್ಞ ಕವಿಯು ಸಜ್ಜನರ ಸಂಗದ ಮಹತ್ವ, ದುರ್ಜನರ ಸ್ನೇಹದ ಲಘುತ್ವಗಳನ್ನು ಕುರಿತು ಬಹಳ ಚೆನ್ನಾಗಿ ಹೇಳಿದ್ದಾನೆ. 'ಸಜ್ಜನರ ಸಂಗ ಹೆಜ್ಜೇನು ಸವಿದಂತೆ, ದುರ್ಜನರ ಸಂಗ ಬಚ್ಚಲ ರೊಚ್ಚಿನಂತೆ' ಒಳ್ಳಿದರೊಡನಾಡಿ ಕಳ್ಳನೊಳ್ಳಿದನಕ್ಕು, ಒಳ್ಳಿದನು ಕಳ್ಳರೊಡನಾಡೆ ಅವ ಶುದ್ಧ ಕಳ್ಳನೇ ಅಕ್ಕು, ಕ್ಷಣಮಾತ್ರವಾದರೂ ಗುಣಿಗಳೊಡನಾಡುವುದು, ಈ ಮೇಲಿನ ಮಾತುಗಳು ಲೋಕಸಂಸಾರದಲ್ಲಿ ದಿನವೂ ನಮ್ಮ ಅನುಭವಕ್ಕೆ ಬರುತ್ತಿವೆ.

ಹೆರರೊಡನೆ ಹೊತ್ತವನು ಹೊಲೆಯ, ಮುಟ್ಟಬೇಡೆಂಬ ಹಾರವನು ಹುಟ್ಟಿಹನೆಲ್ಲಿ? ದೇಹಕ್ಕೆ ಕುಲವಾವುದಯ್ಯ, ಕುಲಗೋತ್ರನಡುವೆ ಎತ್ತಣದು, ಜಾತಿ ಹೀನನ ಮನೆಯ ಜ್ಯೋತಿತಾ ಹೀನವೇ? ಎಂದು ಶುದ್ಧ ಮಡಿಯವರನ್ನು ಕುರಿತು ಸರ್ವಜ್ಞನು ಆಡುವ ಚುಚ್ಚುಮಾತು ಗಮನಾರ್ಹವಾಗಿವೆ. ಕೊಲಲಾಗದೆಂಬ ಜೈನರಾ ಧರ್ಮ ಎನ್ನ ತಲೆಯಮೇಲಿರಲಿ ಎಂದು ಜೈನರ ಅಹಿಂಸಾ ಧರ್ಮವನ್ನು ಶ್ಲಾಘಿಸುವುದು ಭಗವದ್ಗೀತೆಯ "ಪಂಡಿತಾಃ. ಸಮದರ್ಶಿನಃ" ಎಂಬ ಮಾತನ್ನು ನೆನಪಿಗೆ ತರುತ್ತದೆ.

# ಉದಾರಭಾವ

"ಮೂರ್ಖಂಗೆ ಬುದ್ಧಿಯನು ನೂರ್ಕಾಲಪೇಳಿದರೆ, ಗೋರ್ಕಲ್ಲಮೇಲೆ ಮಳೆಸುರಿದಂತೆ,ಹುಸಿವನಿಂದ ಐನೂರು ಪಶುವ ಕೊಂದವಲೇಸು" ಇತ್ಯಾದಿ ಮಾತುಗಳು ಸರ್ವಜ್ಞನ ನೀತಿನಿಷ್ಠೆಗೆ ನಿದರ್ಶನವಾಗಿವೆ.

# ಆಹಾರ ವಿಜ್ಞಾನ

• ಸರ್ವಜ್ಞನ ವಚನಗಳಲ್ಲಿ ಆಹಾರ ವಿಜ್ಞಾನವನ್ನು ಕುರಿತು ಆಡಿರುವ ಮಾತು ಅತ್ಯಂತ ಶ್ಲಾಘ್ಯವಾಗಿವೆ. ಅಲ್ಲದೆ ಈಗಿನ ಕಾಲದ ದೊಡ್ಡ ದೊಡ್ಡ ವೈದ್ಯರನ್ನೂ ಕೂಡ ಆಚ್ಚರಿಗೊಳಿಸುವಂತಿದೆ. "ಅಟ್ಟಬೋನವು ಲೇಸು, ಉದ್ದಿನ ವಡೆ ಲೇಸು, ಊಟಕ್ಕೆ ಮಜ್ಜಿಗೆ ಲೇಸು, ತುಪ್ಪದತುತ್ತು ಲೇಸು, ಹರಕು ಹೋಳಿಗೆ ಲೇಸು, ಮುರುಕು ಹಪ್ಪಳ ಲೇಸು, ಪಾಯಸದ ಸುರುಕು ಲೇಸು, ರಾಗಿಯನು ಉಂಬುವನು ನಿರೋಗಿತಾನೆನಿಸುವನು, ಜೋಳವನು ಉಣ್ಣುವನು ತೋಳನಂತಾಗುವನು, ಅಕ್ಕಿಯನು ಉಂಬುವನು ಹಕ್ಕಿಯಂತಾ ಗುವನು, ಹಸಿಯದಿರೆ ಉಣಬೇಡ, ಪಸಿದು ನೀನಿರಬೇಡ, ಬಿಸಿಗೂಡಿ ತಂಗ ಳುಣಬೇಡ, ಉಂಡು ನೂರಡಿ ನಡೆದು ಕೆಂಡಕ್ಕೆ ಕೈಚಾಚಿ ಗಂಡುಮೇಲಾಗಿ ಮಲಗಿದವ ವೈದ್ಯನ ಮಿಂಡಕಾಣಯ್ಯ ಇತ್ಯಾದಿ ಉಪದೇಶಗಳು ಜನತೆಗೆ ಆರೋಗ್ಯದ ಅಗತ್ಯವು ಎಷ್ಟೆಂಬುದನ್ನು ಬೋಧಿಸುತ್ತಿಲ್ಲವೆ? ಅನೇಕ ಪಾಶ್ಚಾತ್ಯ ಡಾಕ್ಟರುಗಳು ಹೇಳುವ "Health is the working man's capital" ಎಂಬ ಜಾಣ್ಣುಡಿಯನ್ನು 'ಸರ್ವಜ್ಞ ವಚನಗಳು' ನೆನಪಿಗೆ ತರುತ್ತಿಲ್ಲವೆ ?

# ಇಂದ್ರಿಯ ನಿಗ್ರಹ

ಸರ್ವಜ್ಞನು ಇಂದ್ರಿಯ ನಿಗ್ರಹ ಕುರಿತು ಹೇಳುವ ಮಾತು ಗಮನಾ ರ್ಹವಾಗಿವೆ. "ಹೆಣ್ಣು, ಹೊನ್ನು,ಹಣ್ಣು, ಕಣ್ಣಿನಲಿ ಕಂಡು ಭ್ರಮಿಸದವರಾರು? ಕಣ್ಣು, ನಾಲಗೆ, ಮನವು ತನ್ನವೆಂದನಬೇಡ, ವಚನದೊಳಗೆ ಎಲ್ಲರೂ ಶುಚಿ ವೀರ ಸಾಧುಗಳು, ಕುಚ, ಹೇಮ, ಶಸ್ತ್ರ ಸೋಂಕಿದೊಡೆ ಮನಸಿನೊಳಗೆ

ತಿಚಲದವರಾರು?" ಎಂಬ ಈ ಮಾತುಗಳು ವಿವೇಕವುಳ್ಳ ಜನರ ಅನುಭವಕ್ಕೆ ದಿನವೂ ಬರುತ್ತಿಲ್ಲವೆ?

ಸರ್ವಜ್ಞನು ಕನ್ನಡ ನಾಡು ನುಡಿಗಳನ್ನು ಕುರಿತು ಹೆಮ್ಮೆಯಿಂದ ಹೇಳುತ್ತಾನೆ. "ಕನ್ನಡಿಗರ ಕೆಳೆಲೇಸು, ಬೆಳವಲದ ಅಣಕನೋಡೆಂದ, ಮಲೆನಾಡ ಮೆಚ್ಚದವರಾರು?" ಈ ಮಾತುಗಳು ಯಾವ ಕನ್ನಡಿಗನಿಗೆ ತಾನೇ ಸಂತೋಷವನ್ನುಂಟುಮಾಡುವುದಿಲ್ಲ ?

## ಸ್ತ್ರೀ ಜಾತಿ

ಸೂಕ್ಷ್ಮ ಬುದ್ಧಿಯುಳ್ಳ ಸರ್ವಜ್ಞನು ಸ್ತ್ರೀ ಜಾತಿಯನ್ನು ಕುರಿತು ಆಡಿರುವ ಮಾತು ಗಮನಾರ್ಹವಾಗಿವೆ. ನಾರಿಗಂ ಸಿಕ್ಕದವರಿಲ್ಲ, ಪಲ್ಲಕ್ಕಿ ಏರಿದವರೆಲ್ಲಿಂದ ಬಂದಿಹರು? "ನಾರಿಯಿಂ ಬಲ್ಲಿದರು ಯಾರು? ನಾರಿಯಿಲ್ಲದ ಮನೆ ವ್ಯರ್ಥ, ಮನಬಂದ ಹೆಣ್ಣನ್ನು ಬಾಳ್ವೆ ಮಾಡಿದರೆ ಅಮೃತದ ಕೆನೆಯು ಸವಿದಂತೆ, ಬಲ್ಲವಳ ಕೂಟವೇ ಲೇಸು, ಬಾರದಾ ಹೆಣ್ಣಿಂಗೆ ಹೋರುವನು ಕಡುಹೆಡ್ಡ, ಇಚ್ಛೆಯನು ಅರಿವ ಸತಿಯಾಗೆ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ, ಕಾಮನಾಪುರದಿಪ್ಪ ಆ ಮಹಾ ಕೆರೆಯೊಳಗೆ ಹೇಮಹೇಮಿಗಳು ಮುಳುಗಿದರು, ಈ ಮೇಲಿನ ವಚನಗಳು ಸಂಸಾರ ಸಮುದ್ರದಲ್ಲಿ ತೇಲಿ ಮುಳುಗುತ್ತಿರುವವರಿಗೆ ಎಷ್ಟೊಂದು ಉಪಯುಕ[redacted]ಂಯ ಹೇಳಬೇಕಾಗಿಲ್ಲವಷ್ಟೆ ?

ಶಾಸ್ತ್ರ ಪಾಂಡಿತ್ಯ, ಮಿಗಿಲಾದ ಲೋಕಾನುಭವ ಲೋಕವನ್ನು ನೋಡುವ ವಿಶಾಲ ದೃಷ್ಟಿ, ಬೋಧಿಸುವ ಚಾಣಾಕ್ಷತನ ಈ ಮೊದಲಾದುವು ಎಂತಹ ಪಂಡಿತರನ್ನಾದರೂ ತಲೆದೂಗುವಂತೆ ಮಾಡುತ್ತವೆ. ಈ ರೀತಿ ಸರ್ವಜ್ಞನು ವಿಲಕ್ಷಣ ವಿರಾಡ್ರೂಪ ಪುರುಷನಾದುದರಿಂದಲೇ ಅವನು ಎಲ್ಲರ ಮನಸ್ಸನ್ನೂ ಆಕರ್ಷಿಸುತ್ತಾನೆ. ಸ್ವಲ್ಪ ಮಾತುಗಳಲ್ಲಿ ಹೆಚ್ಚು ಅರ್ಥವನ್ನು ಹೇಳುವ ಅವನ ಜಾಣ್ಮೆಯು ಆಧುನಿಕ ಸುಶಿಕ್ಷಿತರನ್ನು ಕೂಡ ಆಚ್ಚರಿಗೊಳಿಸುತ್ತದೆ. ವೇದಾಗಮಗಳ ತಾತ್ಪರ್ಯವನ್ನು ಸುಲಭವಾದ ಕನ್ನಡದ ಮಾತುಗಳಲ್ಲಿ ಹೇಳುವ ಅವನ ನೈಪುಣ್ಯವು ಪಂಡಿತಪ್ರಕಾಂಡರನ್ನೂ ತಲೆದೂ

ಗುವಂತೆ ಮಾಡುತ್ತವೆ. ಹೀಗೆ ಕ್ರಾಂತಿಕಾರಕ ಕವಿಯಾದ ಸರ್ವಜ್ಞನು ಕನ್ನಡ ಜಾಣನೇ ಅಲ್ಲದೆ ಕನ್ನಡಕ್ಕೆ ಪ್ರಾಣವೂ ಆಗಿದ್ದಾನೆ. ಪಂಡಿತರಿಗೆ ಹಿಮಾಲಯದಂತೆ ಒಂದು ನಿಗೂಢವಾದ ಸಮಸ್ಯೆಯೂ ಆಗಿದ್ದಾನೆ.

ಸರ್ವಜ್ಞನು ಶಿವಶರಣರ ವಚನಗಳಿಂದ ಸ್ಫೂರ್ತಿಯನ್ನು ಪಡೆದಿದ್ದಾನೆ. ಶರಣರ ವಚನಗಳು ಮತಧರ್ಮ ಪ್ರಧಾನವಾಗಿದ್ದರೆ, ಸರ್ವಜ್ಞ ವಚನಗಳು ನೀತಿಪ್ರಧಾನವಾಗಿವೆ. ಇವನ್ನು ಸರ್ವಜ್ಞ ಪದಗಳು, ಸರ್ವಜ್ಞ ಹಾಡುಗಳು ಎಂದು ಹೇಳುವುದುಂಟು. ಸುಮಾರು ೨೦೦೦ದಷ್ಟು ಸರ್ವಜ್ಞ ವಚನಗಳಿವೆ. ಅವುಗಳಲ್ಲಿ ೨೦೦-೩೦೦ರಷ್ಟು ವಚನಗಳು ವಿಶ್ವಸಾಹಿತ್ಯದಲ್ಲಿ ಮನ್ನಣೆಯನ್ನು ಪಡೆಯಲು ಅರ್ಹವಾಗಿವೆ. ಈಗ ಅಚ್ಚಾದ ವಚನಗ್ರಂಥದಲ್ಲಿ ಕೆಲವು ಪ್ರಕ್ಷಿಪ್ತ ವಚನಗಳೂ ಉಂಟು.

ಸಂನ್ಯಾಸಿಯೂ ಸಂಚಾರಿಯೂ ಆದ ಸರ್ವಜ್ಞನು ಒಂದೆಡೆ ಕೂತು ಗ್ರಂಥವನ್ನು ಬರೆದಂತೆ ತೋರುವುದಿಲ್ಲ. ಆಶುಕವಿಯಾದ ಅವನು ಸಮಯೋಚಿತವಾಗಿ ಹಾಡಿದ ವಚನಗಳನ್ನು ಕೇಳಿದ ಜನ ಬರೆದಿಟ್ಟಿರಬೇಕೆಂದು ತೋರುತ್ತದೆ. ಸರ್ವಜ್ಞ ವಚನಗಳ ಶೈಲಿ ಮೃದುಮಧುರವಾಗಿದೆ. ಹಾಸ್ಯರಸದಿಂದ ತುಂಬಿ ತುಳುಕುತ್ತಿದೆ. ಇವನ ಶೈಲಿ ಪಂಪಭಾರತದಂತೆ ನಾರಿಕೇಳ ಪಾಕವಲ್ಲ. ರಾಘವಾಂಕನ ಹರಿಶ್ಚಂದ್ರ ಕಾವ್ಯದಂತೆ ಕದಳೀಪಾಕವೂ ಅಲ್ಲ. ಕನಕದಾಸನ ನಳಚರಿತ್ರೆಯಂತೆ ದ್ರಾಕ್ಷಾಪಾಕ[illegible] ಸೇರಿದೆ. ಸರ್ವಜ್ಞನ ವಚನಗಳಲ್ಲಿ ಸುಂದರವಾದ ಗಾದೆಗಳಿವೆ. ಈ ಕವಿಯನ್ನು 'ಕನ್ನಡ ಗಾದೆಗಳ ಭಂಡಾರ'ವೆಂದು ಹೇಳಬಹುದು ವಚನಗಳ ಜನಪ್ರಿಯತೆಗೆ [illegible] ಗಾದೆಗಳೂ ಮುಖ್ಯ ಕಾರಣ. ಇವನು ಬಳಸುವ ಕೆಲವು ನೀಚೋಪಮೆಗಳೂ, ಅಶ್ಲೀಲಶಬ್ದಗಳೂ, ಸಮಾಜದಲ್ಲಿರುವ ಕೆಲವು ಕತ್ತೆಮಾನವರಿಗಾಗಿ ಎಂಬುದನ್ನು ನಾವು ಮರೆಯಬಾರದು.

ಸರ್ವಜ್ಞ ವಚನಗಳು ಗಂಗಾನದಿಯಂತೆ ನಿರ್ಮಲ, ಸಾಗರದಂತೆ ಸ್ವತಂತ್ರ, ಗಗನದಂತೆ ವಿಶಾಲ, ಗಿರಿಗಳಂತೆ ಗಂಭೀರ, ಸಿಡಿಲಿನಂತೆ ಭಯಂಕರ ಎಂದು ಹೇಳಬಹುದು. ಸರ್ವಜ್ಞನು ತನ್ನ ವಚನಗಳಲ್ಲಿ ನೀತಿಯನ್ನು

ಪ್ರಧಾನವಾಗಿ ಹೇಳಿದ್ದಾನೆ. ಅವನು ಧರ್ಮ, ಜ್ಞಾನ, ಗುರು, ದೈವ, ಸುಖ, ದುಃಖ, ವೈದ್ಯ, ಜ್ಯೋತಿಷ, ಗಣಿತ, ಒಗಟೆ, ವಿಡಂಬನ, ಹೆಣ್ಣು, ಗಂಡು, ಇತ್ಯಾದಿ ಎಲ್ಲ ವಿಷಯಗಳನ್ನು ಕುರಿತು ನಿರೂಪಿಸಿದ್ದಾನೆ.

ಸರ್ವಜ್ಞನು ಕೇವಲ ಕವಿಯಲ್ಲ. ಅವನು ಕ್ರಾಂತಿಕಾರಕ, ಧರ್ಮ ಬೋಧಕ, ಸಮಾಜ ಸುಧಾರಕ, ಭಾಷಾ ಪ್ರಚಾರಕ ಎಂದು ಹೇಳಬಹುದು. ಅನುಭವ ಪ್ರಧಾನವಾದ ಅವನ ವಚನಗಳನ್ನು ಕೇಳುವುದೂ, ಅವನ ಉಪದೇಶದಂತೆ ನಡೆಯುವುದೂ ನಮ್ಮ ಜನತೆಗೆ ಲಾಭಪ್ರದ. ಕನ್ನಡ ಸಾಹಿತ್ಯದ ನಂದನವನದಲ್ಲಿ ಸರ್ವಜ್ಞ ವಚನಗಳು ಮಲ್ಲಿಗೆಯ ಹೂವಿನಂತೆ ಘಮಘಮಿಸುತ್ತಿವೆ. ರಸಿಕದುಂಬಿಗಳನ್ನು ಆಕರ್ಷಿಸುತ್ತಿವೆ. ಆದ್ದರಿಂದಲೇ ೧೭ನೇ ಶತಮಾನದ ತೆಲುಗು ಜನಪದ ಕವಿ ವೇಮನನಿಗೆ ಕೂಡ ಸರ್ವಜ್ಞನ ವಚನಗಳು ಮಾರ್ಗದರ್ಶಕವಾಗಿವೆ. ಪ್ರಾಚೀನ ಕವಿಯಾದ ತಮಿಳು ತಿರುವಳ್ಳುವನ ತಿರುಕುರುಳಿಗೆ ಇವನ ವಚನಗಳು ಸಮಜೋಡಿಯಾಗಿ ನಿಂತು ಸಾಹಿತ್ಯದಲ್ಲಿ ಗೌರವವನ್ನು ಪಡೆದಿವೆ.

## ಸರ್ವಜ್ಞನ ಸಾಹಿತ್ಯದೃಷ್ಟಿ

ಸರ್ವಜ್ಞಮೂರ್ತಿಯ ವಚನಗಳನ್ನು ಕೇವಲ ಸಾಹಿತ್ಯದೃಷ್ಟಿಯಿಂದ ಓದುವವರಿಗೂ ಆನಂದಪ್ರಾಪ್ತಿಯಾಗುವುದರಲ್ಲಿ ಸಂಶಯವಿಲ್ಲ. ಈತನ ಪ್ರತಿಯೊಂದು ತ್ರಿಪದಿಯಲ್ಲಿಯೂ ಪ್ರಾಸ-ಅನುಪ್ರಾಸ, ಯತಿ, ರಸ, ಭಾವ, ವಕ್ರೋಕ್ತಿ, ಅಲಂಕಾರ ಮೊದಲಾದ ಕಾವ್ಯಾಂಶಗಳನ್ನು ನಾವು ಕಾಣಬಹುದು "ಯತಿ ವಿಲಂಘನಮೆಂದರಿದಲ್ತೆ ಕನ್ನಡಂ" ಎಂದು ಶಬ್ದಮಣಿದರ್ಪಣದಲ್ಲಿ ಕೇಶಿರಾಜನು ಕನ್ನಡಕ್ಕೆ 'ಯತಿ' ಮುಖ್ಯವಲ್ಲವೆಂದು ಹೇಳಿದ್ದರೂ ಕನ್ನಡ ಜಾಣ ಸರ್ವಜ್ಞನು ಯತಿಗೆ ಅತ್ಯಂತ ಪ್ರಾಮುಖ್ಯತೆಯನ್ನು ಕೊಟ್ಟು ಕಾವ್ಯಸೌಂದರ್ಯವನ್ನು ಹೆಚ್ಚಿಸಿದ್ದಾನೆ. ಸಂಸ್ಕೃತ ಕಾವ್ಯಗಳಲ್ಲಿ ಯತಿಗೆ ಪ್ರಾಮುಖ್ಯತೆಯುಂಟೆಂಬುದು ಸಹೃದಯರಿಗೆ ತಿಳಿದಿರುವ ವಿಚಾರ. ಸರ್ವಜ್ಞ ಕವಿಯು ಉತ್ತಮ ಸಾಹಿತಿ ಹಾಗೂ ಶಬ್ದಶಿಲ್ಪಿ ಎಂಬುದಕ್ಕೆ ಅವನು ಸ್ವತಂತ್ರವಾಗಿ ನಿರ್ಮಿಸಿರುವ ಕೆಲವು ಸುಂದರವಾದ ಕನ್ನಡ ಶಬ್ದಗಳು ನಿದರ್ಶನವಾಗಿವೆ.

'ತುತ್ತಿನ ಚೀಲ'(ಹೊಟ್ಟೆ) ಇಂಗುತಿಂಬಾತ (ಬ್ರಾಹ್ಮಣ) ಸಂದರಿವು (ಉತ್ತಮಜ್ಞಾನ) ಅಟ್ಟಿಕ್ಕುವಾಕೆ, ಇಂಬರಿಯುವಾಕೆ, ಮನೆಯಾಕೆ (ಹೆಂಡತಿ) ಹೊಂಬೇರು (ಚಿನ್ನ), ತಗ್ಗಿನಕುಣಿ, ಉಚ್ಚೆಯಬಚ್ಚಲು, ಸಂದಿಯಗಾಯ, ಕಾಮನಕೆರೆ (ಯೋನಿ) ಗುದ್ದುಗಣ್ಣವ (ಮುದುಕ) ಒದಗುವವ (ವಿಟ) ಕಿರಿಮಾತು, ಕಾಡುನುಡಿ (ಬೈಗಳು) ಹುತ್ತಿನ ಹುಳು (ಹಾವು) ತುತ್ತೆಂಬ ಶಿವ, ಅನ್ನದೇವರು (ಶಿವ) ಕಿರಿಗೂಸು (ಕನ್ಯೆ) ಹಿಡಿಹಿಟ್ಟು (ಮುದ್ದೆ) ಕೊಲುವಧರ್ಮ (ಹಿಂಸಾತ್ಮಕ ಕರ್ಮಮಾರ್ಗ) ಎಲುವಿನಮನೆ (ದೇಹ) ಎರಡು ನುಡಿ (ಸುಳ್ಳು) ಮೇಟಿವಿದ್ಯೆ (ಒಕ್ಕಲುತನ) ಅಂಬರದ ಕಲಹ (ಗುಡುಗು-ಸಿಡಿಲು) ಕುಂದುಗುಲದವಳು (ಹೊಲತಿ). ನಾಡನುಡಿ (ರಾಜಕೀಯ ಮಾತು) ಕತ್ತೆಮಾನವ (ದಡ್ಡ)

ಈ ಮೇಲಿಕಂಡ ಶಬ್ದಗಳು ಸರ್ವಜ್ಞನ ಭಾಷಾ ನೈಪುಣ್ಯಕ್ಕೆ ನಿದರ್ಶನವಾಗಿವೆಯಲ್ಲದೆ ಅವನ ರಸಿಕತೆಗೆ ಕೂಡ ಸಾಕ್ಷಿಯಾಗಿವೆ.

ಸರ್ವಜ್ಞಮೂರ್ತಿಯು ಕನ್ನಡದ ಕಟ್ಟಾಭಿಮಾನಿಯೆಂದು ತೋರುತ್ತದೆ. ಇವನ ಇಡೀ ಗ್ರಂಥದಲ್ಲಿ **'ತತ್ವಮಸಿ, ಜಾತಸ್ಯ ಮರಣಂ ಧೃವಂ'** ಎಂಬ ಒಂದೆರಡು ಸಂಸ್ಕೃತ ಪ್ರಯೋಗಗಳನ್ನು ಬಿಟ್ಟರೆ ಮತ್ತೆಲ್ಲಿಯೂ ಸಂಸ್ಕೃತದ ಸುಳಿವು ಕಂಡುಬರುತ್ತಿಲ್ಲ. ಶಾಸ್ತ್ರ ಮತ್ತು ಸಾಹಿತ್ಯ ಈ ಎರಡರ ಸಮನ್ವಯದಂತಿರುವ ಈತನ ವಚನಗಳು ಈ ರೀತಿ ಅಚ್ಚಗನ್ನಡಮಯವಾಗಿರುವುದು ರಸಿಕರ ಮೆಚ್ಚುಗೆಗೆ ಪಾತ್ರವಾಗಿದೆಯಲ್ಲವೆ ? ಈತನ ವಚನಗಳಲ್ಲಿ ಕೊಡುವಾತನೇ ಹರನು, ಪಡೆವಾತನೇ ನರನು. ಬೆಂದುದನು ಬಿತ್ತಿ ಬೆಳೆದುಂಬುದಾಸೋಹ, ಒಕ್ಕಲನು ಕೊಂಡಾಡಬೇಕು, ಹಗೆಗಳ ಕೊಂಡಾಟಸಲ್ಲ, ಅರಿವಿಂಗೆ ಹಿರಿದು ಕಿರಿದಿಲ್ಲ, ನಾಯಿಗಳಾರು ಇರುವ ತನಕ, ವದನೆಯರ ಕಡೆಗಣ್ಣ ನೋಟದಿ ನಿಂದಿಹನು ಸ್ಮರನು, ಮೇದಕಬ್ಬಿನ ಸಿಪ್ಪೆ, ಬಡತನವೆಂಬ ಹುಲಿ ಗೂಡಿ ಬರುವಾಗ, ಗರಗಸದೊಡನೆ ಮರಹೋರಿದಂತೆ, ಸುಣ್ಣಕಲ್ಲಿನಲ್ಲಿ ಅಡಗಿ ಸುಡುಗಿಚ್ಚು ತಣ್ಣಗಿದ್ದಂತೆ, ಪರಿಣಾಮವಕ್ಕು ಪದವಕ್ಕು, ಕೈಲಾಸ ನೆರಮನೆಯಕ್ಕು, ಸಾವಿಂಗೆ ಸಮತಿಂಗೆ ಆವುದಂತರವಯ್ಯ? ಈವಂಗೆ ದೇವಂಗೆ ಆವುದಂ

ತರವಯ್ಯ? ಹಂದಿಯೂ ಗಜವೂ ಸರಿಯೆಂಬ, ಕೊಂಡೆಯನು ಕಲಿಯು ಒಂದೆಂಬ, ಮೂರ್ಖರೊಳು ಹೋರಾಟಬೇಡ ಇತ್ಯಾದಿ ಪ್ರಯೋಗ ವೈಚಿತ್ರ ಗಳೂ ಮಾತಿನಕಟ್ಟಾಣಿಗಳೂ ಸರ್ವಜ್ಞನ ಕಾವ್ಯ ಕಲಾಭಿಜ್ಞತೆಗೆ ನಿದರ್ಶನ ಗಳಾಗಿವೆ.

೧. ಬೆಟ್ಟ ಕರ್ಪುರವುರಿದು ಬೊಟ್ಟಿಡಲು ಬೂದಿಲ್ಲ
೨. ಉಣ್ಣೆ ಕೆಚ್ಚಲೊಳಿರ್ದು ಉಣ್ಣದದು ನೊರೆವಾಲ
೩. ತೆಪ್ಪವನು ನಂಬಿದಡೆ ತಪ್ಪದೇ ತಡಿಗಹುದು
೪. ಸೋರುವಾಮನೆಗಿಂತ ದಾರಿಯಾಮರಲೇಸು
೫. ತೋಟದಾ ಬೇಲಿಯನು ದಾಟದವರಾರಣ್ಣ ?
೬. ಸತ್ತುಹೋದರೆ ನಿನಗೆ ಅದೆತ್ತಣದು ಮೋಕ್ಷವೈ ?
೮. ಅದ್ವೈತಿ ತಾನಾಗಿ ಯುದ್ಧವಿನ್ನಾರೊಡನೆ ?
೯. ಅಲ್ಲ ಸಿಹಿಯಾದಂದು ನೆಲ್ಲಿ ಹಣ್ಣಾದಂದು !
೧೦. ಹರ ತನ್ನೊಳಿದ್ದು ಗುರು ತೋರದೆ ತಿಳಿವುದೇ?
೧೧. ಬಳ್ಳಿಗುರುಡರು ಕೂಡಿ ಹಳ್ಳವನು ಬಿದ್ದಂತೆ !
೧೨. ಹೇಳಬಲ್ಲಡೆ ಗುರುವು ಕೇಳಬಲ್ಲಡೆ ಶಿಷ್ಯ
೧೩. ಪರುಷ ಲೋಹವ ಸೋಂಕಿ ವರುಷ ಇರಬಲ್ಲುದೆ ?
೧೪. ಉರಿಯುಂಡ ಕರ್ಪುರದ ಸರುಕು ಮಾರುವುದುಂಟೆ ?
೧೫. ಲಿಂಗ ವಿರಹಿತನಾಗಿ ನುಂಗದಿರು ಏನುವನು
೧೬. ಹುಟ್ಟಿಸುವನಜನೆಂಬ ಕಷ್ಟದಾ ನುಡಿ ಬೇಡ
೧೭. ನಿದ್ರೆಯಿಂ ಸುಖವಿಲ್ಲ, ಉಪದ್ರದಿಂ ಅರಿಯಿಲ್ಲ
೧೮. ಮಾತೆಯಿಂ ಹಿತರಿಲ್ಲ, ಕೋತಿಯಿಂ ಮರುಳಿಲ್ಲ
೧೯. ಜ್ವರಬಂದ ಮನುಜಂಗೆ ನೊರೆವಾಲು ವಿಷವಕ್ಕು !
೨೦. ಜ್ಞಾನದಿಂ ಮೇಲಿಲ್ಲ. ಶ್ವಾನದಿಂ ಕೀಳಿಲ್ಲ
೨೧. ತರಣಿಗಂ ತಿಮಿರದಾವರಣ ತಾನಂಟುವದೆ?
೨೨. ವೃಕ್ಷ ತಾ ಸತ್ತು ಹುಟ್ಟುವುದೆ ಮತ್ತೆ?
೨೩. ಗಗನಕ್ಕೆ ಹೊಗೆ ಹೋಗಿ ಮಿಗೆ ಕೆಳಗೆ ಬಪ್ಪುದೆ ?

೨೪. ಯೋಗಿಗಂ ಹೊಲೆಯಿಲ್ಲ ಸಾಗರಕೆ ನೆಲೆಯಿಲ್ಲ

೨೫. ವಾರಣಾಸಿಗೆ ಹೋಹ ಕಾರಣವದೇನಯ್ಯ?

೨೬. ಸತ್ಯವೆಂಬುದು ತಾನು ಹಿತ್ತಲದ ಗಿಡನೋಡ

೨೭. ಕೋಪವೆಂಬುದು ತಾನು ಪಾಪದಾ ನೆಲಗಟ್ಟು

೨೮. ಹೊಲೆಯಿಲ್ಲ ಅರಿದಂಗೆ,ಬಲವಿಲ್ಲ ಬಡವಂಗೆ

೨೯. ರಾಗವಿದ್ದರೆ ಭೋಗ, ಭೋಗವಿದ್ದರೆ ರಾಗ

೩೦. ಹಮ್ಮು ಎಂಬುವ ಕಿಚ್ಚು ಒಮ್ಮೆಲೇ ನಂದುವದೆ ?

೩೧. ಇಂದ್ರಿಯವ ತಾಳಿದನೆ ಯೋಗಿ

೩೨. ಯೋಗಿಯಾ ಮನದಳವ, ಯೋಗಿಯೇ ತಾಬಲ್ಲ

೩೩. ಕತ್ತೆ ಬೂದಿಲಿ ಹೊರಳಿ ಮತ್ತೆ ಯತಿಯಪ್ಪುದೇ?

೩೪. ಅತ್ತಿಮರ ತಾ ಕಾಯ ಹೊತ್ತಿದ್ದ ತೆರನಂತೆ!

೩೫. ಗಾನವಿದ್ಯೆಯು ಲೇಸು, ಮಾನವತಿ ಸತಿಲೇಸು

೩೬. ತಂತಿವಾದ್ಯವು ಲೇಸು ಮಂತ್ರಿಯಾ ಕೆಳೆಲೇಸು

೩೭. ನಾಡೆಂಬ ದೇಹಕ್ಕೆ, ರೂಢಿಪತಿಯೇ ಪ್ರಾಣ

೩೮. ಜಾತಿ ವೀರರು ಸಾವ ಭೀತಿಗಂಜುಳಿವರೇ ?

೩೯. ರೊಟ್ಟಿಯಿಲ್ಲದ ಊಟ ಹೊಟ್ಟೆಗಿಲ್ಲದ ಕೂಟ

೪೦. ರಾಗವಿಲ್ಲದ ವಿದ್ಯೆ ಭೋಗವಿಲ್ಲದ ನಿದ್ರೆ

೪೧. ಮೇರುವಿಂಗೆಣೆಯಿಲ್ಲ, ಧಾರುಣಿಗೆ ಪಡಿಯಿಲ್ಲ

೪೨. ಕಪ್ಪೆಗಳು ಮೀನುಗಳು ಇಪ್ಪುದದು ತೀರ್ಥವೇ ?

೪೩. ಸತ್ಯರಾನುಡಿತೀರ್ಥ, ನಿತ್ಯರಾ ನಡೆತೀರ್ಥ

೪೪. ಬಲ್ಲವರ ಒಡನಾಟ ಬೆಲ್ಲವನು ಮೆದ್ದಂತೆ

೪೫. ಸಜ್ಜನರು ಸಾಯಲೊಡೆ ನಿರ್ಜನರು ಮರುಗುವರು

೪೬. ದ್ವಿಜರೆಲ್ಲ ಬೂದಿಗೋಡಿಹರು

೪೭. ಸತ್ತುದನು ತಿಂಬಾತ ಎತ್ತಣದ ಹೊಲೆಯನವ ?

೪೮. ಜ್ಯೋತಿ ಇಲ್ಲದ ಮನೆಯು ರೀತಿ ಇಲ್ಲದ ಸತಿಯು

೪೯. ಮುತ್ತೇಕೆ ಮುದುಕಿಗೆ? ತೊತ್ತೇಕೆ ಗುರುಗಳಿಗೆ ?

೫೦. ಮೂರ್ಖನಾ ಹೋರಾಟಸಲ್ಲ
೫೧. ಮೊಸರು ಇಲ್ಲದ ಊಟ, ಕೆಸರು ಇಲ್ಲದ ಗದ್ದೆ
೫೨. ಅಂದವಿಲ್ಲದ ಹೆಣ್ಣು ಚಂದವಿಲ್ಲದ ಮದುವೆ
೫೩. ಹೆಣ್ಣೆಂಬ ನಾಯ ನಂಬುವರೆ ?
೫೪. ಹೆಣ್ಣ ತಾ ನೆಚ್ಚಿರಲು ಹೊಲ್ಲ
೫೫. ದೃಢಮನವು ಬಾಲೆಯರಿಗಿಲ್ಲ
೫೬. ಸೂಳೆಗಂ ಸತ್ಯವಿಲ್ಲೆಂದ
೫೭. ಸೂಳೆಗಂ ಕೀಳುಮೇಲಿಲ್ಲ
೫೮. ಸೂಳೆಯನು ನೆರನಂಬಿ ಸಾಲಕ್ಕೆ ಸಿಲುಕದಿರು
೫೯. ಸಾಲವನು ಕೊಂಬಾಗ ಹಾಲೋಗರುಂಡಂತೆ
೬೦. ಹಸಿಯದಿರೆ ಉಣಬೇಡ ಹಸಿದು ನೀನಿರಬೇಡ
೬೧. ಎಲ್ಲ ಆಶೆಯಬಿಟ್ಟರಿಲ್ಲಿಯೇ ಕೈಲಾಸ
೬೨. ಚಿತ್ತಿಯಾ ಮಳೆ ಹನಿತು ಮುತ್ತಾಗ ಬಲ್ಲುದೆ?
೬೩. ಕುಂಡಲಿಯ ಕಂಡಾತ ಹೆಂಡತಿಗೆ ಒಲಿಯುವನೆ?
೬೪. ಒಡಲೆಂಬ ಹುತ್ತಿಂಗೆ ನುಡಿವ ನಾಲಗೆ ಸರ್ಪ

ಇತ್ಯಾದಿ ಕನ್ನಡ ನುಡಿಗಟ್ಟುಗಳನ್ನೂ, ಲೋಕನೀತಿಗಳನ್ನೂ ಹಿತಮಿತವಾದ,ರೀತಿಯಿಂದ ಹೇಳಿದ ಸರ್ವಜ್ಞನು ಉತ್ತಮ ಕವಿಯೆಂದೂ ಪ್ರಾಸಾದಿಕ ಕವಿಯೆಂದೂ ತಿಳಿಯಬಹುದಲ್ಲವೆ?

ಉತ್ತಮ ಕವಿಗೆ ಒಳ್ಳೆಯ ಶೈಲಿ ಅಳವಟ್ಟಿರಬೇಕೆಂಬುದೊಂದು ಸಿದ್ಧಾಂತವಿದೆ. ಅದನ್ನೇ ಶೈಲಿಯೇಕವಿ(Style is Poet) ಎಂಬ ಆಂಗ್ಲವಾಣಿ ಹೇಳುತ್ತಿದೆ. ಸರ್ವಜ್ಞನು ಹಿತಮಿತ, ಹಾಸ್ಯಪ್ರಿಯತೆ, ಅಚ್ಚಗನ್ನಡ ಶಬ್ದಗಳು, ಉಚಿತ ಪದಪ್ರಯೋಗ, ವಕ್ರೋಕ್ತಿ, ವಿನೂತನತೆ ಮೊದಲಾದ ಲಕ್ಷಣಗಳಿಂದ ಕೂಡಿದ ತನ್ನದೇ ಆದ ಒಂದು ಸುಂದರ ಶೈಲಿಯನ್ನು ಅಳವಡಿಸಿಕೊಂಡು ಕನ್ನಡ ಸಾಹಿತ್ಯದಲ್ಲಿ ಶ್ರೇಷ್ಠ ಕವಿಯೆಂಬ ಕೀರ್ತಿಗಳಿಸಿರುತ್ತಾನೆ.

**ಹಲಸಿನಾ ತೊಳೆಯನ್ನು ತಿಳಿಜೇನು ತುಪ್ಪದಲಿ। ಗಳಗಳನೆ ಅದ್ದಿ ತಿಂದಂತೆ ರುಚಿಕರವು। ಇಳೆಗೆ ಸರ್ವಜ್ಞ ವಚನಗಳು ॥**

# ಸರ್ವಜ್ಞ ವಚನಾಮೃತ

ನಂದಿಯನು ಏರಿದನ । ಚಂದಿರನ ಸೂಡಿದನ ।
ಕಂದನಂ ಬೇಡಿ ನಲಿದಾನು ನೆನವುತ್ತ ।
ಮುಂದೆ ಪೇಳುವೆನು ! ಸರ್ವಜ್ಞ ॥ ೧ ॥

ಮುನ್ನ ಕೈಲಾಸದಲಿ । ಪನ್ನಗಧರನಾಳು ।
ಎನ್ನಯಾ ಪೆಸರು ಪುಷ್ಪದತ್ತನು ಎಂದು ।
ಮನ್ನಿಪರು ದಯದಿ ! ಸರ್ವಜ್ಞ ॥ ೨ ॥

ಎನ್ನ ಮನಸಿಗೆ ನೆನಹ । ಪನ್ನಗಧರ ಕೊಟ್ಟ ।
ಬಿನ್ನಾಣದಿಂದ ಸ್ತುತಿಗೈದು ಪೊಗಳುವೆನು ।
ಚನ್ನಮೂರುತಿಯ ! ಸರ್ವಜ್ಞ ॥ ೩ ॥

ಕಲ್ಲಿನೊಳು ಕಂಭದೊಳು । ಬಳ್ಳದೊಳು ಹಿಕ್ಕೆಯೊಳು ।
ಎಲ್ಲಿ ಭಾವಿಸಿದಡಲ್ಲಿರ್ಪ ಭರಿತನನು ।
ಬಲ್ಲವೇ ನಿಗಮ ! ಸರ್ವಜ್ಞ ॥ ೪ ॥

ಶಿವಪೂಜೆ ಮಾಡಿದಡೆ । ಶಿವನಕೊಂಡಾಡಿದಡೆ ।
ಶಿವನಲ್ಲಿ ನೆನಹು ನೆಲಸಿರ್ದಡಾತಂಗೆ ।
ಶಿವಲೋಕದಿರವು ! ಸರ್ವಜ್ಞ ॥ ೫ ॥

ಕಾಯಕಮಲವೆ ಸಜ್ಜೆ । ಜೀವರತುನವೆ ಲಿಂಗ ।
ಭಾವಪುಷ್ಪದಿಂ ಶಿವಪೂಜೆ ಮಾಡುವನ ।
ದೇವನೆಂದೆಂಬೆ ! ಸರ್ವಜ್ಞ ॥ ೬ ॥

ಒಬ್ಬನಲ್ಲದೆ, ಜಗಕೆ । ಇಬ್ಬರುಂಟೇ ? ಮತ್ತೆ ।
ಒಬ್ಬ ಸರ್ವಜ್ಞ ಕರ್ತನೀಜಗಕೆಲ್ಲ ।
ಒಬ್ಬನೇ ದೈವ ! ಸರ್ವಜ್ಞ ॥ ೭ ॥

ಆ ದೇವ ಈ ದೇವ । ಮಾದೇವನೆನಬೇಡ ।
ಆ ದೇವರ ದೇವ ಭುವನಪ್ರಾಣಿಗಳಿ ।
ಗಾದವನೆ ದೇವ ! ಸರ್ವಜ್ಞ || ೮ ||

ಚಿತ್ರವನು ನವಿಲಿನೊಳು ವಿ । ಚಿತ್ರವನು ಗಗನದೊಳು
ಪತ್ರಪುಷ್ಪಗಳ ವಿವಿಧ ವರ್ಣಗಳಿಂದ ।
ಚಿತ್ರಿಸಿದವರಾರು! ಸರ್ವಜ್ಞ || ೯ ||

ಹಿಡಿಹಣ್ಣು ಕುಂಬಳಕೆ । ಮಿಡಿಹಣ್ಣು ಆಲಕ್ಕೆ ।
ಅಡಿನೆಳಲೊಳಿಪ್ಪ ಪಾಂಥತಾ ಕೆಡದಂತೆ ।
ಮೃಡನು ಮಾಡಿಹನು ! ಸರ್ವಜ್ಞ || ೧೦ ||

ಇಂಗಿನೊಳು ನಾತವನು । ತೆಂಗಿನೊಳಗೆಳೆನೀರ ।
ಭೃಂಗಕೋಕಿಲೆಯ ಕಂಠದೊಳು ಗಾಯನವ ।
ತುಂಬಿದವರಾರು ! ಸರ್ವಜ್ಞ || ೧೧ ||

ಹೆರತನ್ನೊಳಿರ್ದು ಗುರು । ತೋರದೇ ತಿಳಿವುದೇ ? ।
ಮರದೊಳಗೆ ಅಗ್ನಿ ಇರುತಿರ್ದು ತನ್ನ ತಾ ।
ನರಿಯದೇಕೆಂದ ? ಸರ್ವಜ್ಞ || ೧೨ ||

ಜ್ಯೋತಿಯಿಂದಲಿ ನೇತ್ರ। ರಾತ್ರಿಯೊಳು ಕಾಂಬಂತೆ ।
ಸೂತ್ರದಿಂ ಧಾತ ನರಿವಂತೆ ಶಿವನು ಗುರು ।
ನಾಥನಿಂದರಿಗು ! । ಸರ್ವಜ್ಞ || ೧೩ ||

ಊರಿಂಗೆ ದಾರಿಯನು । ಆರು ತೋರಿದೊಡೇನು ? ।
ಸಾರಾಯದಾನಿಜವ ತೋರುವಾ ಗುರುವು ತಾ ।
ನಾರಾದಡೇನು ? ಸರ್ವಜ್ಞ || ೧೪ ||

ಭಕ್ತಿಯಿಲ್ಲದ ಶಿಷ್ಯ । ಗೊತ್ತುಗೆಕೊಟ್ಟುಪದೇಶ ।
ಬತ್ತಿದಾ ಕೆರೆಯ ಬಯಲಲ್ಲಿ ರಾಜಾನ್ನ ।
ಬಿತ್ತಿ ಬೆಳೆದಂತೆ ! ಸರ್ವಜ್ಞ || ೧೫ ||

ಪರುಷಲೋಹವ ಸೋಂಕಿ | ವರುಷವಿರಬಲ್ಲುದೇ ? |
ಪರುಷವೆಂತಂತೆ ಶಿಷ್ಯಂಗೆ ಗುರುವಿನಾ |
ದರುಶನವೆ ಪರುಷ ! ಸರ್ವಜ್ಞ || ೧೬ ||

ಬೆಟ್ಟ ಕರ್ಪುರವುಂದು | ಬೊಟ್ಟಿಡಲು ಬೂದಿಲ್ಲ |
ನೆಟ್ಟನಾ ಗುರುವಿಗೆರೆಗಿದರೆ ಕರ್ಮ ತಾ |
ಸುಟ್ಟು ಹೋಗುವುದು ! ಸರ್ವಜ್ಞ || ೧೭ ||

ಉರಿಯುಂಡ ಕರ್ಪುರವು | ಸರಕುಮಾರುವುದುಂಟೆ ? |
ಗುರುಕರುಣದಿಂದ ನಿಜದೊಳಗೆ ಬೆರೆದಾತ |
ನರಕ ಕೂಡುವನೆ ! ಸರ್ವಜ್ಞ || ೧೮ ||

ಯೋಗಿಗಂ ಕುಲವಿಲ್ಲ | ಸಾಗರಕೆ ನೆಲೆಯಿಲ್ಲ |
ಯೋಗವಟ್ಟಿಗೆಗೆ ಸೆರಗಿಲ್ಲ, ಧರ್ಮಕ್ಕೆ |
ಆಗುಹೋಗಿಲ್ಲ! ಸರ್ವಜ್ಞ || ೧೯ ||

ಲಿಂಗವಿರಹಿತನಾಗಿ | ನುಂಗದಿರು ಏನುವನು |
ತಿಂಗಳಲಿ ಸತ್ತ ಕೋಳಿನಾಯ ಮಾಂಸವನು |
ನುಂಗಿದಂತಕ್ಕು ! ಸರ್ವಜ್ಞ || ೨೦ ||

ಗಂಗೆಯಾ ತಡಿ ಲೇಸು | ಮಂಗಳನ ಬಲ ಲೇಸು |
ಜಂಗಮ ಭಕ್ತನಾ ನಡೆ ಲೇಸು ಶರಣರಾ |
ಸಂಗವೇ ಲೇಸು ! ಸರ್ವಜ್ಞ || ೨೧ ||

ಕೊಲುವ ಕೈಯೊಳು ಪೂಜೆ | ಮೆಲುವ ಬಾಯೊಳು ಮಂತ್ರ |
ಸಲೆಪಾಪವೆರೆದ ಮನದೊಳಗೆ ಪೂಜಿಪನು |
ಹೊಲೆಯನಿಂ ಕಷ್ಟ ! ಸರ್ವಜ್ಞ || ೨೨ ||

ಗಂಗೆ ಗೋದಾವರಿಯು ತುಂಗಭದ್ರೆಯು ಕೃಷ್ಣೆ |
ಹಿಂಗದಲೆ ಮುಳುಗಿ ಫಲವೇನು? ತನ್ನಲಿಹ |
ಲಿಂಗವರಿಯದಲೆ ! ಸರ್ವಜ್ಞ || ೨೩ ||

ಉಣಬಂದ ಜಂಗಮಕೆ । ಉಣಬಡಿಸಲೊಲ್ಲದಲೆ ।
ಉಣದಿಪ್ಪ ಲಿಂಗಕುಣಬಡಿಸಿ ಕೈಮುಗಿವ ।
ಬಣಗುಗಳ ನೋಡ ! ಸರ್ವಜ್ಞ ॥ ೨೪ ॥

ಕನಕದಿಂ ಹಿರಿದಿಲ್ಲ । ದಿನಪನಿಂ ಬೆಳಕಿಲ್ಲ ।
ಬೆನಕನಿಂದಧಿಕ ಗಣವಿಲ್ಲ ; ಪರದೈವ ।
ತ್ರಿಣಯನಿಂದಿಲ್ಲ । ಸರ್ವಜ್ಞ ॥ ೨೫ ॥

ತೆರೆದ ಹಸ್ತವು ಲೇಸು । ಹಿರಿದು ಪೂಜ್ಯವು ಲೇಸು ।
ಅರಸೊಲಿಯೆ ಲೇಸು ಸರ್ವರ್ಕ್ಕು ಶಿವನಿಂಗೆ ।
ಶರಣವೇ ಲೇಸು ! ಸರ್ವಜ್ಞ ॥ ೨೬ ॥

ಮಾತೆಯಿಂ ಹಿತರಿಲ್ಲ । ಕೋತಿಯಿಂ ಮರುಳಿಲ್ಲ ।
ಜ್ಯೋತಿಯಿಂದಧಿಕ ಬೆಳಕಿಲ್ಲ; ದೈವವ ।
ಜಾತನಿಂದಿಲ್ಲ ! ಸರ್ವಜ್ಞ ॥ ೨೭ ॥

ಇಂದ್ರಿಯವ ತೊರೆದಾತ । ವಂದ್ಯನಹ ಜಗಕೆಲ್ಲ ।
ಬಿಂದುವಿನ ಭೇದವರಿದಾಮಹಾತ್ಮನು ।
ಬೆಂದನುಲಿಯಂತೆ ! ಸರ್ವಜ್ಞ ॥ ೨೮ ॥

ವೇದಕ್ಕೆ ಬೆಲೆಯಿಲ್ಲ, ಭೇದಕ್ಕೆ ಹೊಲಬಿಲ್ಲ ।
ಸಾಧಕಗೆ ಆವ ಭಯವಿಲ್ಲ ! ಜ್ಞಾನಿಗಂ
ಭೇದವೇ ಇಲ್ಲ ! ಸರ್ವಜ್ಞ ॥ ೨೯ ॥

ಸುಂದರಾಂಗನೆ ಬಂದು । ಮುಂದೆ ತಾ ನಿಂದಿರಲು ।
ಸುಂದರಿವನರಿದ ಜ್ಞಾನಿತಾನೆಲುವಿನಾ ।
ಹಂದರವ ಕಾಂಬ ! ಸರ್ವಜ್ಞ ॥ ೩೦ ॥

ಜ್ಞಾನಿಗಜ್ಞಾನಿಗಂ । ತಾನೊಂದು ಕುರುಹುಂಟು ।
ಏನೊಂದಮಾತ ನುಡಿದಿಹರೆ ಜ್ಞಾನಿ ತಾ ।
ಮೌನವಾಗಿಹನು ! ಸರ್ವಜ್ಞ ॥ ೩೧ ॥

ಅಕ್ಕರವು ಲೇಖಕ್ಕೆ । ತರ್ಕತಾವಾದಕ್ಕೆ ।
ಮಿಕ್ಕ ಓದುಗಳು ತಿರುಪೆಗೆ, ಮೋಕ್ಷಕ್ಕೆರ ।
ಡಕ್ಕರವೆ ಸಾಕು ! ಸರ್ವಜ್ಞ ॥ ೩೨ ॥

ಮುಂಡೆಬೋಳಿಸಿಕೊಂಡು ತುಂಡುಗಂಬಳಿ ಹೊದೆದು ।
ಹಿಂಡನಗಲಿದಾ ಗಜದಂತೆ ಇಪ್ಪವರ ।
ಕಂಡು ನಂಬುವುದು ! ಸರ್ವಜ್ಞ ॥ ೩೩ ॥

ಅತ್ತಿ ಮರ ತಾ ಕಾಯ । ಹೊತ್ತಿರ್ದ ತೆರನಂತೆ ।
ತತ್ವಭೇದವನು ಅರಿಯದೆಲೆ ರುದ್ರಾಕ್ಷಿ ।
ಹೊತ್ತುಫಲವೇನು ? ಸರ್ವಜ್ಞ ॥ ೩೪ ॥

ಆಡದಲೆ ಕೊಡುವವನು । ರೂಢಿಯೊಳಗುತ್ತಮನು ।
ಆಡಿ ಕೊಡುವವನು ಮಧ್ಯಮನು ಅಧಮತಾ ।
ನಾಡಿಕೊಡದವನು ! ಸರ್ವಜ್ಞ ॥ ೩೫ ॥

ಅನ್ನದಾನಗಳಿಂದ । ಮುನ್ನ ದಾನಗಳಿಲ್ಲ ।
ಅನ್ನಕ್ಕೆ ಮಿಗಿಲು ಇನ್ನಿಲ್ಲ, ಜಗದೊಳಗೆ ।
ಅನ್ನವೇ ಪ್ರಾಣ ! ಸರ್ವಜ್ಞ ॥ ೩೬ ॥

ಗುರುವು ಇಲ್ಲದ ಮಠವು । ಹಿರಿಯರಿಲ್ಲದ ಮನೆಯು ।
ಅರಸಿಲ್ಲದೂರು ಇವು ಮೂರು, ನುಲಿಹರಿದ ।
ಹೊರಸಿನಂತಕ್ಕು ! ಸರ್ವಜ್ಞ ॥ ೩೭ ॥

ನಾಡೆಂಬ ದೇಹಕ್ಕೆ । ರೂಢಿಪತಿಯೇ ಪ್ರಾಣ ।
ನಾಡಳಿಯೆ ರೂಢಿಪತಿ ಕೆಡುಗು, ಅರಸಳಿಯೆ ।
ನಾಡೆಲ್ಲ ಕೆಡುಗು ! ಸರ್ವಜ್ಞ ॥ ೩೮ ॥

ಕುದುರೆಯಿಲ್ಲದ ಅರಸು । ಮಧುರವಿಲ್ಲದ ಹಾಡು ।
ಚದುರೆಯರು ಇರದ ಮನೆವಾರ್ತೆ, ಮುದಿಗೂಬೆ ।
ಯೊದರಿ ಸತ್ತಂತೆ ! ಸರ್ವಜ್ಞ ॥ ೩೯ ॥

ಮೇರುವಿಂಗೆಣೆಯಿಲ್ಲ । ಧಾರಿಣಿಗೆ ಪಡಿಯಿಲ್ಲ ।
ಕಾರುಣಿಕರಪ್ಪ ಹಿರಿಯರಾ ಸಂಗ ತಾ ।
ಆರಿಂದಲಧಿಕ ! ಸರ್ವಜ್ಞ ॥ ४೦ ॥

ನೀಚರಾನೆರೆಯಿಂದ । ಈಚಲದ ಮರಲೇಸು ।
ಈಚಲೊಂದೆಡೆಗೆ । ಉಪಕಾರಿ, ನೀಚತಾ ।
ಈಚಲಿಂ ಕಷ್ಟ ! ಸರ್ವಜ್ಞ ॥ ४೧ ॥

ಆಡುವಾ ಮಕ್ಕಳಿಗೆ । ಊಡುವಾ ತಾಯಂತೆ ।
ಮಾಡಿದಾ ಕರ್ಮ ಬಳಿವಿಡಿದು ಪಿಡಿತಂದು ।
ಊಡುತ್ತಲಿಹುದು ! ಸರ್ವಜ್ಞ ॥ ४೨ ॥

ಕಣ್ಣಿನಿಂದಲೆ ಪುಣ್ಯ । ಕಣ್ಣಿನಿಂದಲೆ ಪಾಪ ।
ಕಣ್ಣಿನಿಂದಿಪವು, ಪರವಕ್ಕು ಲೋಕಕ್ಕೆ ।
ಕಣ್ಣೆ ಕಾರಣವು ! ಸರ್ವಜ್ಞ ॥ ४೩ ॥

ಮೃತ್ಯು ದೇವತೆಯೆತ್ತಿ । ಹೊತ್ತು ತಾನಾಡಿಸುತ ।
ತುತ್ತು ಇದ್ದಲ್ಲಿ ಒಯ್ದುಣಿಸಿ, ಕಡೆಯಲ್ಲಿ ।
ಹೊತ್ತು ಚೆಲ್ಲುವಳು ! ಸರ್ವಜ್ಞ ॥ ४४ ॥

ಮಾತಿನಿಂ ನಗೆ ನುಡಿಯು । ಮಾತಿನಿಂ ಹಗೆ ಕೊಲೆಯು ।
ಮಾತಿನಿಂ ಸರ್ವ ಸಂಪದವು ! ಲೋಕಕ್ಕೆ ।
ಮಾತೆ ಮಾಣಿಕವು ! ಸರ್ವಜ್ಞ ॥ ४೫ ॥

ಎಲ್ಲ। ಬಲ್ಲವರಿಲ್ಲ । ಬಲ್ಲವರು ಬಹಳಿಲ್ಲ ।
ಬಲ್ಲಿದರು ಇದ್ದು ಬಲವಿಲ್ಲ, ಸಾಹಿತ್ಯ ।
ವೆಲ್ಲವರಿಗಿಲ್ಲ । ಸರ್ವಜ್ಞ ॥ ४೬ ॥

ವಿದ್ಯೆ ಕಲಿಸದ ತಂದೆ । ಬುದ್ಧಿ ಕೊಡದಾ ಗುರುವು ।
ಬಿದ್ದಿರಲು ಬಂದು ನೋಡದಾ ತಾಯಿಯು ।
ಶುದ್ಧ ವೈರಿಗಳು । ಸರ್ವಜ್ಞ ॥ ४೭ ॥

ಉಂಡು ನೂರಡಿ ನಡೆದು। ಕೆಂಡಕ್ಕೆ ಕೈಕಾಸಿ।
ಗಂಡು ಮೇಲಾಗಿ ಮಲಗಿದನು ವೈದ್ಯನಾ।
ಮಿಂಡ ಕಾಣಯ್ಯ ಸರ್ವಜ್ಞ ॥ ೪೮ ॥

ಹೆಣ್ಣಿನಿಂದಲಿ ಇಹವು। ಹೆಣ್ಣಿನಿಂದಲಿ ಪರವು।
ಹೆಣ್ಣಿಂದ ಸಕಲ ಸಂಪದವು ಹೆಣ್ಣೊಲ್ಲದಣ್ಣಗಳು।
ಎಲ್ಲಿ? ಸರ್ವಜ್ಞ ॥ ೫೯ ॥

ರಾಗವೇ ಮೂಡಲು। ಯೋಗವೇ ಬಡಗಲು।
ರೋಗವೇ ಶುದ್ಧ ಪಡುವಲವು, ತೆಂಕಲದು।
ಭೋಗದಾ ಬೀಡು! ಸರ್ವಜ್ಞ ॥ ೫೦ ॥

ಮಾತಿಂಗೆ ಮಾತುಗಳು। ಓತು ಸಾಸಿರವುಂಟು।
ಮಾತಾಡಿದಂತೆ ನಡೆದಾತ। ಜಗವನ್ನು
ಕೂತಲ್ಲಿ। ಆಳ್ವ ಸರ್ವಜ್ಞ ॥ ೫೧ ॥

ಸೊಡರೆಣ್ಣೆ ತೀರಿದೊಡೆ। ಕೊಡದಿಂದ ಲೆರೆವರೆ।
ಕೊಡಬೇಡ ಕೊಡದೆ ಇರಬೇಡ। ಧರ್ಮವನು।
ಬಿಡಬೇಡ ಕೇಳು ಸರ್ವಜ್ಞ ॥ ೫೨ ॥

ಬಡವನಾಹೆಂಡತಿಯು। ಕಡುಚಲುವೆಯಾದರೆ।
ನಡುಬೀದಿಯೊಳಗೆ। ಬಿತ್ತಿದಾದವನವನು।
ಮುಡಿಯದವರಾರು ? ಸರ್ವಜ್ಞ ॥ ೫೩ ॥

ಕಲ್ಲರಳಿ ಹೂವಾಗಿ। ಎಲ್ಲರಿಗೆ ಬೇಕಾಗಿ।
ಮಲ್ಲಿಕಾರ್ಜುನನ ಶಿಖರಕ್ಕೆ। ಬೆಳಕಾಗಿ
ಬಲ್ಲವರು ಹೇಳಿ ಸರ್ವಜ್ಞ ॥ ೫೪ ॥

ಉರಿಬಂದು ಬೇಲಿಯನು। ಹರಿದು ಹೊರಟುದ ಕಂಡೆ।
ಅರಿಯದಿದು ಬಗೆಗೆ। ಕವಿಕುಲದ ಶ್ರೇಷ್ಠರು
ಗಳರಿದರಿದ್ದಪೇಳಿ ಸರ್ವಜ್ಞ ॥ ೫೫ ॥

ಕಾಲಿಲ್ಲದಲೆ ಹರಿಗು | ತೋಳಿಲ್ಲದಲೆ ಹೊರಗು |
ನಾಲಗಿಲ್ಲದಲೆ ಉಲಿಯುವುದು ಕವಿಕುಲದ|
ಮೇಲುಹಳು ಪೇಳಿ ! ಸರ್ವಜ್ಞ || ೫೬ ||

ನೀತಿ ಯಿಲ್ಲದ ರಾಜ | ಸುಗುಣಿಯಿಲ್ಲದ ಮಂತ್ರಿ |
ತ್ಯಾಗವಿಲ್ಲದ ದೊರೆತನ ಈ ಮೂರು |
ಹಾಳೂರು ಗೂಬೆಯಂತಕ್ಕು ! ಸವಜ್ಞ || ೫೭ ||

ನಂಬಿದ●ತಿರಬೇಕು | ನಂಬದಲೆ ಇರಬೇಕು |
ಇಂಬರಿದು ಎಚ್ಚರಿರಬೇಕು | ಹೆಣ್ಣನ್ನು
ನಂಬಿದವ ಕೆಟ್ಟ ಸರ್ವಜ್ಞ || ೫೮ ||

ನಾರಿ ಪರರುಪಕಾರಿ | ನಾರಿಸ್ವರ್ಗಕೆ ದಾರಿ |
ನಾರಿಸಕಲರಿಗೆ ಹಿತಕಾರಿ| ಮುನಿದರೆ |
ನಾರಿಯೇ ಮಾರಿ ! ಸರ್ವಜ್ಞ || ೫೯ ||

ಒಲ್ಲದವಳೊಡನಾಡಿ | ಚೆಲ್ಲನಾಡುವಹೆಗ್ಗ |
ಕಲ್ಲಪುತ್ತಳಿಯ ಬಿಗಿದಪ್ಪಿಚುಂಬಿಸಲು |
ಹಲ್ಲು ಹೋದಂತೆ ! ಸರ್ವಜ್ಞ || ೬೦ ||

ಕಣ್ಣು ನಾಲಗೆ ಮನವು | ತನ್ನವೆಂದೆನ ಬೇಡ |
ಅನ್ಯರು ಕೊಂದರೆನಬೇಡ | ಅವುಮೂರು
ತನ್ನನೇ ಕೊಲುಗು | ಸರ್ವಜ್ಞ || ೬೧ ||

ವಚನದೊಳಗೆಲ್ಲರೂ ಶುಚಿ ವೀರ ಸಾಧುಗಳು|
ಕುಚ ಶಸ್ತ್ರ ಹೇಮ ಸೋಂಕಿದೊಡೆ | ಮನಸಿನೊಳ
ಗಚಲದವರಾರು? ಸರ್ವಜ್ಞ || ೬೨ ||

★

ಅನುಬಂಧ ೧.

# ಸರ್ವಜ್ಞನನ್ನು ಕುರಿತು
## ಮಾನ್ಯರ ಅಭಿಪ್ರಾಯಗಳು

"ಸರ್ವಜ್ಞ, ತ್ರಿಪದಿ ರೂಪವಾದ ಒಂದು ಗ್ರಂಥ ಬರೆದಿದ್ದಾನೆ. ಇವನು ವೀರಶೈವ ಕವಿ. ಇದಕ್ಕೆ 'ಸರ್ವಜ್ಞಮೂರ್ತಿ ವಚನ' ಎಂದು ಹೆಸರು. ಇವನು ಸಂಪಾದನೆಯ ಸಿದ್ಧವೀರಾಚಾರ್ಯನ ಕಾಲಕ್ಕೆ (ಸುಮಾರು ೧೬೦೦) ವರ್ಷಗಳ ಹಿಂದೆ ಇದ್ದಿರಬೇಕು. ಇವನ ಗ್ರಂಥವು ಪದ್ಧತಿಗಳಾಗಿ ವಿಭಾಗಿಸಲ್ಪಟ್ಟಿದೆ. ಕೆಲವು ಪ್ರತಿಗಳಲ್ಲಿ ೨೭ ಪದ್ಧತಿಗಳೂ, ಕೆಲವಲ್ಲಿ ೨೯ ಪದ್ಧತಿಗಳೂ ಇವೆ. ಈತನ ಗ್ರಂಥದಲ್ಲಿ ಧರ್ಮ, ನೀತಿ, ಜ್ಞಾನ, ಜ್ಯೋತಿಷ ಮುಂತಾದ ಹಲವು ವಿಷಯಗಳು ಪ್ರತಿಪಾದಿಸಲ್ಪಟ್ಟಿವೆ. ಆರಂಭದಲ್ಲಿ ಶಿವಸ್ತುತಿ ಇದೆ. ಈತನು ಬಸವನ ಕಾಲಜ್ಞಾನವನ್ನೇ ಅನುಸರಿಸಿರುವಂತೆ ತಿಳಿಯುತ್ತದೆ. ಇದರಲ್ಲಿ ೪೫೭ ಕಾಲಜ್ಞಾನಗಳಿವೆ"

**—ಕನ್ನಡ ಕವಿಚರಿತ್ರೆ**

(ಭಾಗ: ೨. ಪುಟ ೫೩೨–೩.)

"ಧರ್ಮ ಗ್ರಂಥವನ್ನು, ಮಾತನಾಡುವ ಭಾಷೆಯಲ್ಲಿ ಬರೆದು ಆಚಾರ್ಯರ ಬಂಧನದಿಂದ ಬಿಡಿಸಿ ಲೋಕಕ್ಕೆ ವಿಚಾರ ಸ್ವಾತಂತ್ರ್ಯವನ್ನು ತಂದುಕೊಟ್ಟ ಲೂಥರನು ಪ್ರೊಟೆಸ್ಟಾಂಟ್ ಧರ್ಮದ ಪುನುರುತ್ಥಾಪಕನೆನಿಸಿಕೊಂಡರೆ, ಇವನಿಗೆ ಪೂರ್ವದಲ್ಲಿ ಬದುಕಿ ಇವನಿಗೆ ಸದೃಶವಾದ ಕಾರ್ಯವನ್ನು ನಡೆಸಿದ ಬಸವೇಶ್ವರನನ್ನು ದಕ್ಷಿಣ ಹಿಂದೂಸ್ಥಾನದ ಪ್ರೊಟೆಸ್ಟಾಂಟ್ ಧರ್ಮವೆನಿಸಿಕೊಳ್ಳುವ ವೀರಶೈವ ಧರ್ಮದ ಪುನಃಸ್ಥಾಪಕನೆಂದು ಹೇಳಿಕೊಳ್ಳಬಹುದು. ಬಸವೇಶ್ವರನು ಲೂಥರನಂತಾದರೆ ಧರ್ಮ ಪ್ರಸಾರಣೆಗಾಗಿ ದೇಶವನ್ನೆಲ್ಲಾ ಸಂಚರಿಸಿ, ಅನೇಕ ಕಷ್ಟಗಳನ್ನು ಸಹಿಸಿ ಅದರ ತತ್ವಗಳನ್ನು ಬಿಡಿಸಲೆತ್ನಿಸಿದ ಸರ್ವಜ್ಞನು ಇಂತಹ ಪ್ರೊಟೆಸ್ಟಾಂಟ್ ಧರ್ಮದ (ವೀರಶೈವದ) ಮೋಲ್ತರದ 'ಮಿಶನರಿ' ಎಂದು ನಿಸ್ಸಂದೇಹವಾಗಿ ಒಪ್ಪಿಕೊಳ್ಳಬೇಕು. \ ಬೇರೊಂದು ರೀತಿಯಿಂದ ದೃಷ್ಟಿಸಿದರೆ ಖಂಡನೆಯ ದೆಸೆಯಿಂದ ಸಿಂಹನಾದ ಮಾಡಿದ ಇವನನ್ನು ಕರ್ಣಾಟಕದ 'ಮೃಗೇಂದ್ರ'ನೆಂದೂ, ಕನ್ನಡ ಗ್ರಂಥಪುಷ್ಪಗಳ ಸಾರವನ್ನು ಸಂಗ್ರಹಿ

ಸಿರುವುದರಿಂದ 'ಕರ್ಣಾಟಕದ ಜೇನುದುಂಬಿ' ಎಂದೂ, ಸಂಗ್ರಹಿಸಿದುದನ್ನು ಸೊಗಸಾದ ಕನ್ನಡದಲ್ಲಿ ಹೆಣೆದು ಕನ್ನಡಿಗರು ಎಚ್ಚರಗೊಳ್ಳುವಂತೆ ಹಾಡಿರುವುದರಿಂದ 'ಕರ್ಣಾಟಕದ ಕೋಕಿಲೆ' ಎಂದೂ ಕರೆಯಬಹುದು"

**ಶ್ರೀ ಚನ್ನಪ್ಪ ಉತ್ತಂಗಿ**
"ಸರ್ವಜ್ಞ ವಚನಗಳು"
(ವಿಶೇಷಾವೃತ್ತಿ, ಪ್ರಸ್ತಾವನೆ ಪುಟ ೧೦೭)

"ಜನಮನದ ಕತ್ತಲಲ್ಲಿ ಸರ್ವಜ್ಞನ ಕಿರುನುಡಿಯು ಮಿಂಚು ಹೊಡೆಯುವುದು, ಎಚ್ಚರಿಸುವುದು, ಎಬ್ಬಿಸುವುದು.) ಆರೈದು ನೋಡಲು, ನುಡಿಯಲು, ನಡೆಯಲು ಪ್ರಚೋದಿಸುವುದು. ಇಂತಹವರ ವಾಣಿಯಲ್ಲಿರುವ ಶಕ್ತಿಗೆ ಅವರ ಆಂತರಿಕ ಜೀವನವೇ ಕಾರಣ........ಹಾಸ್ಯ, ವಿನೋದದಿಂದ ಜನರಲ್ಲಿ ವಿವೇಕವನ್ನೆಚ್ಚರಿಸಿ ಒಳ್ಳಿಯ ಹಾದಿಯಲ್ಲಿ ಹೆಜ್ಜೆಯಿಡುವಂತೆ ಮಾಡುವ ಇವನಂಥ (ಸರ್ವಜ್ಞನಂಥ) ಮಂತ್ರಶಕ್ತಿಯುಳ್ಳವರು ವಿರಳ.

ಧರ್ಮ, ಅರ್ಥ, ಕಾಮಗಳಲ್ಲಿ ಹೇಗೆ ವಿಮರ್ಶಿಸಿ ನಡೆಯಬೇಕೆಂಬುದನ್ನು ಸರ್ವಜ್ಞ ವಚನಗಳು ಹೇಳುವುವು. ಈ ವಿಮರ್ಶೆಯ ಹಿಂದೆ ಒಬ್ಬ ನಿಸ್ಪೃಹಮೂರ್ತಿಯು ಮತ್ತೆ ಮತ್ತೆ ಎದ್ದು ಮೂಡುವನು. ಜನಕ್ಕೆ ಅಂಜದೆ, ನಾಲಗೆಗೆ ಸೋಲದೆ, ದೇವನಲ್ಲಿ ನಂಬುಗೆಯನ್ನು ಬಿಡದೆ, ದೈವಕ್ಕೆ ಮಣಿಯದೆ, 'ಕಣ್ಣು ನಾಲಗೆ ಮನ' ತನ್ನವಲ್ಲ ಪರಶಿವನವೆಂದರಿದು, ತನ್ನ ಅನುಭವವನ್ನು ಸಂತೆಯಲ್ಲಿ ಮಾರದೆ, ಕೇಳದ ಹೊರತು ಹೇಳದೆ, ಕಂಡುದನ್ನು ಮರೆಮಾಚದೆ ಧಾರುಣಿಯೆಲ್ಲ ಕುಲದೈವವಾಗಿ ಓನಮನದ ಬಿರುನುಡಿಯಿಂದಲ್ಲ, ಸತ್ಯನಿಷ್ಠುರತೆಯಿಂದ, ಚುನ್ನಮಾಡುವ ಬುದ್ಧಿಯಿಂದಲ್ಲ; ಜ್ಞಾನಿ ಸಂಸಾರಿಯು ನಗುವಂತೆ ಲೋಕೋತ್ತರ ಜೀವಿಗಳ ಮೃದುತ್ವ, ಕಾಠಿನ್ಯಗಳ ಬೆರಸಿ ವಚನಗಳನ್ನು ಹಾಡಿದ್ದಾನೆ ಸರ್ವಜ್ಞನು"

**—ಶ್ರೀ ದ. ರಾ. ಬೇಂದ್ರೆ,**
"ಸರ್ವಜ್ಞ ಸಂದೇಶ" ಮುನ್ನುಡಿ.

"ಸರ್ವಜ್ಞನು ವಿಪ್ಲವಮೂರ್ತಿ, ಸಿಡಿಲುಣಿ. ಅವನೊಂದು ಜ್ವಾಲಾಮುಖಿ, ಆ ಮುಖದಿಂದ ಹೊರಬೀಳುವುದೆಲ್ಲ ವಚನಗಳಲ್ಲ, ರಚನೆಗಳು, ವಿದ್ಯುತ್ಕಣಗಳು, ಸರ್ವಜ್ಞನು ವಚನಗಳನ್ನು ಫಿರಂಗಿಯ ಗುಂಡುಗಳಂತೆ ಹಾರಿಸುತ್ತ ಹೋಗುತ್ತಾನೆ. ಆದರೆ ಅವು ಮಾನವನನ್ನು ನೆಲಕ್ಕೆ ಉರುಳಿಸುವುದಿಲ್ಲ, ಅವನನ್ನು ಮುಗಿಲಿಗೇರಿಸು

ಪ್ರವು ಸರ್ವಜ್ಞನ ನುಡಿಯು ಕಿವಿಗೆ ಇಂಪು, ನುಡಿಯೊಳಗಿನನಾದ ಜೀವಕ್ಕೆ ಸೊಂಪು ಆ ವಚನಗಳು ಶಾಸ್ತ್ರೋಕ್ತವಾಗಿ ಸಿದ್ಧವಾದ ಭಕ್ಷ್ಯಭೋಜ್ಯಗಳಲ್ಲ ಮಾನವಪ್ರೇಮಿಯಾದ ಸಿದ್ಧಪುರುಷನ ಇಚ್ಛಾಪಾತ್ರದಿಂದ ಹೊರಬಿದ್ದ ಅಮೃತದ ತುತ್ತುಗಳೇ ಆ ವಚನ ಬಿಂದುಗಳು. ಸರ್ವಜ್ಞನದು ಗಿಳಿಯೋದಲ್ಲ, ಕಲಿತ ಪಾಠವಲ್ಲ, ತಿದ್ದಿ ತೀರಿಸಿದ ವಚನಗಳಲ್ಲ, ಕುಸುರಿಯ ಕೆಲಸವೇ ಅವನಲ್ಲಿಲ್ಲ. ಕುಸ್ತಿಯಾಟದಲ್ಲಿ ಅವನಿಗೆ ರುಚಿಯಿಲ್ಲ. ಎಲ್ಲಾ ಕತ್ತಿಯುವರಸೆ, ಆ ಕತ್ತಿಗೆ ಅಲಗು ಎರಡು, ಬಹು ತೀಕ್ಷ್ಣ, ಅವನ ಕೂಗು ಕುರಿಯ ಕೂಗಲ್ಲ, ಸಿಂಹನಾದ ಇಚ್ಛಕದ ನುಡಿಯು ದೂರ, ಮುಚ್ಚರದ ಮಾತಿಲ್ಲ.”

**—ಶ್ರೀ ತಿರುಮಲೆ ತಾತಾಚಾರ್ಯ ಶರ್ಮ,**

“ಸರ್ವಜ್ಞ ವಚನಗಳು”-(ಜೇಬಿನಾವೃತ್ತಿ,) ಮುನ್ನುಡಿ. ಪುಟ ೫-೬.

“ಸರ್ವಜ್ಞ ವಚನಗಳೆಂದರೆ ಅದೊಂದು ಚಿಕ್ಕ ವಿಶ್ವಕೋಶ. ಕನ್ನಡನಾಡಿನ ಜನಸಾಮಾನ್ಯರಿಗೆ ಕಾಲಕ್ಕೆ ಅವಶ್ಯವಾದ ಎಲ್ಲ ಸಂಗತಿಗಳ ಜ್ಞಾನವು ಕೆಲಮಟ್ಟಿಗೆ ಅವುಗಳಲ್ಲಿ ಸಂಕಲಿತವಾಗಿವೆ. ಸರ್ವಜ್ಞ ವಚನಗಳನ್ನು ಮನನಮಾಡಿದ ಸಾಮಾನ್ಯ ಮನುಷ್ಯನಿಗೆ ಇನ್ನೇತರ ಆಗತ್ಯವೆನಿಸುವುದಿಲ್ಲ, ಅದರಿಂದುಂಟಾದ ಅರಿವಿನ ಬೆಳಕಿನಲ್ಲಿ ಯಾವನೊಬ್ಬನು ತನ್ನ ಜೀವನ ಸಂಸಾರವನ್ನು ಈಗಲೂ ಸುಖವಾಗಿ ಸಾಗಿಸಬಹುದು”

**—ಶ್ರೀ ಮನೋಹರರಾವ್ ದೇಶಪಾಂಡೆ ಎಂ.ಎ.,** (ಚಿಚ್ಚಕೋರ.)

“ಸರ್ವಜ್ಞ ವಚನಗಳು”-ಜೇಬಿನಾವೃತ್ತಿ. ಪ್ರಸಾವನೆ

“ಸರ್ವಜ್ಞನು ಕನ್ನಡಿಗರ ‘ತಿರುವಳ್ಳುವರ್’, ಕನ್ನಡಿಗರ ‘ವೇಮನ’ ಅವರಂತೆ ಇವನಿಗೂ ನೀತಿಸಾಹಿತ್ಯದಲ್ಲಿ ಉಚ್ಚಸ್ಥಾನವು ಸಲ್ಲುತ್ತದೆ. ಸರ್ವಜ್ಞನ ಕಾವ್ಯ ಒಟ್ಟಿನ ಮೇಲೆ ನೀತಿಕಾವ್ಯ.........................ಸರ್ವಜ್ಞನು ಜನತೆಯ ಕವಿ. ಅವನ ತ್ರಿಪದಿಯು ಜನತೆಯ ಪದ್ಯ. ಹಾಗೆಯೇ ಅದರ ಭಾಷೆಯು ಜನರ ಭಾಷೆಯು. ವ್ಯಾಖ್ಯಾನಗಳನ್ನು ನಿಘಂಟುಗಳನ್ನು ಇಟ್ಟುಕೊಂಡು ಇದನ್ನು ಅರ್ಥಮಾಡಿಕೊಳ್ಳಬೇಕಾಗಿಲ್ಲ. ಎಂಥ ಕಷ್ಟವಾದ ಅಭಿಪ್ರಾಯಗಳನ್ನಾದರೂ ಅವನು ಸುಲಭವಾದ ಮಾತುಗಳಲ್ಲಿ ಖಚಿತವಾಗಿ ಚಿತ್ರಿಸುತ್ತಾನೆ. ಅವನು ಹೇಳುವ ಸಂಗತಿಗಳೂ ಕೊಡುವ ಹೋಲಿಕೆಗಳೂ ಹಾಗೆಯೇ ಎಲ್ಲರಿಗೂ ಪರಿಚಿತವಾದವುಗಳು.”

**—ಪ್ರೊ॥ ಎ. ಆರ್. ಕೃಷ್ಣಶಾಸ್ತ್ರೀ ಎಂ. ಎ.,**

‘ಸರ್ವಜ್ಞಕವಿ’ ಪುಟ. ೫೩-೫೯

"ಕನ್ನಡಿಗರ ಜೀವನವನ್ನು ಹಸನು ಮಾಡಬೇಕು. ಅವರಲ್ಲಿ ಪರಂಪರಾಗತವಾಗಿ ನೆಲಸಿರುವ ಮೂಢನಂಬಿಕೆಗಳನ್ನು ಹೋಗಲಾಡಿಸಿ ಅವರ ಮನಸ್ಸನ್ನು ಶುಚಿಮಾಡಿ ಪರಮಾತ್ಮನೆಡೆಗೆ ತಿರುಗಿಸಬೇಕೆಂಬ ಆಸೆ ಸರ್ವಜ್ಞನದು. ಧರ್ಮದ ಬಗ್ಗೆ ಅವನು ತಳೆದಿದ್ದ ಉದಾರ ದೃಷ್ಟಿ, ಹೊಲೆಯರೇ ಮೊದಲಾದ, ಸಮಾಜ ಬಾಹಿರರ ಬಗ್ಗೆ ತಳೆದಿದ್ದ ಅಪಾರ ಕರುಣೆ, ಮಾನವ ಪ್ರೇಮ, ಆತ್ಮಜ್ಞಾನ, ಅನುಭಾವಗಳಿಗೆ ಕೊಟ್ಟಿದ್ದ ಪ್ರಾಶಸ್ತ್ಯ ಸರ್ವಜ್ಞನನ್ನು ಸ್ಥಿತಪ್ರಜ್ಞನಾದ ಮಹಾನುಭಾವರ ಪಜ್ತಿಗೆ ಸೇರಿಸುತ್ತವೆ.

ಸರ್ವಜ್ಞನಂಥವರು ಕನ್ನಡ ಪ್ರಪಂಚದಲ್ಲಿ ವಿರಳ. ಏತಕ್ಕೆ ಪ್ರಪಂಚದಲ್ಲಿಯೇ ವಿರಳ. ಗಾವಿಲಭುವನದ ಭಾಗ್ಯದಿಂದ ಇಂತಹ ಸೀಮಾಪುರುಷರು ಹುಟ್ಟುತ್ತಾರೆ.

ಸರ್ವಜ್ಞನ ಮಾತು ಚದುರರ ಮೆಚ್ಚು, ಭಾವುಕರ ಕೈಪಿಡಿ, ಜಾಣರಬಯಕೆ, ಸತ್ಕಲಾವಿದರ ವಿಲಾಸ, ಅಕ್ಕರಿಗರ ಆಭರಣ, ಬುಧರಿಚ್ಛೆಯಚ್ಚು. ವೀರರ ಕಣೆ, ಕೊರ್ತೆ ಕೊರಿಸಿದ ನೆಲ್ಲಳ ಮೆಯ್ಸಿರಿ ಎಂದು ಚನ್ನಮಲ್ಲಿಕಾರ್ಜುನನ ಮಾತಿನಲ್ಲಿ ಪ್ರತ್ಯಪೂರ್ವಕವಾಗಿ ಹೇಳಬಹುದು."

**ಶ್ರೀ ಅ. ನ. ಕೃಷ್ಣರಾಯರು**

"ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ" ಪುಟ. ೨೦೪–೨೦೫.

"ಪ್ರತಿಫಲಾಪೇಕ್ಷೆಯಿಲ್ಲದೆ" ಪರರನ್ನು ಮೆಚ್ಚಿಸುವುದಕ್ಕಲ್ಲದೆ, ತಾವು ಮಾಡಿದ ಕೆಲಸಕ್ಕೆ ಮುಂದಿನಕಾಲದಲ್ಲಿ ಉಂಟಾಗಬಹುದಾದ ಬೆಲೆಯನ್ನು ಲೆಕ್ಕಿಸದೆ ಕೇವಲ ನಾಲಗೆಯ ತೀಟೆಯನ್ನು ತೀರಿಸಿಕೊಳ್ಳುವುದಕ್ಕಾಗಿಯೇ ಕವಿತೆಯನ್ನು ನುಡಿಯುವವರು ಯಾವ ಸಾಹಿತ್ಯದಲ್ಲಿಯಾದರೂ ಬಹಳ ಮಂದಿ ಕಾಣಬಾರದು. ಕವಿತೆಯನ್ನು ಇಚ್ಛೆಗೆ ಬಂದಂತೆ ಹೇಳುವುದರಿಂದ ಉಂಟಾಗುವ ಮಾನಸಿಕಾನಂದವು ಫಲಾಪೇಕ್ಷೆಯಿಂದ 'ಒಬ್ಬರಿಚ್ಛೆಗೆ' ನುಡಿವುದರಿಂದುಂಟಾಗುವ ಸೌಖ್ಯಕ್ಕಿಂತಲೂ ಸಾವಿರಪಾಲು ಮೇಲೆಂದೂ ಎಣೆಯಿಲ್ಲದುದೆಂದೂ ನಂಬದವರು ತೀರ ಕಡಮೆ. ಹಿಂದಿನ ಕವಿಸಂಕೇತಗಳು, ಆಶ್ರಯದಾತರಾದ ಅರಸರ ಮತ ತಂದೆ-ತಾಯಿಗಳ ಮತ ಮುಂತಾದುವುಗಳ ಗಾಳಿಯಲ್ಲದೆ ಸ್ವಾತಂತ್ರ್ಯದ ಗಾಳಿಯನ್ನು ಕುಡಿದರಿಯದ ನಮ್ಮ ಕವಿಗಳು ಕನ್ನಡ ಸಾಹಿತ್ಯವನ್ನು ನಾಲ್ಕು ಕಡೆಯಲ್ಲಿಯೂ ಬಂಧಿಸಿದರು. ಆದರೆ ಈ ಮುರಿ ಕಟ್ಟುಗಳನ್ನು ಹರಿದುಕೊಂಡು ಹೊರಬಿದ್ದ ನಮ್ಮ ಭಾಗ್ಯವಶದಿಂದ ಅಲ್ಲಲ್ಲಿ ಕಾಣುವರು. ಪುರಂದರದಾಸ, ಕನಕದಾಸ, ಸೋಮೇಶ್ವರ ಮೊದಲಾದವರು ಉದಾಹರಣೆಗೆ ಸಲ್ಲುವರು ಬಹುಮಟ್ಟಿಗೆ ನೀತಿಬೋಧೆಗೆ ಮೊದಲಿಟ್ಟ ಶತಕಕರ್ತರು ಬಹಳ ಮಟ್ಟಿಗೆ ಈ ಗುಂಪಿಗೆ ಸೇರಿದವರೇ.

ತೆಲುಗು ವಾಙ್ಮಯದಲ್ಲಿ ವೇಮನನೆಂಬ ಕವಿಯೊಬ್ಬನಿರುವನು. ಅವನು ಎಲ್ಲ ರೀತಿಗಳಲ್ಲಿಯೂ ಸರ್ವಜ್ಞನನ್ನು ಅನುಸರಿಸುವವನೇ. ಸರ್ವಜ್ಞನ ಸುಗುಣ ದುರ್ಗುಣಗಳೆಲ್ಲವೂ ಅವನಲ್ಲಿವೆ. ಇವರು ಸಮಕಾಲೀನರೆಂದು ನಮ್ಮವರ ಬಳಕೆ. ಇದಕ್ಕನುಸಾರವಾಗಿ 'ಸರ್ವಜ್ಞ ವೇಮನ ಸಂವಾದ' ಎಂಬ ಹೆಸರಿನಿಂದ ಒಂದೇ ಅರ್ಥವುಳ್ಳ ಇಬ್ಬರ ಪದ್ಯಗಳನ್ನು ಕ್ರಮವಾಗಿ ಕನ್ನಡದಲ್ಲಿ ಪ್ರಕಟಿಸಿದ ಪುಸ್ತಕವೊಂದಿದೆ.

ಸರ್ವಜ್ಞ ಪದಗಳೆಲ್ಲವೂ ತ್ರಿಪದಿಯಲ್ಲಿವೆ. ಬಹುಶಃ ತ್ರಿಪದಿಗಳು ಸರ್ವಜ್ಞನಿಂದಲೇ ಹುಟ್ಟಿರಬಹುದೆಂದು ತೋರುತ್ತದೆ. (?) ಸರ್ವಜ್ಞನ ತ್ರಿಪದಿಯ ಪ್ರೌಢಿಮೆಯು ಲಕ್ಷ್ಮೀಶನ ವಾರ್ಧಕಷಟ್ಪದಿಗೂ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. (ಇದರ ಜೊತೆಗೆ ಚಿತ್ರವಿದ್ಯಾಕುಶಲನು ಒಂದು ಮೂಲೆಯಲ್ಲಿ ತನ್ನ ಹೆಸರನ್ನು ಬರೆದು ಚಿತ್ರವನ್ನು ಮುಗಿಸುವಂತೆ ಕೊನೆಯ ಪಾದದ ಕಡೆಯಲ್ಲಿ ತನ್ನ ಹೆಸರಿನೊಡನೆ ಕವಿ ಪದ್ಯವನ್ನು ಮುಗಿಸುವುದು ತ್ರಿಪದಿಗೆ ಒಂದು ತೆರನಾದ ಬಣ್ಣಕೊಡುತ್ತದೆ.) ಕನ್ನಡದಲ್ಲಿ ಎಲ್ಲಿಯೂ ಇಲ್ಲದ ಯತಿಯು ಸರ್ವಜ್ಞನ ಜೀವನ. ಮುದ್ದುಮುದ್ದಾದ ಸಣ್ಣ-ಸಣ್ಣ ಪದಗಳು ಒಂದು ನಾಲ್ಕೈದು ಅಕ್ಷರಗಳಿಗಿಂತ ಹೆಚ್ಚಾಗಿಲ್ಲ. ಯತಿಸ್ಥಾನಕ್ಕೆ ಸರಿಯಾಗಿ ಬಹಳ ಕಡೆ ಭಾವವು ಕತ್ತರಿಸಲ್ಪಟ್ಟಂತೆ ತುಂಡಾಗಿ ಬೀಳುವುದು. (ಹೃದಯದ ಭಾವಸಂಯೋಜನೆಯೂ ಬಾಯಿ ಮಾತುಗಳ ರಚನೆಯೂ ಉಚ್ಚಾರಣೆಯೂ ಒಂದೇ ಕಾಲದಲ್ಲಿ ಒಂದರೊಡನೆಯೊಂದು ಮಾತಾಡಿಕೊಂಡು ಹೇಳಿಸುತ್ತಿವೆಯೋ ಎಂದು ಆಶ್ಚರ್ಯಪಡಿಸಬಲ್ಲ ಪದ್ಯರತ್ನಗಳು ಸರ್ವಜ್ಞನಲ್ಲಿ ಬಹಳವಿವೆ.) ಇವನಲ್ಲಿ ಮಹಾಕವಿಗಳಿಗೆ ಬೇಕಾಗುವ ರಚನಾ ಸೌಮನಸ್ಯ, ವಾಗ್ಮಿತ್ವ ಮೊದಲಾದ ಗುಣಗಳು ಬೇಕಾದಷ್ಟಿವೆ. ಕನ್ನಡ ವಾಙ್ಮಯದಲ್ಲಿ ಇಷ್ಟರ ಕವಿಯೇ ಇಲ್ಲವೆಂದು ಕಂಠೋಕ್ತವಾಗಿ ಹೇಳಬಹುದು."

**ಶ್ರೀ ಸಿದ್ಧವ್ವನಹಳ್ಳಿ ಕೃಷ್ಣಶರ್ಮ**
(ಕ. ಸಾ. ಪ. ಪತ್ರಿಕೆ. ೧೯೩೩ನೇ ಜುಲೈ ಸಂಚಿಕೆ.)

"ಸರ್ವಜ್ಞನು ಕನ್ನಡ ಭಾಷೆಯಲ್ಲಿ ಒಬ್ಬ ಮಹತ್ವದ ಕವಿ. ಇವನಷ್ಟು ಲೋಕಪ್ರಿಯ ಕವಿಯು ಕನ್ನಡದಲ್ಲಿ ಯಾರೂ ಆಗಿ ಹೋಗಿಲ್ಲೆಂದು ಹೇಳಿದರೆ ತಪ್ಪಾಗದು. ಇವನಲ್ಲಿರುವದೊಂದು ವಿಶೇಷತರವಾದ ಸಂಗತಿಯೇನಂದರೆ ಇವನು ತನ್ನ ಕವಿತೆಗಳಲ್ಲಿ ನೈತಿಕ ಹಾಗೂ ಸಾಮಾಜಿಕ ವಿಷಯಗಳನ್ನು ಹೆಚ್ಚಾಗಿ ನಿರೂಪಿಸಿರುವನಲ್ಲದೆ ಅವುಗಳನ್ನು ವ್ಯಾವಹಾರಿಕರೀತಿಯಿಂದ ಬಹು ಸೊಗಸಾದ ಭಾಷೆಯಲ್ಲಿ ಎಲ್ಲರಿಗೂ ತಿಳಿಯುವಂತೆ ಹೇಳಿರುವನು. ಇದೇ ಅವನ ಲೋಕಪ್ರಿಯತೆಗೆ ಮುಖ್ಯಕಾರಣವೆಂದು ಹೇಳಬೇಕು.

ಈ ತರದ ಗ್ರಂಥಗಳು ಪಾಶ್ಚಾತ್ಯ ಭಾಷೆಯಲ್ಲಿ ಬಹಳವಾಗಿವೆ. ಇವುಗಳಲ್ಲಿ ಜಗತ್ತಿನ ನಾನಾತರದ ವ್ಯವಹಾರಗಳು ನಾನಾದೃಷ್ಟಿಯಿಂದ ವಿವೇಚಿಸಲ್ಪಟ್ಟಿರುವವು. ಇದರಂತೆಯೇ 'ಸರ್ವಜ್ಞನಾದರೂ ವ್ಯವಹಾರವನ್ನವಲಂಬಿಸಿ ತನ್ನ ನೈತಿಕ ತತ್ವಗಳನ್ನು ಬೋಧಿಸಿದ್ದಾನೆ. ಇವನು ಜಗತ್ತಿನಲ್ಲಿ ನಡೆಯುವ ನಾನಾವ್ಯವಹಾರಗಳನ್ನು ಬಹು ಚೆನ್ನಾಗಿಯೂ, ಸೂಕ್ಷ್ಮವಾಗಿಯೂ ವಿವೇಚಿಸಿರುವನು. ಇದಲ್ಲದೆ ಅವನು ಅವುಗಳ ಗುಣಾವಗುಣಗಳನ್ನು ಚೆನ್ನಾಗಿ ಅರಿತುಕೊಂಡು ಅವುಗಳನ್ನು ಬಹು ಮಾರ್ಮಿಕ ರೀತಿಯಿಂದ ತನ್ನ ಉಕ್ತಿಗಳಲ್ಲಿ ವಿವರಿಸುತ್ತಾನೆ. ಇದರಲ್ಲಿ ಅವನ ಉದ್ದೇಶವು ಜನರಿಗೆ ಜಗತ್ತಿನ ನಿಜಸ್ಥಿತಿಯನ್ನು ತಿಳಿಸಿ ಅವರನ್ನು ಯುಕ್ತಮಾರ್ಗಕ್ಕೆ ಹಚ್ಚುವದೇ ಇರುತ್ತದೆ. ಸರ್ವಜ್ಞನಂತೆಯೇ ವಚನಕಾರರಾದರೂ ತಮ್ಮ ಉಕ್ತಿಗಳಲ್ಲಿ ನೀತಿಯ ತತ್ವಗಳನ್ನು ಬೋಧಿಸಿದ್ದಾರೆ. ಸರ್ವಜ್ಞನಿಗೂ, ವಚನಕಾರರಿಗೂ ಭಾವಸಾಮ್ಯತೆ ಹಾಗೂ ವಿಚಾರ ಸಾಮ್ಯತೆ ಬಹಳ ಇರುತ್ತದೆ. ಧಾರ್ಮಿಕ ವಿಷಯದಲ್ಲಿ ಸರ್ವಜ್ಞನು ವಚನಕಾರರ ಅನುಯಾಯಿಯಾಗಿದ್ದರೂ ಇವನ ನಿರೂಪಣಾಪದ್ಧತಿಯಲ್ಲಿ ಮಾತ್ರ ಒಂದು ಮಹತ್ವದ ಅಂತರವು ತೋರಿಬರುತ್ತದೆ. ಅದೇನೆಂದರೆ ಸರ್ವಜ್ಞನು ತನ್ನ ನೀತಿಯ ತತ್ವಗಳನ್ನು ವ್ಯಾವಹಾರಿಕ ದೃಷ್ಟಿಯಿಂದ ವಿವೇಚಿಸಿದ್ದಾನೆ. ಆದರೆ ವಚನಕಾರರು ಕೇವಲ ಧಾರ್ಮಿಕ ದೃಷ್ಟಿಯಿಂದ ಅವುಗಳನ್ನು ವಿವೇಚಿಸಿದ್ದಾರೆ.' ಇದರಿಂದ ಸರ್ವಜ್ಞ ವಚನಗಳಂತೆ ಹೆಚ್ಚಿಗೆ ವ್ಯಾಪಕವನ್ನು ಹೊಂದಿಲ್ಲ. ಸಕಲ ಧರ್ಮದವರಿಗೂ ಪ್ರಿಯವಾಗಿವೆ.

'ಸರ್ವಜ್ಞನು ಯಾವ ವಿಷಯವನ್ನು ತೆಗೆದುಕೊಂಡರೂ ತನ್ನ ನಾವುಕ್ಕೆ ಸರಿಯಾಗಿ ಅದರಲ್ಲಿ ತನ್ನ ಬಹುಶ್ರುತತ್ವವನ್ನೂ ತೋರಿಸಿದ್ದಾನೆ. ಮತ್ತು ಟೀಕಾತ್ಮಕ ರೀತಿಯಿಂದ ಅವುಗಳನ್ನು ಮರ್ಮಭೇದಕವಾಗಿ ವಿವೇಚಿಸಿದ್ದಾನೆ. ಆದ್ದರಿಂದ ಸರ್ವಜ್ಞನು ಕನ್ನಡದಲ್ಲಿ ಒಬ್ಬ ಮಹತ್ವದ ಟೀಕಾತ್ಮಕ ವಿವೇಚನಾಕಾರನಾಗಿ ಹೋಗಿರುವನೆಂದು ಹೇಳಬಹುದು.'

ಅವನ ವಿವೇಚನಾ ಪದ್ಧತಿಯಾದರೂ ವಿಷಯಗಳನ್ನೂ ಮನಸ್ಸಿನಲ್ಲಿ ಬಹು ದೃಢವಾಗಿ ಮೂಡಿಸುವಂಥಾಗಿರುತ್ತವೆ. ಇದಕ್ಕೆ ಅವನ ಭಾಷಾಸರಣಿಯು ಬಹು ಸೊಗಸಾಗಿರುವುದೇ ಕಾರಣ. ಅವನ ವಾಕ್ಯಗಳಲ್ಲಿ ದೊಡ್ಡ ದೊಡ್ಡ ಗಡುಚಾದ ಶಬ್ದಗಳಾವುವೂ ಇರುವುದಿಲ್ಲ. ಯಾವಾಗಲೂ ಅವನು ಅಚ್ಚಗನ್ನಡ ಸಣ್ಣ ಸಣ್ಣ ಶಬ್ಧಗಳನ್ನು ಪ್ರಯೋಗಿಸುವುದುಂಟು. ಅಲ್ಲಲ್ಲಿ ಪ್ರಾಸುಗಳನ್ನು ಜೋಡಿಸುವ ಅವನ ಶಾಣ್ಮೆಯು ಬಹು ಮಿಗಿಲಾದದ್ದು. ಇದರಿಂದ ಅವನ ಪದ್ಯಗಳು ಅಚ್ಚುಕಟ್ಟಾಗಿಯೂ ಅಂದವಾಗಿಯೂ ಇವೆ. ಅವುಗಳನ್ನೋದಿದ ಕೂಡಲೇ ಅವು ಗಾದೆಯ ಮಾತುಗಳೋ ಏನೋ ಎಂಬಂತೆ ಭಾಸವಾಗುತ್ತವೆ. ಈ ಮೇರೆಗೆ ಸರ್ವಜ್ಞನು ಕನ್ನಡ

ನಾಡಿನಲ್ಲಿ ಒಬ್ಬ ನೀತಿಜ್ಞನೂ, ವ್ಯವಹಾರವಿದನೂ, ಟೀಕಾಕಾರನೂ ಆಗಿಹೋಗಿದು ಕನ್ನಡ ವಾಙ್ಮಯದಲ್ಲಿ ಅವನು ಅತ್ಯುಚ್ಚ ಪದವಿಯನ್ನು ಹೊಂದಿದ್ದದ್ದಾನೆಂದು ಹೇಳ್ಬಿ ತಕ್ಕದ್ದು.

**ರಾವ್ ಬಹದ್ದೂರ್, ಫ. ಗು. ಹಳಕಟ್ಟಿ,**

ಬಿ. ಎ., ಎಲ್.ಎಲ್. ಬಿ.,

(ಸರ್ವಜ್ಞ ವಚನಗಳು, ಸಾಹಿತ್ಯಾವೃತ್ತಿ ಮುನ್ನುಡಿ)

"Sarvajna is one of those poets whose artless and casual verses to experesses the better thoughts, which the common people feel but cannot express, that they have become the property and favourites of all, and are loved and quoted alikely ryot and trades man and wandering mandicant.........Sarvajna occupies much the same place in Kanarese Literature that Vemana does in Telugu, and Namdev (fourteenth century?) and Tukaram do in Marathi. Like then he preached the vanity of Idol-Worship, the inefficiancy of pilgrimages and of outward rites, and the need of sincerity in Life."

**—Edward P. Rice B. A.,**

"A History of Kannarese Literature" Page 72.

Among the most popular literary works in Kannada, in the post was a book of aphorisms by Sarvajna: Aphorist c writing seems to have developed in the three oldest of the Dravidian languages at some stage in the course of their history. Tamil literature has the verses of the Kural and of Avvaiyar and Telvgu has the aphorisms of Vemana, Sarvajna is the Representative of this tradition in Kannada.

Sarvajna's aphorisms are all put into a verse form of three lines. This like most verse in Kannada can be sung. The people in fact knew the aphorisms nearly always as sung and rarely by mere reading. Sarvajna appears to have been a religious mendicant of the Veerasaiva faith. In all likli-hood he made the pieces as the day's incidents suggested thought & evoked feeling. It is possible also that he went about singing his one peces. The words is the, aphorisms are always simple. The structure of the verse. is equally simple but, shows great skill in composition Common words are used to express very difficult ideas and are invariably successful. This Sarvajna achieves by giving them a setting of other words equally simple. He, as it were, puts together form simple words and makes a 'star' It was the felicity of expression combined ith the profundity of the wisdom behind that brought popularity, to his verse. This teacher was the popular, embodiments of the culture, which developed in Karnatak Country during three or four centuries.

**—By Masti Venkatesha Iyengar, M.A.,**
"Popular Culture in Karnataka" Page 93–94.

## ಅನುಬಂಧ ೨.

# ಕೆಲವು 'ಸರ್ವಜ್ಞ'ಗಳು

ಸರ್ವಜ್ಞ ವಚನಗಳ ನುರ್ವರೆಯೊಳೋದುತ್ತೆ !
ಗರ್ವಮಾತ್ಸರ್ಯ ದುರ್ಗುಣಂಗಳ ತೊರೆದು ।
ಸರ್ವರುಂ ಬಾಳ್ಗೆ ಸರ್ವಜ್ಞ ॥ ೧ ॥

ವೇದಶಾಸ್ತ್ರಂಗಳನು ಸಾಧಿಸುವ ಶ್ರಮವೇಕೆ ।
ಸಾಧು ಸರ್ವಜ್ಞಮೂರುತಿಯ ವಚನಗಳ ।
ಸಾದರಿಸಿ ಕೇಳಿ ಸರ್ವಜ್ಞ ॥ ೨ ॥

ಕನ್ನಡದ ಜನವೆಲ್ಲ ಚೆನ್ನಾಗಿ ಲಾಲಿಸಿರಿ ।
ಕನ್ನಡರ ಜಾಣ ಸರ್ವಜ್ಞ ನೊರೆದ ಆ-
ಚೆನ್ನೆನಿಪ ನುಡಿಯ ಸರ್ವಜ್ಞ ॥ ೩ ॥

ಆವ ಭಾಷೆಯೊಳುಂಟು ಈ ವಿಧದ ವಚನಗಳು ।
ಕೋವಿದರೆ ಪೇಳಿ ಭಾಗ್ಯವಲ್ಲವೆ ನಮ್ಮ ।
ಭೂವಿನುತ ನುಡಿಯು ಸರ್ವಜ್ಞ ॥ ೪ ॥

ಕನ್ನಡಿತಿ ಯೆಂಬುವಳು ಬನ್ನಕೊಳಗಾಗಿಹಳು ।
ತನ್ನಗೆಳತಿಯರ ಸರಿದೊರೆಗೆ ಬಾರದಲೆ ।
ಕಣ್ಣೀರೊಳಿಹಳು ಸರ್ವಜ್ಞ ॥ ೫ ॥

ಜಾತಿ ಜಾತಿಗಳಲ್ಲಿ ಜಾತಿಮತ್ಸರವುಂಟು ।
ಪಾತಿನೊಳಗುಂಟು ವೈರಾಗ್ಯ ಬಹುಜನಕೆ ।
ನೀ ತಿಳಿದು ನೋಡ ಸರ್ವಜ್ಞ ॥ ೬ ॥

ನಿನ್ನ ಕಾಲದ ಚೆಲುವು ಇನ್ನಿರ್ಪುದೆಂಬೆಯಾ ।
ಕುನ್ನಿ ಮಾನಿಸರು ತುಂಬಿಹರು ನಾಡಿನೊಳು
ಅನ್ನಯವೆ ಹಿರಿದು ಸರ್ವಜ್ಞ ॥ ೭ ॥

ಲಿಂಗವಂತರ ಮತವು ಭಂಗಕೊಳಗಾಗಿಹುದು ।
ಮಂಗಮಾನಿಸರು ಅರಿವರೇ ಲೋಕದೊಳು ।
ಲಿಂಗಾಂಗದಿರವ ಸರ್ವಜ್ಞ ॥ ೮ ॥

ವೀರನಿನ್ನಯ ನಾಡು ಘೋರದುಗುಡದೊಳಿಹುದು ।
ಆರಿದಕೆ ದಾರಿ ತೋರುವರೊ ನಾ ಕಾಣೆ !
ಧೀರ ನೀ ಬಾರ ಸರ್ವಜ್ಞ ॥ ೯ ॥

ಭಾರತೀಯರಿಗೆಲ್ಲ ಭೂರಿ ಒಡತನವಾಯ್ತು ।
ಸಾರತರ ಮಾದ ಭಂಗಾರವೆಲ್ಲ ಕೇಳ್ ।
ಸೂರೆ ಹೋಗಿಹುದು ಸರ್ವಜ್ಞ ॥ ೧೦ ॥

ಗುಡಿಗಳನು ಕಟ್ಟುವರು ಮಡಗುವರು ಗೊಂಬೆಗಳ ।
ಬಡವರನು ಮರೆತು ಸಡಗರದಿ ಪೂಜಿಪರ ।
ಮೃಡನು ಮೆಚ್ಚುವನೆ ಸರ್ವಜ್ಞ ॥ ೧೧ ॥

ಗುರುಗಳೊಳಗೆನಿಬರೊ ಬರಿಯಡಂಭದೊಳಿಹರು ।
ಹರಿಗೋಲು ತೂತುಬಿದ್ದಂತೆ ಅವರಿರವು ।
ಧರೆಗೆ ಕೇಡಕ್ಕು ಸರ್ವಜ್ಞ ॥ ೧೨ ॥

ಕನ್ನಡದ ಸೌಭಾಗ್ಯವಿನ್ನೊಮ್ಮೆ ಮೆರೆಯಲ್ಕೆ ।
ಕನ್ನೈದಿಲೆಗೆ ಚಂದ್ರನುದಯಮಂ ಕಂಡಂತೆ ।
ಇನ್ನೊಮ್ಮೆ ಬಾರ ಸರ್ವಜ್ಞ ॥ ೧೩ ॥

ಕ್ರಿಸ್ತಮತ ಸಂಭವನು ಉತ್ತಂಗಿ ಎಂಬುವನು ।
ಸಿಸ್ತಿನಿಂ ನಿನ್ನ ವಚನಗಳ ಸರಿಗೊಳಿಸಿ ।
ಕೀರ್ತಿಯಂ ಪಡೆದ ಸರ್ವಜ್ಞ ॥ ೧೪ ॥

'**ಶೂಲಪಾಣಿ**'